೫.

# ವಸ್ತುವಿಮರ್ಶೆ

ನೇಮಿಚರಿತ್ರೆ ನೇಮಿಚಂದ್ರನ 'ಅರ್ಧನೇಮಿ ಪುರಾಣ ದ ಕಥಾಪ್ರಟ್ಟಕಗಳನ್ನು ಅಥವಾ ಸನ್ನಿವೇಶಗಳನ್ನು ನೇಮಿಚರಿತ್ರೆ, ಹರಿವಂಶದ ಚರಿತ್ರೆ ಮತ್ತು ಕುರುವಂಶದ ಚರಿತ್ರೆ ಎಂಬ ಮೂರು ಬಿಭಾಗಗಳಲ್ಲಿ ಪರಿಶೀಲಿಸುವುದು ಸಾಧ್ಯ.

ನೇಮಿಚರಿತ್ರೆ ಭಾಗದಲ್ಲಿ ತಿರ್ಥಂಕರನಾದ ನೇಮಿನಾಥನ ಪೂರ್ವಭವಗಳಾನ್ನು ವೃತ್ತ್ಯಾಂತವೇ ಗಣ್ಯವಾದದು .ಇದರ ಕ್ರಮಾಗತ ಸಂದರ್ಭಗಳು ಎಂದರೆ : (೧) ನೇಮಿನಾಥನ ಅಪರಾಜಿತಭವದ ತಂದೆ ತಾಯಿಗಳಾದ ಅರ್ಹದ್ದಾಸ ಜಿನದತ್ತೆಯರ ಪ್ರಾರಂಭಿಕ ಚರಿತ್ರೆ (೨) ಅಪರಾಜಿತಭವ ವೃತ್ತಾಂತ (೩) ಚಿಂತಾಗತಿಭವ ವೃತ್ತಾಂತ (೪) ಮಾಹೇಂದ್ರಕಲ್ಪಜ ಸಾಮನಿಕದೇವ ಭಾವವೃತ್ತಾಂತ (೫) ವಿಂದ್ಯಕಭವ ವೃತ್ತಂತ (೬) ಇಭ್ಯಕೇತುಭವ ವೃತ್ತಂತ (೭) ಸೌಧರ್ಮಕಲ್ಪಜ ಶ್ರೀದೇವ ಭವವೃತ್ತಾಂತ (೮) ಅಚ್ಯುತೇಂದ್ರ ಭವವೃತ್ತಾಂತ (೯) ಸುಪ್ರತಿಷ್ಠ ಭವವೃತ್ತಾಂತ (೧೦) ಅಹಮಿಂದ್ರ ಭವವೃತ್ತಾಂತ ಇವುಗಳಲ್ಲಿ ಕಥಾದೃಷ್ಟಿಯಿಂದ ಅರ್ಹದ್ದಾಸ – ಜಿನದತ್ತೆಯರ ಚರಿತ್ರೆಯೊಡಗೂಡಿ ಅಪರಾಜಿನತ ವೃತ್ತಾಂತ , ಚಿಂತಾಗತಿಯ ವೃತ್ತಾಂತ , ವಿಂದ್ಯಕ ವೃತ್ತಾಂತ ಹಾಗೂ ಇಭ್ಯುಕೇತುವೃತ್ತಾಂತ ಇವು ಮತ್ರವೇ ಮುಖ್ಯವಾದವು. ಇವುಗಳನ್ನು ನೇಮಿಚಂದ್ರ ಕವಿಯ ಕಾವ್ಯದೃಷ್ಟಿಯುಅ ಶಕ್ತಿ ಸಾಮರ್ಥ್ಯ ಗಳ ದೃಷ್ಟಿಯಿಂದಲೂ ಪರಿಶೀಲಿಸುವುದರಿಂದ ಪ್ರಯೋಜನವಿದೆ. ಅರ್ಹದ್ದಸ್‌ನ ಪ್ತ್ನಿ ಜಿನದತ್ತೆ ಪುತ್ರಕಾಮ್ಯಳಾಗಿ ಹಂಬಲಿಸುವ ಸನ್ನಿವೇಶ ಅಪರಾಜಿತನ ಜನನಸಂದರ್ಭದ ರಚನೆಗೆ ಒಳ್ಳೆಯ ಪೂರ್ವರಂಗವೆಂಗಂತಿದೆ. ಅರ್ಹದ್ದಾಸನ ಸತ್ತಾತಿಶಯ , ಪತ್ನೀಪ್ರೇಮ ಮತ್ತು ಜಿನದತ್ತೆಯ ಉತ್ಕಟ ಪುತ್ರದೋಹಳ ಇವನ್ನು ಕವಿ ಚೇತ್ಜೋಹಾರಿಯಾಗಿ ಚಿತಿಸಿದ್ದಾನೆ. ವಿವರಗಳು ಸ್ವಲ್ಪ ಹೆಚ್ಚು . ಸಾಂಪ್ರದಾಯಿಕ ಕಾವ್ಯ ದೃಷ್ಟಿ ಕವಿಸಮಯವನ್ನು ಉಬ್ಬರದಲ್ಲಿ ಆಹ್ವಾನಿಸಿದೆ ಎಂಬುದು ನಿಶ್ಚಯ. ಆದರೆ ಚಾವುಂಡರಾಯ ಪುರಾಣ, ಕರ್ಣಪಾರ್ಯನ ನೇಮಿನಾಥ ಪುರಾಣಗಳ ಕಾವ್ಯಾರಂಭಗಗಳಾಲ್ಲಿ ಕಂಡುಬರದಿದ್ದ ಒಂದು ಅನನ್ಯ ರೀತಿಯ ರಸಾತ್ಮಕ ವಾಕ್ಯ ನಿನ್ಯಾಸದಿಂದ ವತ್ಸಲ್ಯ ಕಾರುಣ್ಯಗಳ ಪ್ರಸನ್ನಪರಿವೇಷವೊಂದು ನಿರ್ಮಾಣಗೊ,ಂಡಿರುವುದರಿಂದ ಅದರ ಮುನ್ನಲೆಯಲ್ಲಿ ಅಪರಾಜಿತನ ವೃತ್ತಾಂತ ಬೆಳ್ಳಗೆ ಬೆಳೆಗುವುದು ಸಾಧ್ಯವಾಗಿದೆ.

ಅರ್ಹದ್ದಾಸ ಸಿಂಹಪುರದ ಅರಸು ; ನಿಷ್ಠೆಯ ಜಿನಭಕ್ತ. ಆತನ ನಿಭವವನ್ನೂ ಜಿನಭಕ್ತಿಯನ್ನೂ ನೇಮಿಚಂದ್ರ ಉತ್ಸಾಹದಿಂದ ವರ್ಣಿ ಸಿದ್ದಾನೆ. ಮುಂದಿನ ಎರಡು ಪಟ್ ಪದ್ಯಗಳಿಂದ ನಾವು ಅದನ್ನು ತಿಳಿಯಬಹುದು :

ಮದನ, ರೂಪಿಂಗೆ ದಾಸಂ ಮನೆಗೆ ನೃಪನ ಪುಣ್ಯೋದಯಂ ದಾಸನರ್ಕಂ

ಮದವತ್ತೇಜಕ್ಕೆ ದಾಸಂ ವಿಧು ವದನಯಶ್ರೀಗೆ ದಾಸಂ ಕೃತಾಂತಂ

ಕದನಕ್ರೋಧಕ್ಕೆ ದಾಸಂ ಗುರುಆಭಜಕ್ಕೆ ಜಯಂ ದಾಸನೆಂದಂದದಿನ್ನಾ

ರ್ಪದೆದರ್ಹ ದ್ದಾಸಭೂಪಂಗರಸಕದಿಂದಾಸೆಯಂ ದಸರಾ(ಗ) ರ್ ॥

ಪೂಸಲ್ ಮೇಯ್ಗರ್ಹದಂಘ್ರಿದ್ವಯಪರಿಚಯಪೂತೋತ್ತಮದಿವ್ಯಗಂಧಂ

ಸೇಸಿಕ್ಕಿಲ್ ಗಂಧಶಾಲ್ಯಕ್ಷತಶಮನಿಶಂ ಪುಷ್ಪದಾಮುಂ ತುಱುಂಬಲ್

ಸೀಸಕ್ಕಿಂಬಾದುದೆಂಬಂದಲೇ ಕುಲವಱಿಯಿಂ ಬಂದ ದಾಸತ್ವಮರ್ಹ

ದ್ದಾಸಂಗೇನಣ್ಣ ನಾಜ್ವರ್ತನಮೆ ಸಕಲಪೃಥ್ವೀಪತಿಪ್ರಾರ್ಥನೀಯಂ ॥

ಅರ್ಹದ್ದಾ್ಡಸನ ಸತಿ ಜಿನದತ್ತೆಯು ಅನುರೂಪಳಾದ ಸತಿ, ರೂಪವತಿ, ಪರಮ ಜಿನಭಕ್ತೆ . ಈ ವಿಷಯನನ್ನು ಹೇಳುವ ಭಾಗದಲ್ಲಿ ವಿಶೇಷವೆನ್ನಿಲ್ಲ ಅದು ಕವಿಸಮಯದ , ಸಂಪ್ರದಯದ ಭಾಗ ಇವರು ಅನ್ಯೋನ್ಯ ದಾಂಪತ್ಯದಲ್ಲಿ ರುವಾಗ ಒಂದು ಮಧ್ಯಾಹ್ನದಂದುಮುನಿಚರ್ಯೆಯ ಮೇಳೆಯಲ್ಲಿ ಮಲಧಾರಿ ಮುನಿಗಳ ಅಗಮನವಾಯಿತು. ಇವರನ್ನೂ ಕವಿ ವರ್ಣಿಸಿದ್ದಾನೆ. ಇದು ಸಹಕವಿಸಮಯದ ಭಾಗವೇ . ಈ ಬಗೆಯ ನಿರೂಪಣೆಯನ್ನು ಇತರ ಜಿನಪುರಾಣಗಳಲ್ಲಿಯೂ ಕಾಣಬಹುದು. ಉದಾಹರಣೆಗೆ ನೋಡಿ:

ಹರಿಯಂ ಕರಿಯಂ ಪುಲಿಯುಂ

ಹರಿಣಿಯುವೋಂದಾಗಿ ಮುಚ್ಚಿ ಬೆಚ್ಚದೆ ಬೆನ್ನೊಳ್

ಬರೆ ಗಡಣದೊಳಾ ನಗರ

ಕ್ಕರಣ್ಯದಿಂ ಚರಿಗೆಗೊಟ್ಟನಂಗಜಮಲ್ಲಂ ॥

ಈಮುನಿಯನ್ನು ಚರಿಗೆಗೆಂದು ಜಿನದತ್ತೆ ನಿಲ್ಲಿಸಲು ಬಯಸಿದಳು, ಅದರೆ ಆತ, ಹಾಗೆ ನಿಲ್ಲಿಸುವುದಾದರೆ ಆಕೆಯ ಪತಿಯೊ ಪುತರೋ ನಿಲ್ಲಿಸಲಿ ಹೆಂಗಸರ ಆಹ್ವಾನವನ್ನೊಪ್ಪಿಕೊಳ್ಳುವುದು ತಮ್ಮಂತಹ ಯತಿಗಳಿಗೆ ತಕ್ಕುದಲ್ಲ್ಲ ಎಂದು ತಿಳಿಸಿದರು. ಹಾಗೆ ತಿಳಿಸಿ ಹರಸಿ ಹೊರಟುಹೋದರು. ಈ ಭೋಗಾಂತರಯದ ವ್ಯಥೆ

, ಪುತ್ರವಿಹೀನೆಯಾಗಿದ್ದ ಆಕೆಯ ವ್ಯಥೆಯನ್ನು ಇನ್ನೂ ಹೆಚ್ಚಿಸಿತು. ಆಕೆ ತನ್ನ ಕೆಳಾದಿ ಕಲಾಧರೆಯೊಂದಿಗೆ ಆ ವ್ಯಥೆಯನ್ನು ತೋಡಿಕೊಂಡಳು. ಕವಿಸಮಯಾದ ಸಿದ್ಧಸಾಮಗ್ರಿಯನ್ನು ಬಳಸಿಕೊಂಡೇ ಕವಿ ಇಲ್ಲಿ ಮನ್‌ಮಿಡಿಯುವಂತೆ ಪುತ್ರವತ್ಸಲುಅವನ್ನು. ಹಂಬಲಿಸುವ ತಾಯಿಯ ಎದೆಯ  ಉಮ್ಮಳವನ್ನು, ಸಮರ್ಥವಾಗಿ ಚಿತ್ರಿಸಿದ್ದಾನೆ  ಈ ಒಂದು ಪದ್ಯವನ್ನಿಲ್ಲಿ ಉದಾಹರಿಸಬಹುದು :

ನಿಱಿಯ ಸೆಱಂಗನೋಸರಿಸಿ ಕೆಂದಳದಿಂದಮೆ ಕರ್ಚಿಕೊಂಡು ತೂ

ಪಿ ಱಿದೊಗೆದಱ್ಕೆಂದೊಗೆದ ಪೆರ್ವೊಲೆಯಂ ಬೆರಲಿಂದವುಂಕಿ  ಬಾ

ಯ್ದೆಱೆಗಿದಿರೀಯೆ ಪಾಲ್ವೊರೆದ ನುಣ್ಪೆರಲಂ ಮೊಲೆಗೆತ್ತು ಪೀರ್ದು ಕ

ಣ್ದೆಱೆಯದ ಕಂದನದೆನಗೆ ಕಣ್ದೆಱೆಯಿಪ್ಪನೊ ಮಂದಹಾಸಮಂ ॥

ಜಿನದತ್ತೆಯ ಅಳಲು ಅರ್ಹದ್ದಾಸನಿಗೆ ಕಾಳಧರೆಯ ಮೂಲಕ ವಿದಿತವಾಗುತ್ತದೆ. ಆತನಿಗಾದರೂ ಅದೇ ಚಿಂತೆ . ಇನ್ನೂ ರಾಜ್ಯದ ಜವಾಬ್ಧಾರಿಯನ್ನು ಹೊರಲು ಸಮರ್ಥನಾದ ಪುತ್ರನಾಗಿರದ ಚಿಂತೆ ಬಾಧಿಸುತ್ತಿದ್ದಿತು. ಈಗ ಪತಿಪತ್ನಿಯರಿಬ್ಬರೂ ಕೂಡಿಯೇ ಈ ವಿಷಯವನ್ನು ಕುರಿಟ್ ಹು ವಿಚಾರಮಾಡಿದರು. ಆತ ಪತ್ನಿಯನ್ನು ಉದ್ದೇಶಿಸಿ ಆಡಿದ ಈ ಮಾತು ಸೊಗಸಾದುದು :

ಎನ್ನ  ವಿಷಾದವಲ್ಲದೆ ವಿಚಾರಸೆ ನಿನ್ನ್ ವಿಷಾದವಲ್ಲಿದೇ

ಕೆನ್ನತಿಭಿನ್ನವಾಯ್ತು ಮಾಗಿಭಾರದಿನೆನ್ನ ಭುಜಂ ತನೂಜನೊ

ರ್ವನ್ನಿನಗಾದೊಡಾ ಪೊಱೆಯನೆತ್ತಿ ಸುತ್ತಾದ್ರಿಗೆ ಬರ್ದನಿಂದು ತೋ

ಳನ್ನಿಮಿರ್ದಪ್ಪೆನುಬ್ಬೆಗಮಿದೆನ್ನದೊ ನನ್ನದೊ ಪೇಱ್ ಮನಃಪ್ರಿಯೇ ॥

ಆ ದಂಪತಿಗಳಿಗೆನಿನಯನಿಧಿಯೂ ಭಾಗ್ಯವಂತನೂ ಜಿನಶಸನದೀಪಾಕನೂ ಆದ ಪುತ್ರನು ಜನಿಸುತ್ತನೆ. ಎಂದು ಕುಲಗುರುಗಳಾದ ನಿಮಿತ್ತಜ್ಯೋತಿಗಳು ಭವಿಷ್ಯವನ್ನು ನುಡಿದಿದ್ದರು. ಅದಕ್ಕೆ ಗುರುತನ್ನೂ ಸೂಚಿಸಿದ್ದರು. ಈ ವಿಷಯವನ್ನು ಈ ಮೊದಲೇ ಅವರನ್ನು ಸಂದರ್ಶಿಸಿ, ಪ್ರಾರ್ಥಿಸಿ ತಿಳಿದುಕೊಂಡಿದ್ದ ಅರ್ಹದ್ದಸನು ಪತ್ನಿಗೆ ತಿಳಿಸಿ ಆಕೆಯನ್ನು ಸಂತೋಷಗೊಳಿಸಿದನು. ತಮಗೆ ಹುಟ್ಟಲಿರುವ ಮಗನು ಮುಂದೆ ಹರಿವಂಶದಲ್ಲಿ ಖ್ಯಾತನಾಗಲಿರುವ ಸಾಕ್ಷಾತ್ ನೇಮಿನಾಥ ಜಿನನ ಪೂರ್ವಭಾಬಜೀವವೇ ಎನ್ನುವುದು ಅವರ ಹೆಚಿವಿನ ಸಂತೋಷಕ್ಕೇ ಕಾರಣಾವಾಗಿದ್ದಿತು. ಇದಕ್ಕಾಗಿ ಅರ್ಹದ್ದಸನು ಅಷ್ಟಾಹ್ನಿಕ ಮಹಾಮಹವನ್ನು ಜರುಗಿಸುತ್ತಿದ್ದನು; ಪತ್ನಿ ಜಿನದತ್ತೆ ಚಂದ್ರಪ್ರಭ ಜಿನನ ಪೂಜೆಯಲಿ ನಿರತಳಾಗಿದ್ದಳು.

ಇಲ್ಲಿಂದ ಮುಂದೆ ಜಿನದತ್ತೆಯ ಋತುಸ್ನಾತೆಯಗಿ ಪತಿಯ ಸಮಾಗಮದಿಂದ ಆಕೆ ಗರ್ಭವತಿಯಾದುದರ ಸಾಂಪ್ರದಯಿಕ ಚಿತ್ರಗಳು ಬಂದಿವೆ. ಅಲ್ಲದೆ ಜೈನಪುರಾಣಗಳಲಿ ಸಹಜವಾಗಿ ಕಾಣಿಸಿಕೊಳ್ಳುವ, ಸ್ವಪ್ನಫಲಕಥನ ಹಾಗೂ ಗರ್ಭದ ಬಳವಿಯ ವರ್ಣನೆ ಮತ್ತು ಬಾಲಲೀಗೆಯ ವರ್ಣನೆಗ್ಳು ಬಂದಿವೆ. ಇವು ತುಂಬ ಸಂಕ್ಷೇಪವಾಗಿರುವ ಮೆಚ್ಚುತಕ್ಕುದಾಗಿದೆ. ಕಥೆಯ ಎರಡನೆಯ ಘಟ್ಟ ಅಪರಾಜಿತ. ವೃತ್ತಾಂತ . ಇದು ನೇಮಿನಾಥ ಭವಾವಳಿವ್ಯೂಹದಲ್ಲಿ ವಿಂಧ್ಯಕಾಭವದಿಂದ ಮುಂದುವರಿದು ಆರನೆಯ ಪೂರ್ವಭವ (ನೋಡಿ ನೇಮಿನಾಥ ಭವಾವಳಿ ನಕ್ಷೆ ) “ ಅಪರಾಜಿತ ಭವ ನೇಮಿನಾಥಭಾವವ್ಯೋವದ ಕೇಂದ್ರವರ್ತುಲವಿದ್ದಂತೆ .ಅಪರಾಜಿತ ಚರಣಮುನಿ ಯುಗಾಳದಿಂದ ತನ್ನ ಪೂರ್ವಭವಾಂತರಗಳನ್ನು ಕೇಳಿ ತಿಳಿಯುವುದೂ ಸಂಸಾರ ನಿರಸನಗೊಳ್ಳುವುದು ಕವಿಗೆ ಒಂದು ನಿಮಿತ್ತ ಆಮೂಲಕವಾಗಿ ಸಂಸಾರದ ಸುಳಿಯಲ್ಲಿ ಸಿಕ್ಕ ಜೀವ ಹೇಗೆ ಪುಣ್ಯಾಶ್ರವಲಾಭವಾಗಿ ರಾಗಮೋಹಗಳಿಂದ ಮುಕ್ತವಾಗಿ ಮೇಲೇರುವುದು ಎನ್ನುವುದನ್ನು. ದೃಷ್ಯ ಗೊಳಿಸುವುದೇ ಆತನ ಗುರಿ.

“ ಮಂದಾರದ ಸಸಿಯೇಸಿದಿಪಂದಿನಭಿಮಾನುಮೇರು ತೊಟ್ಟಿಲೋಳೆಸೇದಂ ಎಂಬುದಾಗಿ ಅಪರಾಜಿತನ ಶೈಶವವನ್ನು ವರ್ಣಿಸಲು ತೊಡಗಿದ ಕವಿ ,

ಆ ಕುಮರಂಗೆ ಬಾಜನೆ ಲಿಪಿವ್ರಜದೊಳ್ ಪದಾಸಿಧ್ಧಿಪಾಠಮಾ
ವ್ಯಾಕರಣಂ ಗಳೊಳ್ ಮತಿಯಳಂಕೃತಿಯೊಳ್ ಪರಪಕ್ಷದೂಷಣಾ
ಲೋಕನ ದುರ್ಕುತರ್ಕದೊಳಭಿಜ್ಞತೆಯಗಮದೊಳ್ ಪ್ರಸನ್ನಲೀ
ಲಾಕವಿತಾಗುಣಂ ಸಕಲಭಾಷೆಯೊಳಾದುದುತಜ್ಞರಂಜನಂ ॥

ಎಂದು ಆತನ ಯೌವ್ವನವನ್ನು ಆದರ್ಶಪಾತ್ರಚಿತ್ರನಕ್ಕೆ ಅನುಗುಣವಾಗಿ ವರ್ಣಿಸಿದ್ದಾನೆ. ಅಪರಾಜಿತನು ಪತ್ನಿ ಪ್ರೀತಿಮತಿಯೊಂದಿಗೆ ಸುಖದಾಂಪ್ಯದಲ್ಲಿದ್ದಾಗ ತಂದೆ ಆತನಿಗೆ ಯೌವರಾಜ್ಯಪಟ್ಟವನ್ನು ಕಟ್ಟಿ ತಾನು “ ಸುತವಿಭಕ್ತರಾಜ್ಯಭಾರನುಂ ಕಾಲವಿಭಕ್ತ ವಯೋಭಾರನುಮಾಗಿ ಪಂಜರದಿಂದರೇನುಸುಳ್ವ ಶಕುಂತನಂತೆ ಇರುತ್ತಿದ್ದನಂತೆ ! ಇದೇ ಸಮಯಕ್ಕೆ ವಿಮಲವಾಹನ ಜಿನಪತಿಯ ಸಮವಸರಣಸಭೇ ನೆರೆದು ,ಅಲ್ಲಿ ಧರ್ಮ ಶ್ರವಣ ಮಾಡುವಾಗ ಅರ್ಹದ್ದಾಸನಿಗೆ ರಾಜ್ಯಸುಖಸಾಕೆನಿಸಿ ಆತ ತಪಸ್ಸಿಗೆ ತೆರಳಿದನು. ಜಿನದತ್ತೆ ಸಂಯಮ ದತ್ತ ಚಿತ್ತೆಯಾದಳು. ಅಪರಾಜಿತ ಶ್ರಾವಕವ್ರತಗಳನ್ನು ಧರಿಸಿದನು. ಸ್ವಲ್ಪಕಾಲ ಸಂದಮೇಲೆ ವಿಮಲವಾಹನ ಜಿನನೂ ಅರ್ಹದಾಸ ಯತುಯೂ ಮುಕ್ತಿಗೆ ಸಂದ ವರ್ತಮಾನ ಬಂತು. ಅಪರಾಜಿತನಿಗೆ ಪಿತೃಭಕ್ತಿ ಕಾರಣವಾಗಿ ಮತಿಭ್ರಾಂತಿ ಕವಿದಂತಾಯಿತು. ತಂದೆ ಇರುವಲ್ಲಿಗೆ

ಹೋಗಿ ಆತನನ್ನು ಪ್ರತ್ಯಕ್ಷವಾಗಿ ಕಾಣಬಯಸಿದನಂತೆ ಇಂಥ ಚಿತ್ತಸ್ಥಿತಿಯಲ್ಲಿ ಇಂಥ ಬಯಕೆ ಸಹಜ . ಆದರೆ ' ಅದು ನಿನಗೆ ಸಾಧ್ಯಾವಾಗುವುದು ನಿನ್ನಏಳನೆಯ ಭವದಲ್ಲಿ ಎಂಬುದಾಗಿ ಆಕಾಶ ವಚನವಾಯಿತು. ಅದನ್ನವನು ಲಕ್ಷಿಸದೆ ಅಮರಗಿರಿಯತ್ತ ಸಸೈನ್ಯನಾಗಿ ಹೊರಟೇಬಿಟ್ಟ ಆಗ ಇಂದ್ರನು ಕುಬೇರನ ಮೂಲಕವಾಗಿ ಅರ್ಹದ್ದಾಸ ವಿಮಲವಾಹನವನ್ನು , ಮಾಯೇಯನ್ನೋಡ್ಡಿ, ಸಭಾಸಹಿತವಾಗಿ ತೋರುವಂತೆ ಮಾಡಿದನು. ಅಪರಾಜಿತನಿಗೆ ಸಮಾಧಾನವಾಯಿತು.

ಹೀಗಿರಲು ಫಾಲ್ಗುನ ನಂದೀಶ್ವರ ದ ಪೂಜಾಕಾಲ ಒದಗಿಬಂತು. ಅಪರಾಜಿತ ತನ್ನ ಪತ್ನಿ ಪ್ರೀತಿಮತಿಯನ್ನು ಕರೆದುಕೊಂಡು, ಪೂಜೆಗೆಂದು ಮನೋಹರೋದ್ಯಾನದ ತ್ರಿಭೂವನ ತಿಲಕವೆಂಬ ಹೊಂಬಸದಿಗೆ ಹೊರಟು ಬಂದನು ಅಲ್ಲಿ ಆ ಬಸದಿಗೆ ಪ್ರದಕ್ಷಿಣೆ ಬರುವಾಗ,ಚಾರಣಮುನಿಳಿಬ್ಬರ ದರ್ಶನವಾಯಿತು . ಅವರು ತನ್ನ ಪೂರ್ವ ಭವದ ಸಹಚರರೇ ಆದುದರಿಂದ ಅವರನ್ನು ಅವನ ಅಂತರಂಗ ಗುರುತಿಸಿತು.

ಎಲೆಯೋಳ್ಸುತ್ತಿದ ಮಲ್ಲಿಗೆ
ಯಲರಂ ಕಂಪಿಂದ ಮಳಿಯ ಮೂಗಱಿವವೋಲಾ
ಲಲಿತನಮನಮಱಿದುಧು ಕ
ಣ್ಮಲರಱಿಯದೆ ಮೋಹವಶದಿನ ಚಾರಣರಂ ॥

" ... ಮನದ ಬಚಬಱಿಯಱಿವೂಬಱಿಯ ಬೇಱಗನೆ ನೋಟದೊಳ್ ನಾಟಿಸೆ , ಸ್ವಲ್ಪ ಹೊತ್ತು ಇದ್ದು ಬಳಿಕ ಆ ಚಾರಣವನ್ನು ನಿಮ್ಮನ್ನೇಲ್ಲಿ ಯಾನುಂ ಕಂಡಱಿವಂತದಪೂದೆಲ್ಲಿ ಕಂಡೆಂ ಬೆಸಸಿಂ ಎಂದು ಆತ ಪ್ರಶ್ನಿಸಿದ ಚಾರಣ ಮುನಿಗಳಲ್ಲಿ ಒಬ್ಬಾತನೂ ಆ ಕಥೆಯನ್ನು ಆತನಿಗೆ ನಿರುಪಿಸಿದನು.

ಈ ನಿರೂಪಣೆಯೇ ಚಿಂತಗತಿಭವವೃತ್ತಾಂತದಕಥೆ. ವಿಂದ್ಯಕ ಭವದಿಂದ ತೊಡಗಿ , ಮುಂದಕ್ಕೆ ನೇಮಿನಾಥನ ನಾಲ್ಕನೆಯ ಭವದಕಥೆಯನ್ನಿಲ್ಲಿ ಹೇಳಿದೆ . ಕಥೆ ಎಂದಿನಂತೆ ಇಲ್ಲಿ ಜೈನಪುರಾಣ ಸಂಪ್ರದಯದಂತೆ ಸಾಗಿ , ಮಂದರಶೈಲ ಅಪರವಿದೇಹಗಳಿಂದ ಮೊದಲು ಮಾಡಿ ಸೂರ್ಯಪ್ರಭವೆಂಬ ಉತ್ತರ ವಿದ್ಯಾಧರಶ್ರೇಣಿಯ ನಗರದವರೆಗೆ ಸ್ಥಳ ಸನ್ನಿವೇಶಗಳ ಸಂಬಂಧವಾದ ವರ್ಣನೆಯಿಂದ ಕೂಡಿರುವುದು ಕಾಣುತ್ತದೆ. ವರ್ಣನೆ ಸಂಪ್ರದಾಯಿಕವಾದರೂ ಏನೋ ಒಂದು ಸೊಗಸಿರುವುದು ನೇಮಿಚಂದ್ರನು ಕಾವ್ಯಶಕ್ತಿಯ ಒಂದು ವಿಶೇಷ ಲಕ್ಷಣ. ಒಂದು ಉದಾ :

ಮಂದರಶೈಲದ ಪಡುವಲ್

ನಂದನವಳಕಾಳಿ ಕೊಳನೆ ಪೊಕ್ಕುಟ್ ಕೆಱ್ ಕಣ್

ಕುಂದಂ ಕುಚಮೆನೆ ವಸುಧಾ

ಸುಂದರಿಯ ಸುದೇಹಮೆನಿಪುದಪರವಿದೇಹಂ ॥

ಸೂರ್ಯಪ್ರಭ ನಗರದ ಅರಸನ ಹೆಸರು ಸೂರ್ಯಪ್ರಭಯೆಂದೇ ಅವನ ಪತ್ನಿ ಧರಿಣಿ ಇವರು ಮಕ್ಕಳು ಚಿಂತಗತಿ ,ಮನೋಗತಿ, ಮತ್ತು ಚಪಳಗತಿ ಇವರಲ್ಲಿ ಹಿರಿಯನಾದ ಚಿಂತಾಗತಿಯ ಅಗ್ಗಳಿಕೆಯನ್ನು ಕವಿ ಎಷ್ಟೇ ಅತ್ಯುಕ್ತಿಗಳಾಲ್ಲಿ ಹೇಗೆ ವರ್ಣಿಸಲಿ ಆತನು ಯುವಕನಾಗಿದ್ದಾಗ ಹೀಗಿದ್ದನೆಂದು ವರ್ಣಿಸುವುದು ಕಣ್ಣೆದುರು ಬಲಿಷ್ಟನೂ ಪುಟ್ಟನೂ ಸುಂದರನೂ ಆದ ತೇಜಸ್ವಿಯೊಬ್ಬನನ್ನು ತಂದು ನಿಲಿಸಿರುವಂತೆ ಓದುಗರಿಗೆ ಅನುಭವವಾಗುತ್ತದೆ.

ಘನಕೇಶಂ ದರಹಾಸವರ್ಷ ವದನಂ ತಾಮ್ರಾಧರಂ ಲೋಳಲೋ

ಚನವಾಜಾನುವಿಳಂಬಿ ಬಾಹು ಸುವಿಶಾಳೋಳರ ಸ್ಥಳಂ ತಪ್ತಕಾಂ

ಚನವರ್ಣಾಂ ತನುಮಧ್ಯನಾಥನತನುಪ್ರಾಯಂ ನವಾರೂಢಯೌ

ವನವೇಂನೋಡಿಸಿದತ್ತೊ ಮುಗ್ಧಾಖಚರಿನೇತ್ರತ್ರಿಭಾಗಂಗಳಂ ॥

ಚಿಂತಗತಿಯ ಭವಕಥನದಲ್ಲಿ ಕಥೆಗಿಂತ ವರ್ಣನೆಗೆ ಪ್ರಾಶಸ್ತ್ಯ . ವಾರ್ಣನೆಗಳಲ್ಲುಯೂ ಚಮತ್ಕಾರಿಕವದ ಕಲ್ಪೆನ್ಗ್ಗ ಹಾರಾಟ ಬಗೆಬಗೆಯ ಅಲಂಕಾರಗಳ ಮೆರೆವಣಿಗೆ ಮಂದರ ಶೈಲದಿಂದ ಹಿಡಿದು ಸೂರ್ಯಾಪ್ರಭ ನಗರದ ವರೆಗೆ ಸ್ಥಳ ಸನ್ನಿವೇಶಾದಿಗಳ ವರ್ಣನೆಗೆ, ಚಿತಾಗತಿ ಮತ್ತು ವಿಳಾಸಮತಿಯರ ಮಹಿಮಾತಿತಯಗಳ ಕಥನಕ್ಕೆ ಗಮನ ಬಹುವಾಗಿಸಂದಿದ್ದರೂ ಗತಿಸ್ಪಾರ್ಧೆಯ ವರ್ಣಮಯಚಿತ್ರಣದ ಹಿನ್ನೆಲೆಯಲಿ ಬಂದಿರುವ ವಿಳಾಸವತಿಯ ಭಗ್ನಪ್ರಣಯದ ಚಿತ್ರಣ ಮನೋವೇಧಕವಾಗಿ ಮೂಡಿದ್ದು ಒಲುಮೆಗೆ ಕವಿ ಬರೆದ ವ್ಯಾಖ್ಯೆ ಸಮರ್ಥವಾಗಿದೆ. ವಿಳಾಸವತಿ ಅರಿಂದಮಪುರದ ಅರಸು ಅರಿಂಜಯನಿಗೂ ಆತನ ಪತ್ನಿ ಅಜಿತಸೇನಾ ದೇವಿಗೂ ಮಗಳು ಯೌವನವತಿಯಾದ ಈಕೆ ಎಂಥವಳು?

ರತಿಯಂ ರೂಪಿಂಗೆ ಮೆಚ್ಚಳ್ ಸಿರಿಗೆ ಸ್ಸಿಟಿಯುವಂ ಪುಲ್ಗೆ ಕೈಲೊಳ್ಳಳ ಭಾ

ರತಿಯಂ ವಿದ್ಯಾಗುಣಕ್ಕೊಂದಡಕೆಗಮೆಣಿಸಳ್ ಕೇಳಿಮುತ್ಸೇಕಮಂ ಪಾ

ವರ್ತಿಯಂ ತನ್ನೊಂದು ಪೆಂಪಿಗರೆಗವಡಿಕೆಯಂ ಕೊಳ್ಳಳೀವೇಱ್ವಿನುದ್ವೃ

ತ್ತತೆಯಂ ಸೌಭಾಗ್ಯಸಂಪತ್ತಿಗೆ ಖಗನ ಮಗಳ್ ರಂಬೆಯಂ ಸಿಂಬೆಯೆಂಬಳ್ ॥

ಈ ವಿಳಾಸವತಿ ಗಗನಮನಸ್ಪರ್ಧೆಯಲಿ ಅತಿಶಯಸಾಮರ್ಥ್ಯವಿದ್ದವಳು ಎನ್ನುವುದನ್ನು ಕವಿ ಅತ್ಯುತ್ಸಾಹದಿಂದ ಅತ್ಯುಕ್ತಿಗಳನ್ನು ಬಳಸಿ ನಿರೂಪಿಸಿದ್ದನೆ. ಅಕೆಯ ಗಗನಗಮನದ ಮೇಗದ ರೀತಿ ಇಂದು :

ಅಮರಗಿರಿಶಿಖರದಿಂ ಪು

ಷ್ಪಮಾಲೆಯಂ ಬಿಟ್ಟು ಮೂಮೆಬಲಗೊಂಡಾ ಶೈ

ಲಮನವಳಿಳೆ ಮುಟ್ಟದ ಮು

ನ್ನಮೆ ಮಾಲೆಯನೆಯ್ದಿ ಪಿಡಿವಳೆನ್ನದೊ ವೇಗಂ ॥

ಇವಳ ಸ್ವಯಂವರ ಏರ್ಪಟ್ಟಿತು .ಸ್ವಯಂವರದ ವಿಧಾನವದರೂ , ಗಗನಮನದಲ್ಲಿ ಆಕೆಯನ್ನು ವೇಗದಲಿ ಮೀರಿಸುವವನೇ ಆಕೆಯ ಪತಿ ಎನ್ನುವುದಾಗಿತ್ತು. ಹಲವರಂತೆ ಚಿಂತಗರಿ ತನ್ನ ತಮ್ಮಂದಿರೊಡಗೂಡಿ ತಾನೂ  ಸ್ವಯಂವರಕ್ಕೆ ಬಂದನು. ಸ್ಪರ್ಧೆಯ ವಿಧಾನವನ್ನು  ವಿದ್ಯಧರ ಕುಮಾರರಿಗೆ  ಪ್ರಕಪಿಸಿದ ಮೇಲೆ ತನ್ನ ತಮ್ಮಂದಿರ ಪರಿಭವವನ್ನು ಪರಿಹರಿಸಲೆಂದು ಚಿಂತಾಗತಿಯೇ ಸ್ಪರ್ಧೆಗೆ ಸಜ್ಜಾದನು. ಆದರೆ ಆತನ ಚೆಲುವು ನಿಲವುಗಳಿಗೆ ವಿಳಾಸವತಿ ಮೊದಲ್ ೯ಮನಸೋತು ಹೋದಳು ಆಕೆಯೇನ್ನೋ “ ಮಿ,ಚಿನ ಬೊಂಬೆಯೆಂಬಿನಂ  ಹೊಳೆದು ಹಾರಿದಳು. ಆದರೆ ಚಿತಾಗತಿ “ ತನ್ನ ಪೆಸರಂ ನನ್ನಿಮಾಡಿ ಸ್ಪರ್ಧೆಯ ನಿಯಮವನ್ನು ಲೀಲಾಮತ್ರದಿಂದ ಪೂರೈಸಿದನು. ಹೂವಿನ ಮಳೆ ದೇವದುಂದುಭಿಧ್ವನಿಗಳಾದವು. ಸೋತ ವಿಳಾಸವತಿ ಆತನನ್ನೇ ವರಿಸಲು ಬಯಸಿ ಮಾಲೆಸೂಡಲು ಹೋದಾಗ ಆತ “ ಪಾವಂ ಕೊರೆಲೊಳಿಕ್ಕಲೆತ್ತಿದಂತಗಿದು ಪಾಱು ಹಿಂದೆ ಸರಿದನು. ತನ್ನ ತಮ್ಮಂದಿರ ಸಲುವಾಗಿ ತಾನು  ಗತಿಸ್ಪರ್ಧೆಯಲ್ಲಿ  ಗೆದ್ದಿರುವುದಾಗಿ ತಿಳಿಸಿ ಅವರಲ್ಲಿ ಒಬ್ಬನನ್ನು ವರಿಸುವಂತೆ ಆಕೆಗೆ ಸೂಚಿಸಿದನು. ಆಕೆಗೆ ವರಿಸದೆ ತನಗೆ ತುಂಬ ಆಶಭಂಗವಾಯಿತು. ಚಿಂತಾಗತಿ ತನ್ನನ್ನು ವರಿಸದೆ ತನಗೆ ಅಶಾಭಾಂಗವಾದಾಗ, ವಿಳಾಸವತಿ

ನೀರೇಜಿನಿಯೆನಿತಲರ್ದೇಂ

ಸಾರದೆ ಪೋದಂ ದಿನೇಶಾನಂತೆನಗಂ ನೀಂ ದೂರಪ್ರಿಯನದ್ಯೆ ಸಂ

ಸಾರಂ ವೃಥೆಯಾದುದೆಂ,ದು ಬೆಚ್ಚನೆ ಸುಯ್ದಳ್ ॥

ಹೀಗೆ ಸುಯ್ದು,

“ ಉತ್ತುಂಗ ನಿನಗಾಂ ಮುನಿಯಲೇಕೆ ಪಸೆಯೊಳ್ ಪಾವು ಕೊಂಡುದೆಂವಂತೆನಗೆ ನಿನ್ನಂತಪ್ಪ್ ಪುರುಷನಂ ದೊರೆಕೊಳಿಸಿ ಕಳಿಂಚುಮಾಡಿ ಕಳೆದ ದುರ್ವಿದಗ್ದ ವಿಧಾತ್ರಂಗೆ ಮಿನಿವೆನಾಂ ಮುನ್ನಂ ಬೇಱ ನೊ,ಂತೆನಿಲ್ಲಕ್ಕುಮರ್ಹದ್ದೇವನೊಂದು ಚರಣಕ್ಕೆ ಪೂವಂ ಮಿಗಿಯೇಱಿಸಿ ಮತ್ತೊಂದು ಚರಣಕ್ಕೆ ಏಱಿಸಲ್ಮಱೆದೆನಕ್ಕುಂ

ಎಂದು ಆತ್ಮ ನಿಂದೆ ಮಾಡಿಕೊಂಡಳು. ಆಕೆಯ ಶುದ್ಧಮನಸ್ಸಿನ ಸಮರ್ಪಣಭಾವದ ಈ ಪ್ರೇಮಾಂತಃಕರಣದಿಂದ ಒದುವವರ ಮನಸ್ಸುನ್ನು ಸೋಲೊಸುವುದಂತೂ ನಿಜ.

ವಿಳಾಸವತಿ ವಿರಕ್ತಿಗೊಂಡಳು; ರಾಮಾರ್ಜಿಕೆಯ ಬಳಿಯಲ್ಲಿ ತಪ್ಪಸ್ವಿನಿಯ ದೀಕ್ಷೆ ವಹಿಸಿದಳು. ಜೊತೆಯ ಸಾವಿರಸಖಿಯರೂ ತಪಸ್ವಿನಿಯರಾದರು. ಈ ಗುಣವತಿಯ ತಪಸ್ಸು ಚಿತಾಗತಿಯಲ್ಲಿಯೂ ವೈರಾಗ್ಯವನ್ನು ಪ್ರೇರಿಸಿತು. ಆತನೂ ತಮ್ಮಂದಿರೊಡನೆ ತಪೋದೀಕ್ಷೆಯನ್ನು ಹಿಡಿದನು. ಮೂವರು ಸಹೋದರರೂ ಮಾಹೇಂದ್ರಕಲ್ಪದಲ್ಲಿ ಸಾಮಾನಿಕದೆವರಾಗಿ ಜನಿಸಿದರು. ಮರುಭವದಲ್ಲಿ ಈ ಪುಣ್ಯಫಲದಿಂದ ಸಾಮಾನಿಕದೇವಚರ ಚಿಂತಾಗತಿಯು ಅಪರಾಜಿತನಾಗಿಯೂ ಚಪಳಗತಿ ಮನೋಗತಿಗಳುಗಗನಚಂದ್ರ–ಗಗನ ಸೌಂದರಿಯರೆಂಬ ಖೇಚರದಂಪತಿಗಳಿಗೆ ಅಮಿತಿಗತಿಂತ್ತು ಅಮಿತತೇಜರೆಂಬ ಕುಮರರಾಗಿಯೂ ಹುಟ್ಟಿದರು; ಸ್ವಯಂಪ್ರಭ ಜಿನರಿಂದ ಚಿತಗತಿಯನ್ನೂ ಒಳಕೊಂಡಂತೆ ತಮ್ಮ ಮೂವರ ಭವಾವಳಿಯನು ಪ್ರಶ್ನಿಸಿ ತಿಳಿದುಕೊಂಡರು. ಈಗ ಅಪರಾಜಿತನನ್ನು ಕಂಡು ಅತನಿಗೆ ಶ್ರುತಪಡಿಸಿದರು. ಈ ಮುಂದೆ ಬರುವದೇ , ನೇಮಿನಾಥನ ಭವಾವಳಿವ್ಯೂಹದ ಮೊತ್ತಮೊದಲ ವಿಂಧ್ಯಕನಭವ ಮತ್ತು ಆ ಬಳಿಕ ಕ್ರಮವಾಗಿ ಇಭ್ಯಕೇತು ಮತ್ತು ಶ್ರಿದೇವ ಭಾವಗಳು ಅಲ್ಲಿಗೆ ಅಪರಾಜಿತನ ಹಿಂದಿನ ಐದು ಭವಗಳ ವೃತ್ತಾಂತಗಳೂ ಮುಗಿಯುತ್ತವೆ. ವಿಂಧ್ಯಕಭವವೃತ್ತಾಂತ ಅತನ ವಾಸಸ್ಥಾನವಾದ ಮಗಧಮಂಡಲದ ಮಹಾರಣ್ಯದ ವರ್ಣನೆಯಿಂದ ಆರಂಭಗೊಂಡಿದೆ. ಸಾಂಪ್ರದಾಯಿಕವಾದ ಮನವರ್ಣನೆಗೆ ಹೀಗೆ ಅವಕಾಶ ದೊರೆತಂತಾಗಿ ಕವಿ ಅದನ್ನು ತನ್ನ ಸಹಜಾಪೇಕ್ಷಯ ಅಲಂಕಾರ ಚಮತ್ಕಾರಗಳ ಪ್ರದರ್ಶನಕ್ಕೆ ಬಳಸಿಕೊಂಡಿದ್ದಾನೆ. ಈ ವರ್ಣನಭಾಗ ಬಗೆಬಗೆಯ ಶಬಾರ್ಥಾಲಂಕಾರಗಳ ಮಲ್ಲಸಾಲೆಯಾಗಿದೆ. ಪದ್ಯರಚನೆಯಲ್ಲಿ ಅರ್ಥಗೌರವಕಿಂತ ಮಿಗಿಲಾಗಿ ಶಬ್ದಪ್ರಾಗಲ್ಭ್ಯದತ್ತ ಕವಿಯ ಬುದ್ಧ್ದಿ ನಿಶುತವಾಗಿ ಕೆಲಸಮಾಡಿದೆ.

ಅರಣ್ಯದ ವರ್ಣನೆ ನ್ಯಜವಾಗಿಯೇ ಅದರ ರುದ್ರಗಾಂಭಿರ್ಯವನ್ನೂ ದುರ್ಗಮವೂ ದಟ್ಟವೂ ಅದ ಪರಿಸರದ ಕಲ್ಪನೆಯನ್ನೂ ಮನಮುಟ್ಟಿಸುವಂತಿರಬೇಕು ; ಇದು ಪ್ರಾಚೀನ ಕವಿಗಳ ಅಪೇಸೆ. ನೇಮಿಚಂದ್ರನಾದರೂ ಹೀಗೆಯೇ.

ಅದು ಜಂಬೂ ಜಂಭ ರಂಭಾ ಕುಳಕ ವಳಿಳ ಲಂಪಿಲ್ಲ್ ಸಾತ್ರಾರ್ಣ ಸಪ್ತ

ಚ್ಛದ ನದೆಯ ಪ್ರಿಯಾಳ  ಪ್ರಿಯಕ ಕುರುವಕಶೋಕ ನಿಂಬಾಂಮ್ರ ಕುಂಭೀ

ಬದರ  ನ್ಯಗ್ರೋಧ ಗುಂದ್ರಾ ಪಿಪ್ಪುಳ ನಿಚುಳ ಕಾಶ್ಮರ ಡ್ಮಾಲೂರ ಲೋಧ್ರೇಂ

ಗುದಿ  ಕಾಕಪ್ಲಕ್ಷ ಪಥ್ಯಮಳಕ ತಿಳಕ  ಭೂರ್ಜಾದಿ ಭೂಜವಕೀರ್ಣ, ॥

ನವನಿರ್ಮೋಕ ಗ್ರಹ ವ್ಯಕುಳ ನಕುಳ ಕುಳಂ ಘೇರವಸ್ಘರ್ಡಕ್ಕಾ

ರವ ವಲ್ಲದ್ವಾನರಂ ಮಾರುತ ಚಳಿತ ತಮಾಳಾಹಿತೋತ್ಕಂಠ ಕಂಠೀ

ರವ ದಂತಿ ಭ್ರಾಂತಿ ದಾವದ್ದವ ಕಿಸಲಯಜಾಲಾನುಸಂಸರ್ಪಿ ಶೂರ್ಪ

ಶ್ರವ ಸಂಭ್ರಶ್ಯತ್ಪತಂಗಾಶಯ ಶಯಗಾಳಿತಪತಿಂತತ್ಕೀರ್ಣ ಪರ್ಣಂ॥

ಈ ಎರಡು ವೃತಗಳಾ ನಡೆಯನು ನೋಡಿದರೆ ಸಾಕು ಕವಿಯ ಉದ್ದೇಶ ತನ್ನ ಪ್ರೌಢಿಮೆಯನ್ನು ಗರಿಗೆದರುವುದೇ ಹೊರತು , ದಿಟವಾದ ಕಾಡನ್ನು  ಪರಿಚಯಿಸಬೇಕೇಂದೇನೂ ಅಲ್ಲ ಎನ್ನುವುದು ಸುಲಭಾವಾಗಿ ತಿಳಿದುಹೋಗುತ್ತದೆ. ಮುಂದೆಯದರೂ ಹೀಗೆಯೇ ಚಮತ್ಕಾರದ ಕವಿಸಮಯಗಳ ಹುಯಿಲು. ಈ ಸಂದರ್ಭದಲ್ಲಿಯ

ಅಡಸಿ ಫಣಿ ಸುತ್ತೆ ಚಂದನ

ದಡಿಮೊದಲುಮನೊರಸಿಲೊಳ್ವ ಕೊರಲುಮನೆಳಾಸೊ ಕರ್ೋಡೆದು ಕಟತರದಿಜಿತರೆ

ನಡುಪಟ್ಟಿಭಮಲ್ಲಿ ಕಟ್ಟು ವಟ್ಟಿವೋಲಿರ್ಕುಂ ॥

ಎಂಬ ಪದ್ಯ ಕಾಳಿದಸನ 'ರಘುವಂಶದ

ಭೋಗಿವೇಷ್ಟನಮಾರ್ಗೇಷು ಚಂದನಾನಾಂ ಸಮರ್ಪಿತಮ್

ನಾಸ್ರ ಸತ್ಕರಿಣಾಂ ಗ್ರೈವಂ ತ್ರಿಪದೀಚ್ಛೇದಿನಾಮಪಿ ॥ ( ೪–೪೮)

ಎಂಬ ಶ್ಲೋಕದ ಛಾಯ ಎನ್ನುವಂತೆ ಅದರ ನೆನಪು ತರುತ್ತದೆ.

ಇಂತಹ ಅರಣ್ಯದ ಒಂದು  ಬೇಡರ ಪಾಳಯದಲಿಯ ಜನರ ವರ್ತನೆಯೋ? ಅಲ್ಲಿಯ ಶಿಶುಗಳು ಹರಿದು ಹೋಗುತ್ತಿರುವ ಹುಳು ಹುಪ್ಪಟೆಗಳನ್ನೇ ಹೊಡೆದು ತಿಂದುಬಿಡುತ್ತಿದ್ದುವಂತೆ ; ದಾರಿ ತಪ್ಪಿ

ಪಾಳೆಯಾದೊಳಗೆ ನುಸುಳುವ ಜಿಂಕೆಯ ಮರಿಗಳನ್ನು ಹಿಗ್ಗಿ ಹಿಡಿದು ಕೊಂಡು, ಅಲ್ಲಿಯ ಬಾಲೆಯರು ಕೊಂದುಹಕಿ, ಅವುಗಳ ಕೆಂಪುಮಾಂಸವನ್ನೇ ತಲೆಯಲ್ಲಿ ಹೂವಿನಂತೆ ಮುಡಿಯುತ್ತಿದ್ದರಂತೆ ! ಹೀಗೆ ಅದೊಂದು ಮಹಪಾಪದ ಬೇಡವಳ್ಳಿ ಈ ಹಳ್ಳಿಯ ಒಡೆಯ ವಿಂಧ್ಯಕ , ಕಡುಗಪ್ಪುಬಣ್ಣದ ಸಾಹಸಿ ಹೊಸಬಾಣಕ್ಕೆ ಗರಿಯನ್ನು ಕಟ್ಟುತ್ತಿದ್ದುದು ಗರುಡನ ಪಕ್ಷಚ್ಛೇದದಿಂದ ;ಸಿಂಹದ ಕೂದಲನ್ನು ಹೆಕ್ಕಿ ಸರಿಪಡಿಸುವುದು ಆನೆಯ ದಂತದಿಂದ . ಈತನ ಆಡುವ ಬೇಟೆಗೆ ಬೆಚ್ಚಿ ಸಿಂಹ ಚಂಡಿಯ ಮರೆಯನ್ನು ಗರುಡ ವಿಷ್ಣುವಿನ ಮರೆಯನ್ನು ಹೊಕ್ಕು ಅದಿವರಾಹ ಭೂಮಿಯ ಮರೆಯನ್ನು ಅಷ್ಟದಿಗ್ಗಜಗಳು ದಿಕ್ಕುಗಳ ಮರೆಯನ್ನು ಹೊಕ್ಕು ಉಳಿದುಕೊಂಡಿವೆ. ಇಲ್ಲವಾದರೆ ಅವನ್ನೂ ವಿಂಧ್ಯಕ ತೀರಿಸಿವಿಡುತ್ತಿದ್ದನಂತೆ . ಈ ಆಶಯದ ಪದ್ಯ (೩– ೫೪) ಸಹಜವಾಗಿಯೆ ಪಂಪಭಾ.ದ “ ಸುರಭಿ ದೇವತೆಯೆಂಬ ಕಾಪಿನೆ ಮಾಣ್ದುದೇಱುವುದೊಂದದೆಂದಿರದೆ ಮಾಣ್ದುದು ದೇವವಾರಣಂ ... ಎಂಬ ಸುಂದರವಾದ ಪದ್ಯದ (೧–೨೯) ನೆನಪನ್ನು ತರುತ್ತದೆ. ಆದರೆ ಎರಡು ಸಂದರ್ಭಗಳಲ್ಲಿಯೂ ಅದೊಂದು ರೀತಿಯಲ್ಲಿ ವೈದಿಕ ಮತದ ಗರ್ಹಣೆ ಸುಳಿದಿರುವಂತೆ ತೋರುತ್ತದೆ.

ವಿಂಧ್ಯಕನ ಪತ್ನಿ ವಾಗುರೆ. ವಾಗುರೆ ಎಂದರೆ ಬೆಡರಬಲೆ ಎಂದರ್ಥ ಇಲ್ಲಿ ಪತ್ರೋಚಿತವಾಗಿ ಇದು ವ್ಯಕ್ತಿಗೆ ಆರೋಪಿತವಾಗಿದೆ,. ಈ ಬೇಡದಂಪತಿಗಳ ಶ್ಯಾಬರಚರ್ಯೇಯನ್ನು ಅವರ ಅನ್ಯೋನ್ಯಾಸಕ್ತಿಯನ್ನು ಕವಿ ಸಂಕ್ಷೇಪವಾಗಿಯೇ ನಿರೂಪಿಸುವಂತೆ ಮೊದಲುತೊರಿದರು ಮುಂದಿನಒಂದು ಅಪೂರ್ವಸಂಘಟನೆಗಾಗಿ ಇವರ ಮೃಗಯಾವರ್ಣನೆ ಅದಕ್ಕೆ ಹಿನ್ನೆಲೆಯಾಗಿ ವಂಸತ ವರ್ಣನೆಗಳಾನ್ನು ಕವಿಅಳವಡಿಸಿದ್ದಾನೆ. ಲೀಲಾವತಿಯಲ್ಲಿ ಈಬಗೆಯ ವರ್ಣನೆಗಳು ತಲೆಚಿಟ್ಟು ಹಿಡಿಡುವಂತೆ ವ್ಯಾಪಕವಾಗಿ ಬರುತ್ತವೆ ; ಅರ್ಧನೇ ದಲ್ಲಿ ಸಂಕ್ಷೇಪವಾಗಿ ,ಆದರೆ ಅಲ್ಲಿ ಹೇಗೋ ಹಾಗೆಯೇ ಇಲ್ಲಿಯೂ ಆಡಂಬರದ ಹಾಗೂ ಅತಿಶಯೊಕ್ತಿಯ ಮಾತುಗಾರಿಕೆಯಲ್ಲಿ , ನಿರುಪಣೆ ಗೊಳ್ಳುತ್ತವೆ. ಕಾಡಬೇಡನಾದ ವಿಂದ್ಯಕನಿಗೆ ಬೇಟೆಯೆಂಬುದು ದೈನಂದಿನ ಸಹಜಚರ್ಯೆಯಾದ್ದರಿಂದ ಅರಸರ ಮೃಗಯೇಯನ್ನು ವರ್ಣಿಸುವಂತೆ ವಸಂತೆ ಮತ್ತು ಮೃಗಯೇಗಳನ್ನು ಇಲ್ಲಿ ವರ್ಣಿಸಲು ಹೋಗಿರುವುದು ಅಸಹಜವಾಗಿದೆ ಎನ್ನಬಹುದು. ಮಾರ್ಗ ಕವಿಯಾದ ನೇಮಿಚಂದ್ರನ ಪಂಡಿತ ಬುದ್ಧಿಗೆ ಅದು ಸಹಜವಾಗಿರಬಹುದೇನೋ! ಈ ವರ್ಣನೆಗಳ ಧಾಪಿ ದೋರಣೆಗಳು ಮೊದಲಿನ ಹಾಗೇಯೇ ಎನ್ನುವುದು ೩–೬೨, ೬೩ ಎರಡು ಪದ್ಯಗಳನ್ನು ನೋಡಿದರೆ ಸಾಕು, ತಿಳಿದು ಹೋಗುತ್ತದೆ.

ಹೀಗೆ ವರ್ಣನೆಗಳಿಂದ ಜಡವಾಗಿದ್ದ ಕಥೆ ಸನ್ನಿವೇಶಗಳಿಗೆ ೩-೬೫ ರ ವಚನದಿಂದ ಮುಂದೆ ಒಂದು ಹೊಸಚುರುಕು ತಿರುವು ಬರುತ್ತವೆ.

ವಿಂದ್ಯಕನ ಶುಭೋದಯವಾಗಲಿದ್ದ ದಿನ, ಆತನಿಗೆ ಬೇಟೆ ರುಚಿಸಲಿಲ್ಲ ಎನ್ನುವದನ್ನು ಕವಿ ತುಂಬ ರಮ್ಯವಾಗಿ ತಿಳಿಸಿದ್ದಾನೆ . ಬೇಟೆಗೆ ಸಿಕ್ಕ ಮೃಗಗಳಲ್ಲಿ ತನ್ನ ಮಡದಿಯ ಪ್ರತಿರೂಪವನ್ನೇ ಆತ ಕಾಣುತ್ತಿದ್ದನಂತೆ ! ಮಡದಿಯ ಪ್ರೀತಿವಾತ್ಸಲ್ಯಗಳನ್ನೇ ಮುಗ್ಧಪ್ರಾಣಿಅಳಲ್ಲಿ ಕಂಡುದು , ಆತನ ಬದುಕಿನಲ್ಲಿ ತುಂಬಿಕೊಳ್ಳಲಿರುವ ಸತ್ತ್ವಸಮೃಧ್ದಿಯ ಮುನ್ಸೂಚನೆ ಎನ್ನಬಹುದು.

ಶಿಖರಾಗ್ರದಲ್ಲಿಒ ಪ್ರತಿಮಾಯೋಗದ ವಿಮಳ ಬುದ್ಧಿ ಅಮಳಬುದ್ಧಿಗಳು ಗೋಚರವಾದರು. ಪುರುಷಮೃಗಗಳಂತೆ ಕಂಡ ಅವರನ್ನು ಒಂದೇ ಬಾಣಾದಿಂದ ಬೀಳುವಂತೆ ಮಾಡುವದಾಗಿ ಪತ್ನಿಗೆ ತಿಳಿಸಿದ ವಿಂದ್ಯಕ " ಮೆಚ್ಚುಂಟೆ? ಎಂದು ಬೇರೆ ಆಕೆಯನ್ನು ಕೇಳಿವುದು ದೃಷ್ಯದ ನಾಟಕೀಯತೆಯನ್ನು ತೋರಿಸುತ್ತದೆ. " ಇವರನ್ನು ನೀನು ಘಾತಿಸುವೇಯದರೆ ನಿನಗೆ ನನ್ನ ಕಿವಿಯೋಲೆ ಬೆಕಿಲ್ಲವೆಂದು ಹೇಳಬೇಕಾಗಿದೆ . ಎಂದು ಆಕೆ ಆ ಪ್ರಯತ್ನವನ್ನು ತಡೆದಳು."ಕಾಣುತ್ತಿರುವವರು ಪುರುಷ ಮೃಗಗಳಲ್ಲಾ , ದಿವ್ಯ ಮುನೀಂದ್ರರುಎಂದು ತಿಳಿಸಿ ಆಕೆ ಅವರ ಮಹಿಮೆಯನು ಅವನಿಗೆ ಮನವರಿಕೆ ಮಾಡಿಕೊಟ್ಟಳು. " ಎಚ್ಚೊಡಂ ಶರವಿದು ತಾಗಲಣ್ಮದು ಎಂದು ಹೇಳಿದಳು. ಸಹಜವಾಗಿಯೇ ವಿಂದ್ಯಕ ಕುತುಹಲಗೊಂಡು " ನಿನಿವರನೆಂತು ಬಲ್ಲೆ ಎಂದು ಪ್ರಶ್ನಿಸಿದ. ರಾಜಗೃಹದಲ್ಲಿ ಗಜಮೌಕ್ತಿಕವನ್ನು ವಿಕ್ರಯಿಸಲು ತಾನು ಹೋಗಿದ್ದಾಗ , ಇವರನ್ನು ವೈಶ್ಯೋತ್ತಮನಾದ ಋಷಭದತ್ತ ಸನ್ಮಾನಿಸಿದನ್ನು ತನು ಕಣ್ಣಾರೆ ಕಂಡುದಾಗಿ ತಿಳಿಸಿದಳು ಆಕೆ. ಕೂಡಲೇ ವಿಂದ್ಯಕ ಬಿಲ್ಲು ಬಾಣಗಳನ್ನೆಸೆಡು ಪವಿತ್ರಿಕೃತನಗಲು ಉದ್ಯುಕ್ತಾನಗಿ ಶಿಖರಾಗ್ರವನ್ನೇರಿ ಆಮುನಿಯುಗಳವನ್ನು ಕಂಡು ಮಣಿದನು. ಆತನ ಕಾಲಲಬ್ದಿ ಸನ್ನಿಹಿತವಾದುದನ್ನು ಅರಿತು ಆ ಮುನಿಗಳು ಆತನನ್ನು ಕರುಣೆಯಿಂದ ಕಂಡು ಆತನಿಗೆ ಪಂಚಾಣುವ್ರತಗಳನ್ನು ಅನುಗ್ರಹಿಸಿದರು.

ಕಾಲಲಬ್ಧಿ ಗುರೂಪದೇಶಗಳು ಸೇರಿದಾಗ ಎಂಥ ಚೇತನವೇ ಆದರೂ ಸತ್ವಾತೀಶಯದಿಂದ ಊರ್ಧ್ವಗಾಮಿಯಾಗಿ ಸಾಗಲು ಶಕ್ಯವಾಗುತ್ತದೆ. " ಜಿನಸಮಯವ್ರತಮೆತ್ತ , ವನಚರನೆತ್ತ ಎಂದು ಕವಿಯೆ ಪ್ರಶ್ನೇಹಾಕಿಕೊಂಡು , ಸಿದ್ಧರಸದ ಸ್ಪರ್ಶದಿಂದ ಕಬ್ಬಿಣ ಹೊನ್ನಾಗುವುದು. , ಮೇರುವನ್ನು ಸೇರಿದ ಕಾಗೆ ಹೊಂಬಣ್ಣವೇರುವುದು – ಎಂದು ದೃಷ್ಟಾಂತಪೂರ್ವಕವಾಗಿ ಉತ್ತರ ಹೇಳಿದ್ದಾನೆ. ವಿಂದ್ಯಕ ಬೇಟೆಯನ್ನು ವರ್ಜಿಸಿ , ಸಾತ್ವಿಕ ಆಹಾರವನ್ನು ಸೇವಿಸುತ್ತ ಕಾಲಯಾಪನೆಗೆ ತೊಡಗಿದ. ಗಿಳಿ ತಿನ್ನದ

ತೊಂಡೆ , ಕೊಗಿಲೆ ಕಚ್ಚದ ಇಮ್ಮಾವು , ಬೇರೆ ಹಕ್ಕಿಗಳು ಬಾಯಿ ಹಾಕದ ಹೀಚುಗಾಯಿಗಳು ಇವನು ಹುಡುಕಿ ತಿನ್ನುತ್ತಿದ್ದನಂತೆ ಇವನ ಪತ್ನಿ ವಾಗುರೆಯಾದರು ಈತನನ್ನೇ ಅನುಸರಿಸಿದಳು.

ವಿಂದ್ಯಾಕನ ವ್ರತಪರಿಪಾಲನೆ ಮತ್ತು ಸಾತ್ವಿಕ ವೃತ್ತಿಯ ಜೀವನ ವಿಧಾನವನ್ನು ವರ್ಣಿಸಿ ಆದ ಮೇಲೆ ಮನಮಲ್ಲದ ಮನದೊಳಾನುಮೀ ವ್ರತಮಂ ಕೈಕೊಂಡೆನ್ ಎಂದು ವ್ರತಸ್ಥೆಯಾಗಿದ್ದ ವಾಗುರೆಯ ಪಾತ್ರೆಯ ಮೇಲೆ ಬೆಳಕುಚಲ್ಲುವ ಸ್ವಾರಸ್ಯಕರವಾದ ಸನ್ನಿವೇಶವೊಂದನ್ನು ಕವಿ ತಂದಿದ್ದಾನೆ . ಅದರ ಸಾರಾಂಶ ಹೀಗೆ :

ವಾಗುರೆಯ ಸಹಚರಿಯರಾದ ಬೇಡಿತಿಯರು ಒಮ್ಮೆ ಅವಳನ್ನು ಹುಡುಕಿಕೊಂಡು ಅವಳಿದ್ದೆಡೆಗೆ ಬಂದರು “ ನೀನುಂ ನಿನ್ನ ಗಂಡನು, ಪುಲಿಯಂತಿರ್ದು ನಾರಿಯಂ ತಿರಿರೇಕಿರ್ದಪಿರ್ ಎಂದು ಪ್ರಶ್ನಿಸಿದರು. ಆಕೆಗೆ ಹಿಂದಿನ ಕಥೆ ನೆನಪಾಗಿ ಕಣ್ಣಲ್ಲಿ ನೀರು ತುಂಬಿತು ಆಕೆ ಮೆಲ್ಲಗೆ ಹೀಗೆಂದಳು:

ತುಡೆ ಕೋಲುಂ ಮುನಿಗಳ್ಗೆ ಕಾದ ಫಲಮುಂ ಕಯ್ಯೊಳುಂಡಪ್ಪೆನಾ
ದಡಿಗರ್ ಮಂತ್ರಿಸಿ ಕಟ್ಟಿದರ್ ಕಲಿಯಂ ಕಯ್ಯಂ ಬಾಯುವಂ ಕೆಟ್ಟೆನಾಂ
ಪಿಡಿಯಂ ಪಕ್ಕಿಗಳಂ ಮೃಗಕ್ಕೆ ಬಿಡಲೊಲ್ಲಂ ನಯ್ಗಳಂ ಜೇನುಮಂ
ಬಿಡಿಯಂ ಗಾಣಮನಿಕ್ಕನೊಕ್ಕನಿನಿಯಂ ತನ್ನಕ್ಕೆಯಂ ಬಾಜ್ಕೆಯಂ ॥

ಆಗ ಗೆಳತಿಯರು “ ನೀನೆಮ್ಮ ಮನೆಯೊಳ್ ಬಾಯ್ಗೆ ಬಯಸಿದುದನುಂಡು ಮೆಯ್ಗೆ ಮೆಚ್ಚಿವಿದಂತಿರು ಬಾ ಎಂದು ಕರೆದರು ಆಗ ವಾಗುರೆ ತಲೆಯೊಲೆದು ಬೆರಳು ಮಿಡಿದು, “ ಮನದೊಳಿರ್ದುದಂ ಮಾತಿನೊಳ್ ಬಱಿಕೆಯ್ದೆನಲ್ಲದೆ ಬೇಱೊಂದರ್ಕೆ ಬಗೆದವಳೆನಲ್ಲೆನ್ ಇನ್ನೆನ್ನ ನಲ್ಲನಪ್ಪುದನಪ್ಪೆನ್ ಅದು ಲೇಸಾದೊಡಂ ಪೊಲ್ಲಾದೊಡಮೆನ್ನ ಪುಣ್ಯಂ ಎಂದು ಖಂಡಿತವಾಗಿಹೇಳಿಬಿಟ್ಟಳು.

ಅಮಾಯಕವಾದ ಕಾಡ ಬೇಡರಿಗೆ ಸಹಜವಾದ ಈ ಸ್ವಾರಸ್ಯಕರ ಸಂವದವು ಪ್ರಾಯಃ ನೇಮಿಚಂದ್ರನು ಸ್ವಕೀಯವಾಗಿಯೇ ಕಟ್ಟಿದ್ದಾ ಗಿರಬೇಕು. ಸನ್ನಿ್ನವೇಶದಲಿ ಅವರೆಗೆ ಉದ್ದಕ್ಕೆ ಮಿಡಿಯುತ್ತಿದ್ದ ಗಾಂಭೀರ್ಯದ ಏಕತಾನತೆಯನ್ನು ಇದು ಬಲುಮಟ್ಟಿಗೆ ತಗ್ಗಿಸಿದೆಯೆನ್ನಬಹುದು. ಇಲ್ಲಿಯ ಮಾತುಗಾರಿಕೆಯೂ ಸರಳ ನೇರ ಅದ್ದರಿಂದ ಹೃದಯಸ್ಪರ್ಶಿ.

ವಿಂಧ್ಯಕಾಭವ ವೃತ್ರಾಂತದ ಅಂತಿಮ ಘಟ್ಟ ಆತ ಸರ್ಪದಷ್ಟ್ಟನಾಗಿ ಮೃತನದ್ದು . ವಿಂಧ್ಯಕ ಒಮ್ಮೆ ಹಸಿದು ಹಣ್ಣಿಗಾಗಿ ಹುಡುಕಿಕೊಂಡು ಹೊರಟಾಗ ಎಲ್ಲಿಯೂ ಒಳ್ಳೆಯ ಹಣ್ಣು ಸಿಕ್ಕದೆ ಹೋಗಿ , ಕೊನೆಗೆ ಒಂದು ಗುಜ್ಜುಮಾವಿನ ಮರದ ಎಲೆರಾಶಿಯಲ್ಲಿ ಹುದುಗಿದ್ದ ಒಂದೇ ಒಂದು ಮಾವಿನ ಹಣ್ಣು,

ಕೀಲುವಷ್ಟರಲ್ಲಿ ಕೈಜಾರಿ ಅಲ್ಲಿಯೇ ಪೊಟರೆಯೊಳಗೆ ಬಿದ್ದುಹೋಯಿತು. ಅದನ್ನು ಎತ್ತಿಕೊಳ್ಳಲು ಹೋದ ಆತನ ಕೈಯನ್ನು ಅಲ್ಲಿದ್ದ ಹಾವು ಕಚ್ಚಿತು. ಆತ ಸತ್ತನು. ಕವಿ ತನೇ ದುಃಖಿಸುವುದು ನೋಡಿ :

ಅಯ್ಯೋ ಫಳಾಮೃತರಸಮಂ

ಕಯ್ಯಿಂದಂ ಪಿಡಿಯೆ ವಿಷಮಾದಾಯ್ತೇ ಬೇಡಂ

ಗಯ್ಯ ನೃಶಂಸ ಕೃತಾಂತನ

ಕಾಯ್ಯಡಕಮನಱಿವೆನೆಂಬ ದೇವನುಮೊಳನೇ ॥

ನಿಷ್ಕರುಣಿ ಯಮುನ ಕೈಯಡಕ ಯಾರಿಗೆ ತನೇ ತಿಳಿಯುತ್ತದೆ? ದೇವನಿಗೂ ಸಾಧ್ಯವಿಲ್ಲ ಪತಿಯ ಮರಣದಿಂದ ದುಃಖಿತೆಯಾದ ವಾಗುರೆ ತನೂ ಹಾವಿನ  ಹಲ್ಲಿಗೆ ಕೈಗೊಟ್ಟು  ಒಡ ಸಾವು ಸತ್ತಳು. ವಿಂಧ್ಯಕನು ಮರುಭವದಲ್ಲಿ ರಾಜಗೃಹದ ವೈಶ್ಯ  ವೃಷಭದತ್ತನ ಮಗನಾಗಿ ಇಭ್ಯಕೇತು ಎಂಬ ಹೆಸರಿನಿಂದ ಜನ್ಮ ತಳೆದನು; ವಾಗುರೆ ಅದೇ ಪಟ್ಟಣದಲ್ಲಿ ಬೆಸ್ತರ ಒಡೆಯನಾಗಿ ಹುಟ್ಟುದಳು.

ನೇಮಿನಾಥನ ಎರಡನೆಯ ಪೂರ್ವಭವವೇ ಇಭ್ಯಕೇತು ಭವ. ಈ ಭವದ ಆರಂಭದಲ್ಲಿ ವೃಷಭದತ್ತನ ಸಿರಿಸ್ಸಂಪತ್ತುಗಳಾ ಅತಿಶ್ಸಯತೆಯನ್ನು ಕವಿ ಕೆಲವು ಪದ್ಯಗಳಲ್ಲಿ ಉತ್ಪ್ರೇಕ್ಷೆಅತಿಶಯೋಕ್ತಿಗಳ ಬೆನ್ನುಹತ್ತಿ ಸಾಂಪ್ರದಯಿಕವಾಗಿ ವರ್ಣಿಸಿದ್ದಾನೆ. ಇನ್ನು ಅತನ ಪುತ್ರ ಇಭ್ಯಕೇತುವಿನ ವಿಚಾರ ಈತ ಮಹಾರೂಪವಂತನಂತೆ . ಇವನ ರೂಪಾತಿಶಯಕ್ಕೆ ಮೆಚ್ಚಿದ ರತಿ ತಾನೇ  ಅಭಿಸಾರಿಕೆಯಗಿ ಅವನಲ್ಲಿಗೆ ಬರಲು ಬಯಸಿದಳಂತೆ ! ಈ ವೈಶ್ಯಪುತ್ರನ ವಿದ್ಯಾವೈಭವವನ್ನು ವರ್ಣಿಸುವಲ್ಲಿಯೂಕವಿ ಹಿಗೆಯೇ ಉದಾರಿ. ನಾಟಕಪ್ರವೀಣತೆ, ಕೃತಿಭಾವ ಕೋವಿದತೆ ಶಬ್ದಸಮಗ್ರತೆ , ತರ್ಕರೀತ್ಯಭಿಜ್ಞತೆ ಮುಂತಾಗಿ ಪಟ್ಟಿಮಾಡುತ್ತ ಅದನ್ನು ಕವಿ ಸೂಚಿಸಿದ್ದನೆ. ಇಂತಹವನಿಗೆ ಸತಿ ಅನುರೂಪಳಾಗಿರಬೇಕಷ್ಟೇ ! ರಾಜಗೃಹದ ರಾಜ ಜಿತಶತ್ರು ಮತ್ತು ರಾಣಿ ಸುಪ್ರಭೆ ಇವರ ಸುಂದರಿಯಾದ  ಮಗಲು ಕಮಳಪ್ರಭೇಯ ಪಾತ್ರ ಇಲ್ಲಿ ಪ್ರವೇಶಗೊಂಡಿದೆ.

ಸ್ವಯಂವರ ಏರ್ಪಟ್ಟಿತು. ಅರಸುಗುವರರೆಲ್ಲ್ಲೊ ಬಂದರು. ತಂಡೆ ಬೇಡ ಬೇಡ ಎಂದು ತಡೆದರೂ ಕೇಳದೆ ಇಭ್ಯಕೇತು ತಾನೂ , " ನೆಲನುಂ ನೆಸಱುಂಕಾಣಾದಂತು ಮನೆಯೊಳಗೆ ಬೆಳಿಯುತ್ತ ವಿರ್ದ''' ಸುಕುಮರನೂ ಸ್ವಯಂವರಮಂಟಪಕ್ಕೆ ಬಂದನು. ಕಮಳಪ್ರಭೆ ಆತ ನನ್ನೇ  ಮೆಚ್ಚಿ ಆತನಿಗೆ ಪುಷ್ಪಮಾಲೆ ಹಾಕಿದಳು.

ಎನಿತಲರ್ಗಳಲರ್ದೊಡಂ ಭೃಂ

ಗನಾಯಾಕಂ ಜಾತಿಗೆಱಗುವಂತಿರೆ ನೃಪನಂ

ಘನರೆನಿತೆದಿರ್ದೊಡೆಮಂ

ಗನೆಯಲರ್ಗಣ್ಣಿಭ್ಯಕೇತುಗೆಱಗಿದುವಳಿಪಿಂ ॥

ಈ ಪದ್ಯ ಕುಮಾರಸಂಭದವ

ಮಹೀಭೃತಃ ಪುತ್ರವತ್ಯೋಪಿ ದೃಷ್ಟಿಸ್ತಸ್ಮಿನ್ನಪಕ್ಕೆ ನ ಜಗಾಮ ತೃಪ್ತಿಮ್

ಅನಂತಪುಷ್ಪಸ್ಯ ಮಧೋರ್ಹಿ ಚೂತೆ ದ್ವಿರೇಫಮಾಲಾ ಸವಿಶೇಷಸಂಗಾ ॥ (೧–೨೭)

ಎಂಬುದರ ನೆನಪನ್ನು ಓದುಗರಿಗೆ ತರುತ್ತದೆ.

ಇಭ್ಯಕೇಥು– ಮಲಳಪ್ರಭೆಯರು ಒಂದದರು. ಅಗಲೇ ಜಿತಶತ್ರುವಿನ ಕಿರಿಯರಸಿ ವಸಂತಸೇನೆ ಇದನ್ನು ತಿಳಿದು ನೃತ್ಯ ಸಾಹಿತ್ಯಗಳಲ್ಲಿ ಕೋವಿದೆಯಗಿದ್ದ ತನ್ನ ಮಗಳು ಮಗಧಸೌಂದರಿಯ ಮೂಲಕ ಕಲಾಪ್ರದರ್ಶನವನ್ನು ಏರ್ಪಡಿಸಿದಳು. ಜಿತಶತ್ರು ಆ ವಿದ್ಯಗೆ ಇಭ್ಯಕೆತುವೇ ತಕ್ಕವನೆಂದು ತಿಳಿದು, ಅವನನ್ನು ನೃತ್ಯಮಂಟಪಕ್ಕೆ ವರಮಡಿಕೊಂಡು ಮಗಳಿಂದ ನೃತ್ಯನನ್ನು ಮಾಡಿದನು. ಆಕೆ ನೃತ್ಯಕಲೆಯ ಸಕಲಕೌಶಲವನ್ನೂ ಅಪೂರ್ವವಾಗಿ ಅಭುನಯಿಸಿ ತೋಸಿದಳು ಅವ್ಳು ಪ್ರದರ್ಶಿಸಿದ ಸೂಚಿನೃತ್ಯದಂಥ ಸೂಕ್ಷ್ಮವಾದ ವಿದ್ಯಾಸಧನೆಯು ಸಾಕ್ಷತ್ ಸರಸ್ವತಿ ಸಾಧ್ಯವಿಲ್ಲ ಎಂಬುದಾಗಿ ಅದನ್ನು ಇಭ್ಯಕೆತು ಮನಸಾರೆ ಮೆಚ್ಚಿ ಕೊಂಡನು. ಜಿನಶತ್ರು " ಮೆಚ್ಚುಗುಡುವಂತೆ ಅ ಮಗಧ ಸೌಂದರಿಯನ್ನೂ ಆತನಿಗೆ ಮದುವೆ ಮಾಡಿಕೊಟ್ಟನು. ಅದರೆ ನೃತ್ಯವಿದ್ಯಾಕೌಶಲಕ್ಕಿಂತ ಕಮಳಪ್ರ್ಭೆಯ ರೂಪಲಾವಣ್ಯವೇ ಇಭ್ಯುಕೇತುವಿಗೆ ಮೊದಲ ಆಕರ್ಷನೆಯಾಯಿತು. ಮಗಧ ಸೌಂದರಿಗೆ ಮನಸೋತು ತನನ್ನು ಮರೆತು ಬಿಡುವನೇನೋ ಎಂದು ಖಿನಳಾಗಿದ್ದ ಕಮಳಪ್ರಭೆಯನ್ನು ಇಭ್ಯುಕಾತು ಅಂದು ರಾತ್ರಿ ಒಡಗೂಡಿದನು. ಇತ್ತಮಗಧಸೌಂದರಿ ತನ್ನ ಪಾಳೆಯದಲ್ಲಿ ವಾಸವಸಜ್ಜಿಕೆಯಾಗಿ ಪತಿಯ ಸಮಾಗಮನಿರೀಕ್ಷೆಯಲ್ಲಿ ನಿದ್ದೆಗೆಟ್ಟು ಇರುಳೆಲ್ಲ ಕಾತರೆಯಾಗಿ ಕಾಯುತ್ತಿದ್ದಳು. ಅವಳಿಗೆ ನಿರಾಶೆಯೇ ಕಾದಿತ್ತು. ಮಾರನೆಯ ದಿನ ಜಿನಶತ್ರು ಅವಳ ದೀನಾಮ್ಲಾನ ಮುಖವನ್ನು ಕಂಡಾಗ ತುಂಬ ನೊಂದುಕೊಂಡನು. ನೃತ್ಯಕಲಾ ಕೋವಿದೆಯಾಗಿದ್ದೂ ಆಕೆಗೆ ದುಃಖವೂ ದೌರ್ಭಾಗ್ಯವೂ ತಪ್ಪಲಿಲ್ಲವಲ್ಲ ಎಂಬ ಕೊರಗುಂಟಾಯಿತು. ಅದೇ ಅತನ ನಿರ್ವೇಗಕ್ಕೆ ನಿಮಿಟ್ಟವಾಯಿತು ರಾಜುಅವನ್ನು ಇಭ್ಯುಕೇತುವಿಗೊಪ್ಪಿಸಿ ತಾನು ನಿಯಮಸ್ತ್ಥಯತಿಯ ಬಳಿಯಲ್ಲಿ ತಪಸ್ಸಿಗೆ ನಿಂತನೌ. ವೃಷಭದತ್ತನು ಮಂದರಸ್ಥವಿರ ಮುನಿಯಲ್ಲಿ ತಪೋದಿಕ್ಷಿತನಾದನು.

ಈವೃತ್ತಾಂತದಲ್ಲಿ ನೇಮಿಚಂದ್ರನು ನೃತ್ಯ ಕಲಾಭಿರುಚಿಯ ಸ್ವೋಪಜ್ಞತೆಯನ್ನೂ ತನಗೆ ಅತಿಪ್ರಿಯವಾದ ಶೃಂಗಾರರಸಜ್ಞತೆಯನ್ನು ಮನೋಜ್ಞವಾಗಿ ಪ್ರತಿಬಿಂಬಿಸಿದ್ದಾನೆ. ಇಲ್ಲಿಯೂ ಎಂದಿನಂತೆ ಸಹಜಕವಿತ್ವಕ್ಕಿಂತ ಅಲಂಕಾರವಿತ್ವವೇ ವಿಜೃಂಭಿಸಿದೆ. ನೇಮಿಚಂದ್ರನ ಶೃಂಗಾರಪ್ರಿಯತೆಗೆ ಧೀರಲಲಿತ ದಕ್ಷಿಣನಾಯಕನಾಗಿ ಇಭ್ಯಕೇತುವನ್ನೂ ವಾಸವಸಜ್ಜಿಕೆಯಾಗಿ (೩–೧೧೬,೧೧೭) ಮಗಧಸೌಂದರಿಯನ್ನೂ ಚಿತ್ರಿಸಿರುವ ರೀತಿಯೇ ಸಾಕ್ಷಿಯಾಗಿದೆ ಹೆಣ್ಣಿನ ರೂಪ ಹೆಚ್ಚೋ ವಿದ್ಯೆ ಹೆಚ್ಚೋ ಎಂವ ಪ್ರಶ್ನೆಯನ್ನು ಎತ್ತಿಕೊಂಡು (೩–೧೧೪) ರೂಪಕ್ಕೆ ಕೈಯೆತ್ತಿದಂತಿದ್ದ ಇಲ್ಲಿಯ ಸನ್ನಿವೇಶನಿರೂಪಣೆ . ಇಲಿಯ ವೃತ್ಯವರ್ಣನೆಯ ವಿವರಗಳು ಕೆಲಮಟ್ಟಿಗೆ ಜಿನಸೇನರ ಹರಿವಂಶ ಪುರಾಣಾದಿಗಾಳಲ್ಲಿಯೂ ಉಂಟು . ನೃತ್ಯಕಲೆಯ ಇತಿಹಾಸ ಮಾತ್ತು ಕಲಾಸ್ವರೂಪದ ದೃಷ್ಟಿಯಿಂದ ಪಾರಿಭಾಷಿಕಸಾಮಗ್ರಿಯೂ ಸಕಷ್ಟಿರುವ ಈ ಭಾಗಗಳು ವಿಶೇಶ ಅಧ್ಯಯನಕ್ಕೆ ಯೋಗ್ಯವಾಗಿವೆಯೆನ್ನಗಹುದು.

ಅಸಿಯುಳ ವಿದ್ಯೆ ಕೂರಿಸಿದುದಿಲ್ಲ ನೃಪಾಗ್ರತನೂಜೆ (ಯಂದ?) ಕೂ
ರಿಸಿದುದಧೀಶನಂ ಸೊಬಗು ಕೂರಿಸುವಂತಿರೆ ಪೆಣ್ಣ ವಿದ್ಯೆ ಕೂ
ರಿಸುಗೆಮೆ ತುಂಬಿ ಮಲ್ಲಿಗೆಗೆ ಕೂರ್ಪವೂಲೊಪ್ಪೆ ವಿಚಿತ್ರಬಂಧದಿಂ
ದೆಸೆದಿರೆ ಕಟ್ಟಿ ತಂದ ಸೊವಡಿಲದ ಮಾಲೆಗೆ ಕೂರಲರ್ಕುಮೇ ॥

ಎಂಬ ಈ ಮಾತಿನ ರೀತಿ “ ಸ್ತ್ರೀರೂಪಮೆ ರೂಪ ಶೃಂಗಾರಮೆ ರಸಂ ಎಂದು ಹೇಳಿದ ಕವಿಗೆ ಸಹಜವಾದ ಮಾತಿನ ರೀತಿಯೇ ಆಗಿದೆ.ಆದರೆ ವಿದ್ಯೆ ಸೌಂದರ್ಯಎರಡೂ ಮಾನ್ಯವಾಗದಿದ್ದರೆ , ಪರಿಣಾಮ ವಿಷಾದವನ್ನು ತರುವುದು ತಪ್ಪದು ಎನ್ನುವುದನ್ನು ಜಿನಶತ್ರುನೃಪನ ವಿರಕ್ತಿಯ ಮೂಲಕ ಸೂಚಿಸಿದ್ದಾನೆ.

ಝುಂದಿನ ಸಂಘಟನೆ ಭವನುಬಂಧಿಗಳಾದ ವಿಂಧ್ಯಕಚರ ಇಭ್ಯಕೇತು ಮತ್ತು ವಾಗುರೆಚರ ಧೀವರನಯಕರ ಸಮಾಗಮವನ್ನು ಕುರಿತದ್ದು . ಇದು ಚತುರ್ಥಾಶ್ವಾಸದ ಆದಿಭಾಗದಿಂದ ತೊಡಗುತ್ತದೆ. ಇಭ್ಯಕೇತು ರಾಜಗೃಹದಲ್ಲಿ ಅರಸನಾಗಿ ಆಳುತ್ತಿದ್ದಾಗ – “ ವಾಣಿಯ ದಯೆಯಿಂ ಪರದನರಸನಾಗಿರ್ದಂ – ಒಮ್ಮೆ ಒಡ್ಡೋಲಗವನ್ನು ಸೇರಿಸಿದನು. ಆಗ ಆ ಪಟ್ಟಣದ ಬೆಸ್ತರೊಡನೆ ದೊರೆಗೆ ಕಾಣಿಸಿಕೊಂಡು ಕಾಣಿಕೆಗಳನ್ನೊಪ್ಪಿಸಿದನು. ಅವನನ್ನು ಕಾಣುತ್ತಲೇ ದೊರೆಗೆ ಅವನಲ್ಲಿ ಆದರಭಾವ ಉಂಟಾಯಿತು. ಆತನಿಗೆ ಸೇನಾಪತಿ ಪದವಿಯನ್ನಿತ್ತು. ಅತನನ್ನೇ ತನ್ನ ಅತ್ಯಂತ ಆತ್ಮಿಯನನ್ನಾಗಿ ಮಾಡಿಕೊಂಡನು ., ಒಮ್ಮೆ ಮಂದರಸ್ಥವಿರ ಭಟ್ಟಾರಕರ ಬಳಿಯಲ್ಲಿ ಧೀರವನು

ಧರ್ಮಶ್ರವಣಮಾದುತ್ತಿರಲು ಇಭ್ಯುಕೇತು ಆ ಭಟ್ಟಾರಕರನ್ನು ಕುರಿತು "ಎನಗೀ ಮೀಂಗುಲಿಗನ ಮೇಗನಿಮಿತ್ತಂ ಪ್ರೇಮಮಣುಗುಂ ಮನನೊಳವೊಲ್ಪಂಗನೆಯೊಳಮಾಗದುದಾಯ್ತು. ಎಂದು ತಿಳಿಸಿ " ಇದು ಹೇಗೆ? ಎಂದು ಪ್ರಶ್ನಿಸಿದನು. ಆಗ ಅವರು ಅಯಿಬ್ಬರೂ ಪೂರ್ವಭಾವದಲಿ ವಿಂಧ್ಯಕ ವಾಗುರೆಯರಾಗಿದ್ದುದನ್ನು ನೆನಪಿಸಿದರು. ಇಭ್ಯುಕೇತು ಪೂರ್ವಭವಸ್ಮರಣೆಗೊಂಡು, ಸಂಸಾರ ಸ್ವರೂಪವನ್ನು ಪರಿಭಾವಿಸಿ ವೈರಾಗ್ಯವನ್ನು ತಳೆದು ಪುತ್ರನಾದ ಸುಕೇತುವಿಗೆ ರಾಜ್ಯವೊಪ್ಪಿಸಿ ತಪೋತಿಕ್ಷೆಗೊಂಡನು.

ಅರೇನಾದಪರೆಂಬುದ

ನಾರಱಿವರೋ ಜಗದೊಳುಳ್ಳ ರೂಪಗಳಂ ಸಂ

ಸಾರಿಯುಘಸೂತ್ರಧಾರ

ಪ್ರೇರಣೆಯಿಂ ಪೊತ್ತು ಸುತ್ತಿ ಕುಣಿಯುತಿರ್ಪ (ನ್) ॥

ಇದು ಆತನ ಗಾಢವಾದ ಪರಿಭಾವನೆ (ಯಾರು ಏನಾಗುವರೋ ಯಾರು ಬಲ್ಲರು ? ಸಂಸಾರಿಯದವನು ಜಗತ್ತಿನಲ್ಲಿರುವ ರೂಪುಗಳಾನ್ನೆಲ್ಲ ಪಾಪವೆಂಬ ಸೂತ್ರಧಾರನ ಪ್ರೇರಣೆಯಿಂದಾಗಿ ಹೊತ್ತು ಸುತ್ತಿ ಹುಣಿಯುತ್ತಿರುತ್ತಾನೆ ). ಕಮಳಪ್ರಭೆಯೂ ತಪಸ್ಸಿಗೆ ನೋಂತಳು. " ಕಾಂತ ವಸಂತಂ ಬೀತೊಡೆ ಮಾಧವಿಲತೆಯಂ ಪಿಂತೆ ಬೀಯದೇವನಿರ್ದಪುದೆ?

ಸೌಧರ್ಮಕಲ್ಪಜ ಶ್ರೀದೇವನಾದುದೇ ಮುಂದಿನ ಮೂರನೆಯದಾದ ನೇಮಿನಾಥ ಭವ; ಎಂದರೆ ಇಭ್ಯುಕೇತುವಿನ ಅನಂತರದ ಭವವಿದು. ಪತ್ನಿ ಕಮಳಾಪ್ರಭೆ ಸುಪ್ರಭವಿಮಾನದಲ್ಲಿ ವಿಮಳ–ಪ್ರಭಾಂಕವೆಂಬ ದೇವನಾದಳು. ವಾಗುರೆಚರ ಧೀವರನಾಯಕನು ವಿದ್ಯುತ್ಪ್ರಭವಿಮಾನದಲ್ಲಿ ಶ್ರುತಪ್ರಭಾಅಂಡನೆಂಬ ದೇವನಾದನು, ಮೂವರೂ ಅಲ್ಲಿ ಸುರಲೋಕ ಸೌಖ್ಯಅವನ್ನನುಭವಿಸಿ, ಮರುಭವದಲ್ಲಿ ಚಿಂತಗತಿ ಆದಿಯದ ಸೋದರರಾಗಿ ಜನಿಸಿದರು. ಇಲ್ಲಿಂದ ಮುಂದಿನ ವೃತ್ತಾಂತವನ್ನು ಇದು ಚಾರಣಾಮುನಿನಿರೂಪಿತವಾದಂತೆ ಬಂದಿರುವುದನ್ನು, ಈ ಹಿಂದೆಯೇ ಗಮನಿಸಲಾಗಿದೆ. ಈ ನಿರೂಪಿತ ವೃತ್ತಾಂತವು ಅಪರಾಜಿತ ಭವವೃತ್ತಾಂತವನ್ನೂ ಒಳಕೊಂಡು ವ್ಯಾಪಿಸುತ್ತದೆಯೆಂದು ನಮಗೆ ತಿಳಿದಿದೆ. ಎಂದರೆ ಇದೇ ನೇಮಿನಾಥನ ೪,೫ ಮತ್ತು ೬ನೆಯ ಭವಗಳಾದ ಚಿಂತಾಗತಿ, ಮಾಹೇಂದ್ರಕಲ್ಪಜ ಸಾಮನಿಕದೇವ ಅಪರಾಜಿತ ಭವಗಳಾ ವೃತ್ತಾಂತಗಳು.

ಪೂರ್ವೋಕ್ತ ವಿಂಧ್ಯಾಕದಿ ಬಾಯತ್ರಯಗಳಿಂದ ಅಮಿತಗತಿನಿರೂಪಿತವಾದ ಅಪರಾಜಿತನ ಪೂರ್ವಭವಪಂಚಕದ ಕಥನವು ಮುಗಿದು , ಅಪಾರಾಜಿತನ ವೃತ್ತಾಂತಶೇಷ ಪೂರ್ತಿಯಾದ ಮೇಲೆ , ನೇಮಿನಾಥನ ಏಳನೆಯ ಭವ ಅಚ್ಯುತ್ಯೇಂದ್ರಭವ  ಸ್ಥಾನ ಪಡೆಯುತ್ತದೆ

ಅಪರಾಜಿತನ ಮನಸ್ಸಿಗೆ ಮುಟ್ಟುವಂತೆ ಚಾರಣಾಮುನಿಯಾದ ಅಮಿತಗತಿ ಹೇಳಿದ ಕೊನೆಯ ಈ ಮಾತು ಹೃದಯವಾದುದು :

ಎಡೆಯಾಡುತಿರ್ಪ ವೇಣುವೆ
ಕೆಡೆವಂತಿರೆ ತಂತು ತೀರ್ವುದೌಂ ಹತಕಯಂ
        ಕೆಡವುದು ಕಾರಲುಅಲ್ಲದೆ
        ಸಡಪುಡನಱವನ್ನ ನಾವನಾಯುವ ತವಿಲಂ ॥

“ಬಳುಕುತ್ತಿರುವ ಬಿದಿರು ಯವಾಗ ಮುರಿದು ಬೀಳುವುದೋ ತಿಳಿಯುದು ಹತತ್ತನೆ ಒಮ್ಮೆ ಬಿದ್ದು ಹೋಗುವುದು ಹಾಗೆಯೇ ಪ್ರಾಣತಂತು ತೀರುತ್ತಲೂ  ಹತಕಾಯ ಕೆಳಗೆ ಉರುಳಿ ಬೀಳುವುದನ್ನು ನೋಡಬಹುದಲ್ಲದೆ, ಅಯುಸ್ಸು ಯವಾಗ ನಷ್ಟವಯಿತೋ ಅದನ್ನು ಥಟ್ಟನೆ ಯರು ತಾನೇ ತಿಳಿಯಲು ಸಾಧ್ಯ ?

ಅಪರಾಜಿತನು ಅವರ ಉಪಕಾರ ಮಮಕಾರಗಳನ್ನು ಕೊಂಡಾಡಿ ತನಗೆ ಇದ್ದ ಒಂದೇ ತಿಂಗಳ ಆಯುಷ್ಯವನ್ನು ತಪದಲ್ಲಿ ಕ್ಷಯಿಸಲುಸಂಕಲ್ಪಿಸಿದನು. ಪುತ್ರನದ ಪ್ರೋತಿಂಕಾರನಿಗೆ ರಾಜ್ಯವೊಪ್ಪಿಸಿ ತೆರಳಿದವನು ೨೨ ದಿನಗಳಾ ಪ್ರಾಯೋಪಯೋಗಸ,ಂನ್ಯಾಸನವನ್ನು ಆಚರಿಸಿ, ಮೃತನಾದ ಮೇಲೆ ೨೨ ಸಾಗರೋಪಮ ಆಯುಷ್ಯಸ್ಥಿತಿಗೆಸ್ವಾಮಿಯಗಿಅಚ್ಯುತಕಲ್ಪದ ಸಾಂತಕರ ವಿಮಾನದಲ್ಲಿ ಅಚ್ಯುತೇಂದ್ರನಾಗಿ ಜನಿಸಿದನು. ಆದರೆ “ ಯಮಹತಕಂ ಸುಸ್ಥಿತರ ನಾರುವಂ ಎಂದುದನ್ನು ಕೆಡಹುತ್ತದೆ. ಅಮರ ಎಂಬುದನ್ನು ಕೊಲ್ಲುತ್ತದೆ (೪-೧೯) .

ನೇಮಿನಾಥನ ೮ ನೆಯು ಸುಪ್ರತಿಷ್ಠಭವ ವೃತ್ತಾಂತವೇ ಮುಂದಿನದು ಇದರ ನಿರೂಪಣೆಯಲ್ಲಿ ನೇಮಿಚಂದ್ರನು ಜಿನಸೇನರಾದಿಯಾದ ಇತರ ಲೇಖಕರ ಹಾಗೆ  ಲೇಖನಕಾರ್ಪಣ್ಯವನ್ನು ತೋರಿಸಿಲ್ಲ. ಜನನದಿಂದ ತಪೋನುಷ್ಠಾನದ ವರೆಗೆ  ಬರುವ ಈ ಸಂದರ್ಭದ ಸುಪ್ರತಿಷ್ಠನ ಕಥೆಯನ್ನು ವರ್ಣನಾತ್ಮಕ ವಿವರಗಳಿಂದ ಬೆಳೆಯುತ್ತ ಹೋಗಿ ಒಟ್ಟಿನಲ್ಲಿ ವೃತ್ತಾಂತವನ್ನು ಸುಂದರವಾಗಿ ನಿರೂಪಿಸಿದ್ದಾನೆ. ಹಸ್ತಿನಾಪುರ, ಅಲ್ಲಿಯ ಪುರುಸ್ತ್ರೀಯರು ಅಲ್ಲಿಯ ರಾಜದಂಪತಿಗಳು ಮೊದಲದವುಗಾಳಿಂದ

ವರ್ಣನವಿಷ್ಟವಾಗಿ ಕಥೆ ಆರಂಭವಾಗಿ ಮುಂದೆ ಬರುವ ನಾಯಕ ವ್ಯಕ್ತಿಯ ವೃತ್ತಾಂತದಲ್ಲಿಯೂ ವರ್ಣನೆ ಕಥೆಗಳು ಹಾಸುಹೊಕ್ಕಾಗಿ ಸಾಗುತ್ತವೆ. ಸುಪ್ರತಿಷ್ಠನ ವೈರಾಗ್ಯ ,ಮತ್ತು ತಪಶ್ಚರ್ಯೆಗಳ ವರ್ಣನೆಯಲ್ಲಿ ಅರ್ಹಂತನಾಗಲಿರುವ ಜೀವದ ಪರಿಪಕ್ವತೆ ಯನ್ನು ಕವಿ ಚೆನ್ನಾಗಿಯೇ ಒಡಮೂಡಿಸಲು ಪ್ರಯತ್ನಿಸಿದ್ದಾನೆನ್ನಗಹುದು.

ಹಸ್ತಿನಾಪುರದ ರಾಜದಂಪತಿಗಳಾದ ಶ್ರೀಚಂದ್ರ-ಶ್ರೀಮತಿಯರ ಪುತ್ರ ಸುಪ್ರತಿಷ್ಠ ಅತನ ಸತಿ ಸುನಂದಾದೇವಿ ಮಗನ ಮದುವೆಯ ನಂತರದಲ್ಲಿ ಶ್ರೀಚಂದ್ರ ಸುಮಂದಿರಗುರುಗಳಲ್ಲಿ ತಪೋದೀಕ್ಷೆ ಮಹಿಸಿದನು. ಕಾಲಕ್ರಮದಲ್ಲಿ ಸುಪ್ರತಿಷ್ಠನಿಗೆ ಸುದೃಷನೆಂಬ ಮಗನಾದನು. ಈ ಕಥಾಸಂಗತಿಗಳು ವೇಗದಲ್ಲಿ ಸಾಗಿದರೂ, ಸುಪ್ರತಿಷ್ಠನು ಯಶೋಧರ ಯತಿಪತಿಗೆ ಮುನಿಭುಕ್ತಿ ನೀಡಿದ ಸಂದರ್ಭದಲ್ಲಿ ಕವಿ ' ಧರ್ಮೋಪಧ್ಯಾಯರ ವಚನಾಮೃತವೆಂಬ ನಿ,ಮಿತ್ತದಿಂದ ದಾನಗುಣಾತಿಶಯ ಮತ್ತು ಸತ್ಪಾತ್ರವಿವೇಚನೆಯನ್ನು ಸ್ವಲ್ಪ ವಿಸ್ತಾರವಾಗಿಯೇ ನಿರೂಪಿಸಿರುವುದು ಅತನ ವರ್ಣನಪ್ರೀಯತೆಯ ದೌರ್ಬಲ್ಯವನ್ನೇ ಹೇಳುತ್ತದೆ (೪-೪೦ ರಿಂದ ೪೯) ಇದನ್ನು ನಾವು ದಾಟುತ್ತಿದ್ದಂತೆಯೇ ಸುಪ್ರತಿಷ್ಠನ ವೈರಾಗ್ಯನಿಮಿತ್ತವಾದ ಉಲ್ಕಾಪತದ ಸುಂದರ ಕಾವ್ಯಮಯಸಂರ್ಧಭವನ್ನು ನಾವು ಇದರ ಈ ಆರಂಭವೇ ಸೋಗಸಾದುದು:

ಅತಿಸಂಗ್ರಾಃಯಮೊ ಮಲ್ಲಿಕಾಪರಿಮಳಂ ಮಕಂದದಾಮೋದಂಮೊ
ಕ್ಷಿತ್ಪ್ ವಾಸಂತಿಯ ಕಂಪು ಲೇಸೊ ಸುರಭಿ ಶ್ರೀಸೌರಭಂ ಯೋಗ್ಯಮೋ
ಸ್ತುತಂಪ್ ಪಟಳಾಗಂಧಮೆಂದು ಪಿಡಿಯಲ್ವರ್ಪಂತೆ ಬಂದತ್ತುಪ
ಡಿತಶೀಲಂ ಮಳಾಯಾನಿಳಂ ಮಲಯಜಾಮೋದೈಕಸಕ್ತಮೇಂ ॥

ಬೀಸುವ ಗಾಳಿಗೂ ಪಂಡಿತರಿಗಿರುವ ತಾರತಮ್ಯಜ್ಞಾನ, ಅತ್ಕೆಯ ವಿಚಕ್ಷಣೆ ! ಉಲ್ಕಾಪಾತದ ವಿಷಯದಲ್ಲಿ ಸುಪ್ರತಿಷ್ಠನ ಪರಿಭಾವನೆ ಗಾಢವಾದುದು . "ಏಕುಳ್ಕಂ ಪೊಲ್ಲೇಂಬುದೊ ಲೋಕಂ? ಪೋಯ್ತನ್ನ ಮನದ ಮೋಹಧ್ವಾಂತಾನೀಕಂ ಮುಂತಾಗಿ ಆತ ಸಹಜವಾಗಿಯೇ ಅಂತರ್ಮುಖಿಯಾಗಿ ಆಲೋಚಿಸಿದ್ದಾನೆ. ಮುಂದೆ ಆತನ ಮೈರಾಗ್ಯಪರತೆ ಉಗ್ರತಪಶ್ಚರ್ಯೆಗಳು ಸಾಂಪ್ರದಯಿಕ ಮರ್ಣನೆ ಫಲಗಳೆನ್ನುವಂತಿದ್ದರೂ ನೇಮಿಜನನಕ್ಕೆ ಹಿನ್ನೆಲೆಯಗಿ ಉಚಿತವೇ ಆಗಿವೆ.

ನೇಮಿಪೂರ್ವಭವದ ನೇರ ಹಿಂದಿನ ಭವ ಒಂಬತ್ತನೆಯ ಭವ, ಆಹಮಿಂದ್ರನ ಭಾವ. ಸುಪ್ರತಿಷ್ಠಯೋಗಿಯು ಒಂದು ತಿಂಗಳ ಕಾಲ ಸಂನ್ಯಸನದಿಂದಿದ್ದು ಶರೀರತ್ಯಾಗ ಮಾಡಿ

ಉತ್ತರವೈಜಮುಅಂತಿ ವಿಮಾನದಲ್ಲಿ ಅಹಮಿಂದ್ರನಾಗಿ ಜನಿಸಿ ಬೋಗಾನುಭವ ಮಾಡಿದನು. ಅಲ್ಲಿಂದ ಚ್ಯುತನಾಗಿ ಬಂದಮೆಲೆ ಹರಿವಂಶದ ಸಮುದ್ರವಿಜಯಶಿವಾದೆವಿನೆಂಬುದು ಮುಂದಿನ ಕಥಾಂಶ. ಆದರೆ ಈ ಜನನಸಂದರ್ಭದ ಹಿನ್ನೆಲೆಯಾಗಿ ಹರಿವಂಶದ ಪೂರ್ವಕಥಾವಂದರ್ಭಗಳ ವರ್ಣವೆಯಲ್ಲಿ ಕವಿ ಕೈತೊಡಗಿಸಿ , ಈ ನಾಯಕ ವ್ಯಕ್ತುಯ ಜನನವನ್ನು ಹೇಳುವುದಕ್ಕೆ ಮೊದಲಲಿಯೇ ಕಥೆ ಅಸಮಗ್ರವಾಗಿ ನಿಂತುಹೋಗಿದೆ. ಇದು ಮುಖ್ಯ ಕಥೆ, ಮುಖ್ಯ ಪತ್ರಗಳ ದೃಷ್ಟಿಯಿಂದ ದೊಡ್ಡ ನಷ್ಟವನ್ನಬಹುದು.

ಕುರುವಂಶದವರ ಕಥೆ ಮತ್ತು ವಸುದೇವವೃತ್ತಾಂತ

ಕವಿ ನೇಮೊಚಂದ್ರನಿಗೇನೋ ನೆಮಿನಾಥನ ಜನ್ಮವನ್ನು ಕುರಿತ 'ವಸ್ತುವರ್ಣನ ವನ್ನು ಬೇಗ ಕೈಗೊಳ್ಳಬೇಕೆಂಬ ಅಭಿಪ್ರಾಯವಿದೆ ; ಅದೇ ನೇಮಿಚರಿತ್ರೆಯಲ್ಲಿ ಮುಖ್ಯವಾದ್ಯು ಎನ್ನುವುದೂ ತಿಳಿದಿದೆ. ಆದರೆ ಆ ಮಹಪುರುಷನ ವಿಶ್ರುತವಂಶವರ್ಣನೆಯಿಂದ ಕಥೆ ಆರಂಭವಾಗಬೇಕಾದ್ದು ಸಂದರ್ಭೋಚಿತವದ್ದು ತಾನೆ ? ಆ ವರ್ಣನೆಗೆ ಕವಿ ಮುಂದೆ ತೊಡರಿದ್ದಾನೆ ಆ ವರ್ಣನೆ ವನವರ್ಣನೆಯಲ್ಲಿ ವಸಂ,ತವರ್ಣವೆಯಿದ್ದಂತೆ ಸ್ವಾದುವೆನಿಸುವುದು ಎಂದು ಭಾವಿಸಿದ ಆತನು , ಮನೋಹರವಾದ ವನವರ್ಣವೆಯಿಂದಲೆ ಕಥಾರಂಭಾ ಮಾಡಿದ್ದಾನೆ. ಇಂಥ ಮನಗಳ ಸಂಪತ್ತಿಯಿಂದ ಅವೃತವಾದ ದೇಶಗಳಾನ್ನು ಒಳಕೊಂಡದ್ದು ಭರತಕ್ಷೇತ್ರವೇಂದು ಹೇಳಿ ಕಥೆಗೆ ಆ ವರ್ಣನಿಯನ್ನು ತಳುಕುಹಾಕಿದ್ದಾನೆ.

ಶೋರಸೇನರಾನನಿಂದ ತೊಡಗಿ , ನೇಮಿನಾಥನ ತಂದೆ ತಾಯಿಗಳು ಮತ್ತು ಇತರ ಸಮೀಪ ಬ,ಂಧುಗಳ ವರೆಗೆ ತ್ವರಿತಗತುಯಲ್ಲಿ ಹರಿವಂಶಕಥನ ನಡೆದಿದೆ. ಇದು ಮುಗಿಯುತ್ತಿದ್ದ ಹಾಗೆಯೇ ವೈವಾಹಿಕ ಸಂವಂಧದ ಮೂಲಕ ಇದರೊಂದಿಗೆ ಬೆಸೆದುಕೊಂಡು ಕುರುವಂಶದ ಕಥನವನ್ನು ಕವಿ ಆರಂಭಿಸಿದ್ದಾನೆ . ಈ ತ್ವರಿತಗತಿಯ ಕಥನದಲ್ಲಿಯೂ ಶಬ್ದಚಮತ್ಕಾರದ ಅವನ ಸಹಜದೌರ್ಬಲ್ಯ ಕೆಲಸಮಾಡದೆ ಬಿಟ್ಟಿಲ್ಲ ಎನ್ನುವುದು,

ಸುತರಾದರಾ ಪರಾಶರ

ಸುತಂಗಮ ಸತಿ ಸುಭದ್ರೆಗಂ ಬಾದ್ರಮನಂ

ಧೃತರಾಷ್ಟ್ರಂ ಧೃತರಾಷ್ಟ್ರಂ

ವಿತತಯಶಃಪಾಂಡು ಪಾಂಡು ವಿದುರಂ ವಿದುರಂ ॥ ( ೪-೭೯)

ಎಂಬ ಪದ್ಯದಿಂದ ನಮಗೆ ವಿದಿತವಾಗುತ್ತದೆ.

ಈ ಭಾಗದಲ್ಲಿ ಪಾಂಡು ಕುಂತಿಯರ ಸಮಾಗಮದ, ಜೈನಭಾರತಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುವ ವಿಶಿಷ್ಟರೀತಿಯ ಸನ್ನಿವೇಶವೊಂದು ತಕ್ಕ ವಿಸ್ತಾರದಲ್ಲಿ ನಿರೋಪಿತವಾಗಿದ್ದು , ಇದು ಕಾವ್ಯದ ದೃಷ್ಟಿಯಿಂದ ಆಕರ್ಷಕವಾದ್ದಾಗಿದೆ. ಅದನ್ನಿಲ್ಲಿ ಸ್ವಲ್ಪ ಗಮನಿಸಬಹುದು:

ಯುವಕನಾದ ಪಾಂಡುವಿನ ಅಂತರಂಗವನ್ನು ಕುಂತಿಯ ರೂಪು ಹಾಗೆ ಆಕರ್ಷಿಸಿತು? " ಆ ಕಾಂತೆಯ ರೂಪಕಂ ಪೊಳೆದು ಪೊಕ್ಕದು ಕೆಂಡದ ಬೊಂಬೆಯೆಂಬಿನಂ . ಆ ಕಾರಣ ಪಾಂಡುವಿಗೆ ಪಾಮಪಾಂಡುರತೆ ಸಾರ್ಥಕನಾಮವನ್ನುಂಟುಮಾಡಿತು. " ಕಿರಳಿದ ಕಿಚ್ಚಿನೊಡನೆ ಆಡಿದ ತಂಗಾಳಿ ಸುಡುವದೂ ತಪಿಸುವ ಕಿರಣಗಳನ್ನು ಕುಡಿಯುವ ತಾವರೆಗಳು ಸುಡುವುದೂ ಹೆಚ್ಚಲ್ಲ; ಹಿಮವುಂಡು ಬಾಳುವ ಹೂವೇ ಅವನ್ನನ್ನು ಸುಡಲು ಶಕ್ಯವಾಯಿತು ಎನ್ನುವುದಾದರೆ, ವಿಯೋಗಿಗಳು ಹೇಗೆ ತಾನೆ ಬದುಕುವುದು ಸಾಧ್ಯ?

ಎಂಬಂತ್ ಪಾಂಡುವಿನ ವಿರಹತಪ್ತ ಪರಿಸ್ಥಿತಿವಿಷಮಿಸಿತು. ಲೋಕ ಪಂಚಭೌತಿಕವಾದುದಲ್ಲ. ಏಕಭೌತಿಕವಾದುದು, ಅಗ್ನಿಯೊಂದೇ ಅದು – ಎನ್ನುವಂತೆ ಅವನ ಪಾಲಿಗೆ ಕ್ಷೋಬೆ ಬಲಿಯಿತು.

ಈ ಸ್ಥಿತಿಯಲ್ಲಿ ಪಾಂಡು ಒಮ್ಮೆ ವಸಂತವಾಸವೆಂಬ ವನದಲ್ಲಿ ವಿಹರಿಸುತ್ತಿದ್ದನು. ಆಗ್ಗೆ ಆ ವನದಲ್ಲಿ ವಜ್ರಮಾಳಿಯೆಂಬ ಒಬ್ಬ ವಿದ್ಯಾಧರನು ತನ್ನ ಪನಃಪ್ರಿಯೆಯೊಂದಿಗೆ ವಿಹರಿಸಿ, ಮಾಧವೀಮಂಟಪವೊಂದರಲ್ಲಿ ಆಕಸ್ಮಿಕವಾಗಿ ತನ್ನ ಮಾಣಿಕ್ಯದ ಉಂಗುರವನ್ನು ಮರೆತುಹೋಗಿದ್ದನು. ಅದು ಪಾಂಡುವಿಗೆ ಸಿಕ್ಕಿತ್ತು. ಅಷ್ಟರಲ್ಲಿ ಆ ಉಂಗುರವನ್ನು ಹುಡುಕಿಕೊಂಡು ಬಂದ ವಿದಾಧರನಿಗ್, ಆತನ ಉದ್ದೇಶವನ್ನು ದರ್ಶನೇಂಗಿತಗಳಿದಲೇ ತಿಳಿದು, ಅದನ್ನು ಕೂಡಲೆ ಹಿಂದಿರುಗಿಸಿದನು. ಇದರಿಂದ ಹರ್ಷಿತನಾದ ಆ ವಿದಾಧರನು " ಇದು ಕಾಮರೂಪಸಾಧನವಾದ್ದು, ನೀನು ಸಹ ದುರ್ಲಭದಯಿತಾನುರಾಗರಾಶಿಯಾಗಿ ತೋರುತ್ತಿದ್ದೀಯೆ, ಆದ್ದರಿಂದ ಇದು ನಿನ್ನ ಕೈಯಲ್ಲಿ ಒಂದೆರಡು ದಿನವಿರಲಿ, ಸುರತ ಸಾರಥಿಯಾಗಿ ಒದಗಲಿ ಅಂದು ಹಾರೈಸಿ, ಆ ಉಂಗುರವನ್ನು ಪಾಂಡುವಿಗೆ ಕೊಟ್ಟು ಹೋದನು. ಪಾಂಡು ಆ ಉಂಗುರದ ಸಹಾಯದಿಂದ ಅದೃಷ್ಯರೂಪನಾಗಿ ಹಸ್ತಿನಾಪುರದಿಂದ ಶೌರ್ಯಪುರಕ್ಕೆ ಹೋಗಿ, ಅಲ್ಲಿ "ಕನ್ಯಾವ್ರತಭಂಗಭೀತಿಯಿಂ ಗಂಡುನೋಣಮಡ್ಡಂಪಾಱದಂತಾಗಿ ಸುತ್ತ ಏರ್ಪಟ್ಟಿದ್ದ ಕಾವಲನ್ನು ದಾಟಿ, ಬಂಗಾರದ ಕನ್ಯಾಂತಃಪುರದ ಏಳನೆಯ ಉಪ್ಪರಿಗೆಯಲ್ಲಿ ಆಕೆಯನ್ನು ಕೂಡಿಸಿದನು. ರಸಿಕ ಕವಿ ಈ ' ನವಸಾಂಪ್ರಯೋಗ ಶೃಂಗಾರ' ದ ವ್ರ್ಣನೆಯನ್ನು ಹೃದ್ಯವಾಗಿ ತಂದಿದ್ದಾನೆ, "ಒಗರದಧರಾಮೃತಂ ತುಳುಕಲಾಗದು, ಬೀಸರವಾಗದಪ್ಪು . . .' ಇತ್ಯಾದಿ ಮಾತುಗಳಲ್ಲಿ.

ಉಂಗುರವನ್ನು ತಗೆದು ಸ್ವಸ್ವರೂಪದಲ್ಲಿ ಆಕೆಗೆ ಕಾಣಿಸಿಕೊಂಡ ಪಾಂಡು, "ಕೊಂತಿಯ ಪೂಜಾಸಂಗಕ್ಕೆ ಮೆಚ್ಚಿ ಮೆಚ್ಚದಮಂಗಂ ಪ್ರತ್ಯಕ್ಷಮಾದವೋಲ್ ಶೋಭಿಸಿದನು. ಆಕೆಯ " ಅತ್ಯುತ್ಸುಕ ಯಾತಾಯಾತ ವ್ಯೊ್ಯತ್ತರಳ ತರುಣಿಮಾನೀತ ನೇತ್ರತ್ರಿಭಾಗಂ , ಆ ಶೋಭೆಯನ್ನು ಹೆಚ್ಚಿವಿಸುವಂತೆ ಚೆಲ್ಲಾಯಿತು. ಅನಿರೀಕ್ಷಿತವಾದ ಈ ಪುರುಷಸಂಗದಿಂದ ಆಕೆಯಾದರೂ, "ಚಂದ್ರೋದಯದೊಳ್ ಬಿಂದುವಿಡುವ ಮಣಿಶಕಾಕೆಯಂತೆ ಬೆವೆತು ಹೋದಳು. ಪಾಂಡು ಹರ್ಷಿಸಿ, ಆಕೆಯನ್ನು ಒಡಗೂಡಿ, ಸುಖಸ್ವಪ್ನದಂತೆ ಅದೃಶ್ಯವಾದನು.

ಪಾಂಡು ಕೋಂತಿಯರ ಸಮಾಗಮಚಿತ್ರವಿದು:

> ಅಳಿ ಮುಗುಳುಂ ತುಡುಂಕಿ ಮದಸೌರಭಮಂ ಸವಿವಂತೆ ಗಂಡುಗೋ
> ಗಿಲೆ ಪಡೆವಂತೆವೋಲ್ ಕಳಿಕೆಯೋಳ್ ರಸಮಂ ದಿವಸೇಂದ್ರನಬ್ಜಕು
> ಟ್ಮಲಮನಕರ್ಚುವಂತೆ ಮಧು ಮುಗ್ಧವನಾಂಗನೆಯೊಳ್ ವಿಕಾಸಮ
> ಗ್ಗಲಿಸಿರೆ ಕೂಡುವಂತೆ ಗಡ ಕೂಡಿದನಾಗಳೆ ಪಾಂಡು ಕೊಂತಿಯೋಳ್ ॥ (೪ ೯೩)

ಕೊಂತಿ ಗರ್ಭವತಿಯಾದಳು; ಪುತ್ರಜನನವಾಯಿತು. ಆದರೆ ವಿವಾಹಪೂರ್ವದ ಈ ಸಂತತಿಯನ್ನು ಚಿನ್ನದ ಸಂದೂಕದಲ್ಲಿಟ್ಟು ಹರಿವ ಯಮನೆಯಲ್ಲಿ ಕೆಳದಿಯರು ಹರಿಯಬಿಟ್ಟರು; ಮಹಾಭಾರತಸನ್ನಿವೇಶದ ನಿರೀಕ್ಷೆ ಆಶಂಕೆ ವ್ಯಗ್ರತೆಗಳು ಈ ಸಂದರ್ಭದಲ್ಲಿಲ್ಲದೆ ಸಾಮಾನ್ಯವಾಗಿದೆ, ನಿರೂಪಣೆ. ಆದರೆ ಯಮುನೆಯ ಪ್ರವಾಹದಲ್ಲಿ ತೇಲಿ ಬಂದ ಮಗುವನ್ನು ನದಿಯ ಮನೋರರತೆಯನ್ನು ನೋಡಿ ಆನಂದಿಸುತ್ತಿದ್ದ ಸೌಂದರಪುರದ ಅರಸು ಆದಿತ್ಯನು ಪರಿಗ್ರಹಿಸಿದ್ದು, ತನ್ನ ಪತ್ನಿಯರಲ್ಲಿ ರಾಧೆಯ ವಶಕ್ಕೆ ಅದನ್ನು ಒಪ್ಪಿಸಿದ್ದು ಲಲಿತಸುಂದರವಾಗಿ ನಿರೂಪಿತವಾಗಿವೆ. ವರ್ಣನೆಯ ಶೈಲಿ ನದಿಯ ಕಲರವದಂತೆಯೇ, ರಮ್ಯಲಹರಿಯಂತೆಯೇ ರಮಣಿಯವಾದದು. "ಪರಿವ ಕರಿನಿಱುಮುಗಿಲ ಮೇಗೆ ಪರಿವ ರವಿ ಮಂಡಲದಂತೆ ತೆರೆಮಸಗಿ ಪರಿವ ಜಗುನೆಯ ಪೊನ ಲೊಳೆ ಪೋಪ ಪೊನ್ನ ಮಂದಸಂ ಕಂಡು ತರಿಸಿ . . . ಎಂದು ಸಾಗುವ ಗದ್ಯವನ್ನು ಗಮನಿಸಬಹುದು. " ವಿಶಾಖೆಯಿಂದನೂರಾಧೆಗೆ ಬಂದ ಬಾಳೇಂದುವಿನದೆ ಶಿಶು ರಾಧೆಯ ಕೈಗೆ ಬಂದಿತು ಎಂದು ಕವಿ ತಿಳಿಸುವಾಗ, ಆತನ ಜ್ಯೌತಿಷಜ್ಞಾನವನ್ನೂ ನಾವು ಗಮನಿಸಬೇಕು.

ಕರ್ಣನಿಗೆ ಕಾನೀನ, ಕಾರ್ಣ, ರಾಧೇಯ, ರವಿಜ ಇತ್ಯಾದಿ ಹೆಸರುಗಳು ಎಂಬುವಃಡನ್ನು ಒಂದೇ ಕಂದಪದ್ಯದಲ್ಲಿ ಸಮರ್ಥಿಸುವ ಕವಿ, " ಕಿವಿಯೋಳ್ ಕರ್ಣಂ ಗಡ ಸಂಭವಿಸಿದಂ ಎಂಬ ಐತಿಯವನ್ನು

‘ಪುಸಿಯ ಹೊಟ್ಟಣ ಎಂದು ಹಳಿದಿದ್ದಾನೆ. ಆದರೆ “ ಕಿವಿವಿಡಿದು ಪುಟ್ಟಿ ಎಂದು ತಾನು ಹೇಲಿರುವುದಕ್ಕೆ ಏನು ಆಧಾರ? ಇದು ಸಹ ಸುಳ್ಳಿನ ಕಂತೆಯೇ ಅಲ್ಲವೆ? ವೈದಿಕ ಮತದ ಗರ್ಹಣೆ ಸ್ವಲ್ಪವುಂಟು, ಇಲ್ಲಿ. ಅನಂತರದ ಕರ್ಣಮಹಿಮಾವರ್ಣನೆಯ ೨-೩ ಪದ್ಯಗಳಾದರೂ ಇಲ್ಲಿಗೆ ಅಪ್ರಸ್ತುತವೇ.

ಅನಂತರದಲ್ಲಿ ಪಾಂಡುವಿಗೆ ಕೊಂತಿ ಮಾದ್ರಿಯರೊಂದಿಗೆ ಕ್ರಮಾವಾಗಿ ವಿವಾಹವೇನೋ ಜರುಗಿತು; ಇವರಿಗೆ ಧರ್ಮರಾಯಾದ್ಯರು ಪುತ್ರರಾದರು. ಧೃತರಾಷ್ಟ್ರನಿಗೆ ಗಾಂಧಾರಿಯೊಂದಿಗೆ ವಿವಾಹ ಜರುಗಿ, ಇವರಿಗೆ ದುರ್ಯೋಧನಾದ್ಯರು ಪುತ್ರರಾದರು. ಈ ವಿವಾಹ ಪುತ್ರಜನವ ವರ್ಣನೆಗಳೆಲ್ಲ ಯಾವ ಸಂಭ್ರಮ ಸಡಗರಗಳೂ ಇಲ್ಲದೆ  ಸಂಕ್ಷೇಪವಾಗಿ ಬಂದುಹೋಗಿವೆ.

ಮುಂದಿನ ಒಂದು ಪ್ರಕರಣ ಕಥೆಯ ದೃಷ್ಟಿಯಿಂದ ಸ್ವಲ್ಪ ಸ್ವಾರಸ್ಯವದ್ದು. ಸುಪ್ರತಿಷ್ಠ ಸುದರ್ಶನರ್ ಅ ಪೂರ್ವಭವ ವೃತ್ತಾಂತವೆಂದು  ಇದನ್ನು ಕರೆಯಬಹುದು. ಶೂರವೀರ ಮಹಾರಾಜನ ತಪೋಭಿಗಮನ ಅಂಧಕವೃಷ್ಟಿ ನರಪತಿವೃಷ್ಣಗಳಾ ರಾಜ್ಯಾರೋಹಣ ಇವನ್ನು ಮೊದಲು ಸಂಕ್ಷೇಪವಾಗಿ ಸೂಚಿಸಿ, ಅಲ್ಲಿಂದತ್ತ ಹನ್ನೆರಡು ವರ್ಷಗಳ ಅನಂತರದ ಕಥಾಸಂದಭಗಳನ್ನು ನಿರೂಪಿಸಲು ಎತ್ತಿಕೊಂಡು , ಮೊದಲು ಸುದರ್ಶನೋಪಸರ್ಗ ಸಂಘಟನೆಯನ್ನೂ ಸುಪ್ರತಿಷ್ಠ ಯತಿಯ ಕೇವಲಜ್ಞಾನೋತ್ಪತ್ತಿಯನ್ನೂ ಮೊದಲಿನಂತೆಯೇ ಸಂಕ್ಷೇಪವಾಗಿ ನಿರೂಪಿಸಿ. ಅನಂತರದಲ್ಲಿ ಅಂಧಕವೃಷ್ಣಯ ಪ್ರಶ್ನೆಯನ್ನೇ ನಿಮಿತ್ತ ಮಾಡಿಕೊಂಡು ಸೂರದತ್ತ-ಸುದತ್ತ ವೈಶರಚರಿತ್ರೆಯನ್ನು ವಿವರಿಸಲು ಕವಿ ತೊಡಗಿದ್ದಾನೆ. ಸೂರದತ್ತ-ಸುದತ್ತ ವವೈಶ್ಯರ ಚರಿತ್ರವರ್ಣನವೇ ಸುಪ್ರತಿಷ್ಠ-ಸುದರ್ಶನರ ಪೂರ್ವಭವ ವೃತ್ತಂತ. ಇಲ್ಲಿ ಧನಲುಬ್ದರಾದ ಇಬ್ಬರು ವ್ಯಾಪಾರಿಗಳ ಕೃಪಣಮನೋಧರ್ಮವನ್ನೂ  ಪ್ರಾಣಿಗಳ ಸ್ವಭಾವಸಹಜವಾದ ದ್ವೇಷಾಸೂಯೆಯ ಭಾವನೆಗಳನ್ನೂ ಮನೋಜ್ಞವಾಗಿ , ಚಿತ್ರವತ್ತಾಗಿ ಕವಿ ನಿರೂಪಿಸಿದ್ದಾನೆ.  ಎಂದಿನ ಶೃಂಗಾರಾತಿರೇಕದ ಚಿತ್ರಾಣಗಳಾಗಲಿ ವರ್ಣನೆಗಳ ಕೋಟೆಲೆಯಗಲಿ ವಿಲಕ್ಷಣವೂ ವಿಪರೀತವೂ ಆದ ಕಲ್ಪನೆಗಳಾಗಲಿ ಇಲ್ಲದೆ, ಈ ವೃತ್ತಾಂತಕಥೆ ಹೃದ್ಯವಾಗಿ ಸಾಗಿದೆ.

ಧನಲುಬ್ಧರಾದ  ಇಬ್ಬರು ವೈಶ್ಯರು, ಬಚ್ಚಿಟ್ಟ ದ್ರವ್ಯ ಪರಾಧೀನವಾಗಿದ್ದು ತಿಳಿಯದೆ ,“ ಮುರುಳ್ಮಸಗಿ ಪಸುಗೆಗೆಟ್ಟು ಪಸಿಯ ಪಸಿಯ ಬಡಿಗೆಗಳನೆತ್ತಿಕೊಂಡು ಮಿದುಳ್ಗಳಿಗೆ ತಲೆಯ ಸಿರ್ಪುಗಳುದಿರೆ ದೃಢಕ್ರೋಧಲೋಭಭರದಿಂದಂ ಮೋದಿದ ದೆಸೆಯಿಂದ ಮೊದಲ ನಗರಕ್ಕೆ ತುತ್ತಾದರಂತೆ. ಬೇರೆ ಬೇರೆ ಪ್ರಾಣಿಜನ್ಮಗಳನ್ನು ಎತ್ತಿಬಂದರು ಇವರು ., ಒಮ್ಮೆ ಗೂಳಿಗಳಾಗಿ ಹುಟ್ಟಿ ಒಂದನ್ನೊಂದು ಕಂಡು ಮಲೆತು , ತಲೆತಲೆಗೆ ಘಟ್ಟಿಸಿದಾಗ “ ಕಂದಂಗಳೊಳ್ ನಡು ಕೋಡುವರಂ ನೆಟ್ಟ ಕೋಡುಗಳಂ ವಿಳಿಯಂ ಕಟ್ಟಿ

ಒಂದನ್ನೊಂದು ಬೇರೆ ಮಾಡಿದರಂತೆ ಗೋಪಾಲಕರು ! ಹೀಗೆ ವರ್ಣನೆ ಸುರಸವಾಗಿ ಸಾಗಿದೆ. ಅಲ್ಲದೆ ಇಡಿಯ ಸನ್ನಿವೇಷದಲ್ಲಿ ಒಂದು ಬಗೆಯ ಗ್ರಮೀಣ ಕಳ್ಳಸಿಗರು ಹುಡುಕುತ್ತಿದ್ದರೆಂದು ಬರುವ ಸೂಚನೆಯನಿಲ್ಲಿ (೪-೧೧ ವ.) ನೆನೆಯಬಹುದು . " ಪುರಾಣಪುರುಷವ್ಯಾಲೀಕೃತ ಬಾಲಿ ಸುಗ್ರೀವಂಗಳಂತೆ ಎಂಬ ಉಪಮೆ ರಾಮಾಯಣದ ನೆನಪಿನಿಂದ  ಮೂಡಿದ್ದು ಅದರೆ ಬಳಾಸಿರುವ ಉದ್ದೇಶ ಹೀನವಾದ್ದು ಭವಬದ್ವೇಷದ ಪರಿಣಾಮವನ್ನು ದ್ವೇಷವು ದ್ವೇಷವನ್ನು ಪೋಶಿಸುತ್ತದೆಯೆಂಬ ಸತ್ಯವನ್ನು ಇಲ್ಲಿ ಮನವರಿಕೆ ಮಾಡಿಕೊಟ್ಟಿದೆ.

ಕಾವುವಸ್ತುವಿನ ಪ್ರಾಮುಖ್ಯದೃಷ್ಟಿಯಿಂದ ಈ ವೃತ್ತಾಂತದ ಬಳಿಕ ಸವಿಸ್ತರವಾಗಿ ಬರುವ ವಸುದೇವಲೀಲಾವಿಹರವ್ಯತಿಕರ ವರ್ಣನೆಯೇ ಪರಿಶೀಲನೆ ಯೋಗುವಾದ್ದು .

ವಸುದೇವನು ವೀರ-ಶೃಂಗಾರ ಕಾವ್ಯದ ಶೃಂಗಾರನಾಯಕನೆಂವಂತೆ ಇಲ್ಲಿಚಿತ್ರಿತನಾಗಿದ್ದಾನೆ . ಅವನು ಶೌರ್ಯಪುರದ ಸ್ತ್ರೀಸಮುದಯದ ಸಮ್ಮೋಹನಶಕ್ತಿಯಗಿ ಇದ್ದನೆಂಬುದನ್ನು ಕವಿ ಪರಿಪರಿಯಘಿ ಬಣ್ಣಿಸಿದ್ದಾನೆ. ಅವನ ಗಂಡುವರಿಜಿನ ವಿಲಾಸವಿಭ್ರಮಗಳನ್ನೂ ವೇಷಭೂಷಣಗಳ ಅಲಂಕಾರವೈಖರಿಯನ್ನೂ ಪೌರನಗಿಯರ ಮೋಹಚೇಷ್ಟಿತಗಳನ್ನೂ ಪರಿಪರಿಯಾಗಿ ವರ್ಣಿಸುವುದರಲ್ಲಿ ಕವಿಗೆ  ಯಾವ ಆಯಾಸವಾಗಲಿ ಬೇಸರವಾಗಲಿ ಇಲ್ಲ. ಈಗಾಗಲೇ ತಾನು ಕಡೆದು ಕಂಡರಿಸಿದ್ದ 'ಲೀಲಾವತಿ ಪ್ರಬಂಧ ದ ಶೃಂಗಾರನಾಯಕ ರೂಪಕಂದರ್ಪಅನ ರೂಪವಿಲಾಸಾದಿ ವೈಖಾರಿಗಳ ವರ್ಣನೆ ಕೈಯನ್ನು ಪಳಗಿಡಿದ್ದುದರಿಂದ ವಸುದೇವನ ರೂಪವಿಲಾಸಾದಿಗಳ ವರ್ಣನೆ ಅವನಿಗೆ ಕಷ್ಟವೇನೂ ಆಗಿರಲಾರದು. ಶೃಂಗಾರರಸಾಭಿನಿವೇಶಕ್ಕೆ ಎಡೆ ದೊರೆಯುತ್ತಿದ್ದಂತೆ , ಆವೇಶ ಬಂದವನ ಹಾಗೆ ಹುಮ್ಮಸಗೊಂಡು ಕವಿ ತನ್ನ ಕಾಮಕಳಾಪರಿಣಯನ್ನೂ ಶೃಂಗಾರರಸಜ್ಞ್ಯತೆಯನ್ನೂ ಪ್ರದರ್ಶಿಸಿರುವನೆಂದು ತೋರುತ್ತದೆ, "ವಸುಧೇಶನಣುಗದಮ್ಮಂ ವಸುದೇವಂ ಧರೆಗೆ ಕಣ್ಣುಮುಳ್ಳಾಗಿರ್ದಂ ಎಂಬುದಾಗಿಯೇ ಈ ಸಂಬಂಧದ ಪ್ರಕರಣವನ್ನು ಕವಿ ಆರಂಭಿಸಿರಬೇಕಾದರೆ, ಮುಂದೆ ಅದು ಹೇಗೆ ಬೇರೆ ನೇಮಿಕೃತಿಗಳಲ್ಲಿ ಇದರ ಬಗೆಗೆ ಹಿತಮಿತವಾದ ವಿವರಣೆ ವರ್ಣನೆಗಳು ಬಂದಿವೇಯೇ ಹೊರತು ಈ ವಿಸ್ತಾರ ವೈವಿಧ್ಯಗಳಿಗೆ ಅವು ಯಾವವೂ ಪ್ರವೇಶಿಸಿರುವ ಹಾಗಿಲ್ಲ.ವರ್ಣನೆಯೇ ಹುಚ್ಚಾದ, ಶೃಂಗಾರವೇ ನಚ್ಚಾದ ನೇಮಿಚಂದ್ರನು ದೊರೆತು ಸಂದರ್ಭವನ್ನು ಅದಕ್ಕಾಗಿ ಬಿಡದೆ ಬಳಸಿಕೊಂಡಿದ್ದಾನೆ, ಹೀಗೆ ಮಾಡುವಾಗ ಆತನ ಕಲ್ಪನಾಶಕ್ತಿಯೂ

ಅಪೂರ್ವಪದಪ್ರಯೋಗಪೌಢಿಮೆಯೂ ಇಲ್ಲಿ ಪುಟಗೊಂಡಿರುವ ಹಾಗೆ ತೋರಿ ಅತನ ವಿದ್ವತ್ತಿನ ವೈಶಾಲುಅವನ್ನರಿಯಲು ಸಹಾಯಕವಾಗಿದೆ.

ವಸುದೇವನ ಸೊಬಗನ್ನು ಕವಿ ಬಾಯಿತುಂಬ ವರ್ಣಿಸಿರುವುದು ಹೀಗೆ :

ಪದೆದಡಿಯಿಟ್ಟವೊಲ್ ಕುಸುಮದೊಳ್ ಮದನಾಯುಧಲಕ್ಷ್ಮಿ ಬಾಳಚೂ
ತದೊಳೆ ವಸಂತಲಕ್ಷ್ಮಿಯಉುರ್ವರ್ತಿಯೊಳುನ್ಮದಲಕ್ಷ್ಮಿ ಚಂದ್ರಬಿಂ
ಬದೊಳತಿಪೂರ್ಣಲಕ್ಷ್ಮಿ ನವಯೌವನಲಕ್ಷ್ಮಿ ವಿಳಾಸಲಕ್ಷ್ಮಿಯಂ ದದಿನಡಿಯಿಟ್ಟುದಂದು ವಸುದೇವನ ಚೆಲ್ವಡರ್ದಂಗಯಷ್ಟಿಯೊಳ್ ॥ (೪–೧೩೨)

ಇದೇ ಉತ್ಸಾಹ ವೈಖರಿಗಳಲ್ಲಿ ಮುಂದೆ ಹಲವು ವೃತ್ತ ಕಂದಗಳ ಮೆರೆವಣಿಗೆ ಸಾಗುತ್ತದೆ. ಕವಿ ಅವನನ್ನು ವಸಂತವಲ್ಲಭ, ನರೇಂದ್ರಚಂದ್ರಮ, ಕುಮರಮನ್ಮಥ ವಸುದೇವವಾಸವ ಮುಂತಾಗಿ ವರ್ಣಿಸಿದ್ದನೆ. ಇಂದ್ರ, ಮನ್ಮಥ್ಥಂ ಷಣ್ಮುಖ ಮೊದಲದ ದೇವತೆಗ್ಳ ವೇಷ ಭೂಷಣಗಳಲಿ ಅಲಂಕೃತನಾಗಿ ವಸುದೇವನು “ ಅಂಗನಚಿತ್ತದೊಳಂ ಪುರಾಂತರದೊಳಂ ಲೀಲವಿಹಾರ ನಡೆಸುತ್ತಿದ್ದನೆಂದು ಕವಿ ಕೈವಾರಿಸಿದ್ದಾನೆ. ವಸುದೆವನು ಓರಗೆಯ ಚೆನ್ನಿಗರೋಡನೆ, ಚದುರರಾದ ರಾಹಕುಮಾರರೊಡನೆ ಮಂತಿಪುತ್ರರೊಡನೆ ಹೀಗೆ ವನಕ್ರೀಡೆಗೆ ಜಲಕ್ರೀಡೆಗೆ ಸುತ್ತುತ್ತಿದ್ದನಷ್ಟೆ. ಇದರಿಂದ “ ಅರಸಂಗೀತಂಗೆ ಕಣ್ಸೋಲ್ತುಬಲೆಯರವರೇನಿರ್ವರೋ ಮೂವರೋ ನಾಲ್ವರೊ ಲೆಕ್ಕಂ ಲಕ್ಕೆಯುಂ ಕೋಟಿಯಂ ಎನೆ ವಶವಾದಪ್ಪರ ಎನ್ನುವಂತಾಯಿತು.

ಈ ವೈಖರಿಯ ವರ್ಣನೆ , ವಸುದೆವಪ್ರತಾಪವರ್ಣಾವೆ ಪಂಚಮಶ್ವಾಸದ ಒಂದು ಸುಧೀರ್ಘ ಗದ್ಯದಲ್ಲಿ ,ವಿಸ್ತೃತ ವಿಲಂಬಶೈಲಿಯಲ್ಲಿ ಮುನ್ನಡೆದಿದೆ.

ವಸುದೇವ ಕುಮರನು ಪುರಃಬಹಿಪುರಗಳಾಲ್ಲಿ ಸಂಚರಿಟುತ್ತಿರಬೇಕಾದರೆ “ಶೌರ್ಯಪುರದ ಸೌಭಾಗ್ಯಕರ್ತಿಯರು, ಸೋಲಕಾರ್ತಿರು, ತೇಪೆಕಾರ್ತಿಯರು, ತೀಯಕಾರ್ತಿಯರು, ಕಟ್ಟೇಯಕಾರ್ತಿಯರು, ಪೊಸವೇಟಕಾರ್ತಿಯರು, ಕಡುವೇಟಕಾರ್ತಿಯರು ತಮ್ಮ ತಮ್ಮ ಸ್ವಭಾವಾನುಸಾರವಾದ ಚೆಷ್ಟೇಗಳಿಂದ ವಸುದೇವನನ್ನು ಬಯಸಿ ಬಯಸಿ ಹಂಬಲಿಸುತ್ತಿದರು. ಹೀಗೆ ಆರಂಭವಾದ ಗದ್ಯಭಾಗದ ಆಶಯ ಸಮುದ್ರನಿಜಯನಲಿ ಪೌರರು ತಮ್ಮ ಗೃಹಸ್ಥಿತಿ ಅಸ್ತವ್ಯಸ್ತವಾದುದನ್ನು ಮೊರೆಯಿಟ್ಟು ಪರಿಹಾರವನ್ನು ಬೇಡಿದರೆನ್ನುವ ವರೆಗೆ ಏರಿಕೆಯ ರಭಸ ರಂಜನೆಗಳಲ್ಲಿ ಸಾಗಿದೆ . ಮನೋವೈಜ್ಞಾನಿಕವಾದ ನೆಲೆಯನ್ನು ಮುಟ್ಟುವಂತೆ ಸಾಗುವಭಾಗ ಗಳಿವೆ, ಇಲಿ ‘ ಮನದೊಳಿರ್ಪ ವಸುದೇವನ ರೂಪ ಗರ್ಭದೊಳ್ ಬಿಂಬಿಸಿ

ಬಿತ್ತಾದಂತೆಯಂ ಅಚ್ಚೊತ್ತಿದಂತೆಯಂ ಆತನಂತಪ್ಪ ಪುತ್ರರಂ ಪಡೆದರ್ –ಎಂದು ಪೌರರು ಗೋಳಿಡುವುದನ್ನು ಗಮನಿಸಬೇಕು.

ಸಮುದ್ರವಿಜಯ ಊರಿಬ್ಬೆಯಾದ ತಮ್ಮನ ಕಾಟದಿಂದ  ಪೌರರನ್ನು ಪಾರುಮಾಡಲು, ಆತನನ್ನು ಉಪಾಯದಿಂದ ಸವಿಮಾತಿನಿಂದ  , ಗೃಹಬಂಧನದಲ್ಲಿರಿಸಿದ ಮುಂದಿನ ಭಾಗದಲ್ಲಿ ನಾಟಕೀಯತೆಯ ಸೊಗಸು ದಟ್ಟೈಸಿದೆ. ಸಮುದ್ರವಿಜಯ ತಮ್ಮನನ್ನು ಉದ್ದೇಶಿಸಿ ಪ್ರಶ್ನಿಸಿದ್ದು ಹೀಗೆ :

ಇದೇಕೆ ಮುಖಚಂದ್ರನೀ ಪಗಲ ಚಂದ್ರನೊಂದಂದಮಾ
ಯ್ತಿದೇಕಧರಪಲ್ಲವಂ ನಿಧುರಪಲ್ಲವಚ್ಛಯಮಾ
ಯ್ತಿದೇಕನುಜ ನಿನ್ನ ಮೆಯ್ ಪೊಸೆದ ಪೂವಿನಂತಾದುದಾ
ನಿದಂ ಬಗೆದೆನಾಡುವೋ ಬಿಸಿಲೊಳೀಗಳಬ್ಜೇಕ್ಷಣಾ ॥

ಹೀಗೆ ಮುನ್ನಡೆದು, “ಅಣ್ಣನಿಕ್ಕಿದುಗುಱಮಂ ದಾಂಟದೆ ತಮ್ಮನು ಗೃಹಬಂಧನದಲ್ಲಿದ್ದು ಕೊಂಡ ಕಾವ್ಯಭಾಗದ ವರೆಗೆ ಈ ಪುಟ್ಟ ಸಂವಾದಭಾಗ  ನಾಟಕದ ಒಂದು ದೃಶ್ಯವೆಂಬಂತಿದೆ.

ವಸುದೇವನಿಗೆ ವಸುದೇವನಿಗೆ ಚೇಟಿಕೆಯೊಬ್ಬಳ ಮೂಲಕ ಹೇಗೋ ಅಣ್ಣನ ಉಪಾಯ ತಿಳಿದು ಹೋಯಿತು. ಆಕೆ ‘ಸೆಱೆಯೊಳಿರ್ದುಂವಿಕಾರತನಮನೊಂದು ಕೋಡಗಂಗಳೊಳ್ ಕಂಡನೊಂದಂ ನಿನ್ನೊಳ್ ಕಂಡನ್ ಎಂದು ಕಟಕಿಯಡಿದಾಗ ಅವನು ಅವಳನ್ನು ಕಾಡಿ ನಿಜವನ್ನು ತಿಳಿಯುವಂತಾಯಿತು.

ಇರು ಮುಟ್ಟಮೆಂದು ತಾಂ ಚ
ಪ್ಪರಿಸಿದೊಡಾನಿರೆನೆ ಮುಚ್ಚುಮಱೆಯೇಕೆಯೊ ಶ
ರ್ಕರೆ ನಾಲಗೆ ನೃಪರೆರ್ದೆ ಕ
ರ್ತರಿಯಿಂಬುದು ಜಳಕನಾದುದೆಮ್ಮಗ್ರಜನಿಂ ॥

ತಾಂ ಗಡಮಿಕ್ಕುವಂ ಸೆಱೆಯೊಳಾಂ ಗಡಮಿರ್ಪೆನಿದಕ್ಕುಮುಕ್ಕುಮೆ
ನಂ ಗಡ ಕಂಡನೀ ನೆಗಳ್ದಿ ತಪ್ಪದನುಳ್ಳೊಡೆ ತಪ್ಪೆ ಕಲ್ಪಿಸ
ಲ್ಕಾಂ ಗುರುವಲ್ಲನೇ ಮುನಿದನೀ ಪುರುಳಿಲ್ಲದ ಪೌರರೊಳ್ದೊಡ
ಣ್ಣಂ ಗಡ ಮುಂತೆ ತಪ್ಪನಿತುಮೆಮ್ಮದು ಸ್ವೈರಣೆ ತಮ್ಮದಲ್ಲವೇ ॥

ಹೀಗೆ  ವಸುದೇವ ಗಾಢವಿಷಾದದಿಂದ ಚಿಂತುಸುವುದು ಸಹಜವಾಗಿದೆ ; ಓದುಗರ ಸಹಾನುಭೂತಿಯನ್ನು ಅವನು ಸುಲಭವಾಗಿ ಸಂಪಾದಿಸಿದ್ದಾನೆ.

ವಸುದೇವ ಹೇಗೆ ಚಿಂತಿಸಿ " ಸಾವಂತಪ್ಪ ಕನಸುಗಂಡೊಡೆ ಎದ್ದನಂತೆ ; ಕಂಪುಮುಂ ಎನ್ನುಮುಂ ಸೆಱಗೆಯ್ವೊನಾವೊಂ ಎಂಬುದಾಗಿ ದೇಶಾಂತರಹೋಗಲು ನಿಶ್ಚಯಿಸಿದನಂತೆ. ಆ ಮೇಲಿನ ಕತ್ತಕೆಯು ವರ್ಣನೆ , ಕವಿಸಮಯದ ತುತ್ತು!

ಅರಮನೆಯ ಪ್ರಾಕಾರವನ್ನು ವಿದ್ಯಾಧರಕರಣದಿಂದ ಹೊಸಲು ದಾಟುವಂತೆ ದಾಟಿ, ಹೊಳಲನ್ನು ಬಿಟ್ಟು ಹೊರಟು , ಹೋರವೋಳಾಲು ತಲುಪಿ ಶ್ಮಶಾನಕ್ಕೇ ಸೇರಿದ ಈ ಭಾಗದಲ್ಲಿ ಶ್ಮಶಾನವರ್ಣನೆಯ ಹಲವು ಸುಂದರ ಬಿಡಿಚಿತ್ರಗಳು, ಆ ಕಾಲದ ಶ್ಮಶಾನಭೂಮಿಯ ಚಟುವಟಿಕೆಗಳನ್ನು ಪ್ರತಿಬಿಂಬಿಸುವಂತೆಯೇ ಇರುವುದು ಸ್ತುತ್ಯವಾದರೂ , ಪ್ರಸ್ತುತ ಕಥೆಯ ಐಕ್ಯದ ದೃಷ್ಟಿಯಿಂದ ಅವು ತುಂಬ ವಿಸ್ತಾರವಾಯಿತು, ಅನಾವಶ್ಯಕವಾಗಿತ್ತು ಎಂದು ತಿಳಿಯದೆ ವಿಧಿಯಿಲ್ಲವಾಗಿದೆ. ಪ್ರಾಯಃ ಪ್ರಾಚೀನ ಕನ್ನಡ ಸಾಹಿತ್ಯದ ಶ್ಮಶಾನಚಿತ್ರಣದಲ್ಲಿ ಇಷ್ಟು ಸೊಗಸಾದ ಚಿತ್ರಣಗಳು ಹೆಚ್ಚಾಗಿ ಬಂದಿರಲಾರವು . ಶೂಲಕ್ಕೇರಿಸಿದ ಅಪರಾಧಿಗಳ ಮತ್ತು ವಾಮಮಾರ್ಗದ ಸಾಧಕರಸಂಬಂಧವಾದ ಇಲ್ಲಿಯ ಕೆಲವು ಚಿತ್ರಗಳು ಕುತೂಹಲಜನಕವೂ ಸ್ವಾರಸ್ಯಕರವೂ ಆಗಿರುವಂತೆ, ಮಾನುಷಚರ್ಯೆಯನ್ನಾರೋಪಿಸಿದ ಮುರುಳುಗಳ ವಿಚಿತ್ರ ವರ್ತಗಳು ವಿನೋದಾಸ್ಪದವೂ ವಿಲಕ್ಷಣವೂ ಆಗಿ ತೋರುತ್ತವೆ. ವರ್ಣನೆಯ ಬಹುಬಾಗದ ದೃಶ್ಯಗಳು ಎಷ್ಟರಮಟ್ಟಿಗೆ ದೇಶೀಯವೋ ಅವುಗಳನು ನಿರೂಪಿಸಿರುವ ಶೈಲಿಯ ಬಗೆಯೂ ಅಷ್ಟೇ ಮಟ್ಟಿಗೆ ಅಕೃತಕವೂ ನಿರರ್ಗಳಾವೂ ಸಮರ್ಥವೂ ಸರಳಾವೂ ಆಗಿ ದೇಶೀಯವೇ ಆದುದರಿಂದ ಅವುಗಳಾನ್ನು ಓದುವುದರಲ್ಲಿ ಸೊಗಸೆನಿಸುತ್ತದೆ.

ಉದಹರಣೆಗೆ ಒಂದು ಸನ್ನಿವೇಶವನ್ನಿಲ್ಲಿ ಉದ್ಧರಿಸಬಹುದು :

ಊಡಿದೆನೋದಲಿಟ್ಟೆನುಡಕಲ್ಪುದುಮಣ್ಣನ ಕೂಸುದಂದೆನಾಂ
ಬೇಡೆನೆ ಮೀಱಕಳ್ಳರೊಡನಡಿಯೆ ಪೆತ್ತ ಬಸಿರ್ಗೆ ಸಂತಸಂ
ಮಾಡಿದೆಯಿಂದಿಂದೇಂ ಮಗನೆ ಪಣ್ಣನೆ ನುಣ್ಮೊಗದಲ್ಲಿ ಮೀಸೆಗಳ್
ಮೂಡದ ಮುನ್ನ ನಿನ್ನ ಪೆಗಲೊಳ್ ಲೊಸಸೀಲಮಿದಂತು ಮೂಡಿತೋ ॥
ಎಂದು ಬಾಯಂ ಬಿಡಿದು ಬಸಿಱಂ ಬಡಿದುಕೊಳ್ಬ ತಯ್ಗೆ ತರಳನಿಂತೆಂದಂ
ಪಣವುಂಡೆಂ ಬಂದಿಯೊಳ್ ಬಾಲಕನೆ ಪಲಗೆಜೂಜಾಡಿದೆಂ ಸೂಳೆಗೆಯ್ದೆಂ
ಪಣಿದಂಬೋಂಯ್ದೆಂ ತೊಟಿಲ್ದೆಂ ಪಿರಿಯ ಕಳಾವುಮಂ ಕಳ್ದೆನಿಂಡಣ್ಮೆ ಸಾಯ
ಲ್ಕಣಿದಂ ಪೊತ್ತತ್ತು ಸೂಲಂ ಬಲದ ಪೆಗಲೊಳಾಂ ಬೀರನಾದೆಂ ಮುರುಳ್ಳಾ

ಯ್ಗಣಿಸಾದೆಂ ಮೆಚ್ಚಿದಂತುಳ್ಳವರನೆ ಪಿಡಿದುಂಡಪ್ಪೆನೆಂದುರ್ವುತಿರ್ದಂ ॥ (೫-೩೫-೩೬)

ಈ ಚಿತ್ರ ಪೋಲಿಯಲೆಯುವ ಕಿರುಹರಯದ ಯುವಕನೊಬ್ಬನ ಧಿಮಕು, ಅವನ ತಾಯಿಯ ಹೊಟ್ಟೆಯ ಸಂಕಟ ಎರಡನ್ನೂ ಸಮರ್ಥವಾಗಿ ಚಿತ್ರಿಸಲು ತಕ್ಕುದಗಿದೆ. ಇದು ಸಾಹಿತ್ಯದಲ್ಲಿ ಸಮಕಾಲೀನತೆಯ ಅಂಶವನ್ನು ತೋರಿಸುವ ಕೃತಿಬಾಗಗಳಾಲ್ಲಿ ಒಂದು.

ಈ ಹಿನ್ನೆಲೆಯೇನೋ ದಾರುನವೂ ಬೀಭತ್ಸವೂ ಆದ ದೃಶ್ಯಗಳಿಂದಾಗಿರುವುದು ನಿಜ ! ಅದರೆ ಈ ಶ್ಮಶಾನದಲ್ಲಿಯ ದೃಶ್ಯಗಳಾನ್ನು ನೋಡುತ್ತ ಮುನ್ನಡೆದು ವಸುದೇವನು ಶೂಲದ ಮೇಲಿನ ಹೆಣದ ಸೆರಗನ್ನು ಹರಿದುಕೊಂಡು, ಅದರ ಬಾಯಿಂದ ಬಸಿಯುತ್ತಿದ್ದ ನೆತ್ತರಲ್ಲಿ , ಮುರುಳಿ ಕರುಳನ್ನು ಕಿತ್ತು ಹೊಸೆದು ಮಾಡಿದ ತೂಳಿಕೆಯನ್ನದ್ದಿಕೊಂಡು ಮುರುಳಿನ ಕಯ್ಯ ಕೊಳ್ಳಿಯ ಬೆಳಾಕಿನಲ್ಲಿ ತಾನು ಪ್ರಾಣಾರ್ಪಣೆಮಾಡಿಕೊಂಡುದಾಗಿ ಅರ್ಥಬರುವ ಪತ್ರವೊಂದನ್ನು ಬರೆದಿಟ್ಟು ಅಲ್ಲಿಂದ ದೋರದೇಶಾಂತರಗತನದನೆಂದು ವರ್ಣಿಸಿರುವ ಭಾಗ ಮಾತ್ರ ಅತಿರಂಜನೆಯದು ಎನ್ನುವುದರಿಂದಾಗಿ ತನ್ನ ಸಹಜತೆಯ ಸೊಗಸಿಗೆ ಅದು ಎರವಾಗುತ್ತದೆನ್ನಬೇಕು.

ಸಮುದ್ರವಿಜಯನು ಪಿತೃವನಪಾಲಕನ ಮೂಲಕ ತನ್ನಲ್ಲಿಗೆ ಬಂದ ತಮ್ಮನ ಆಭರಣಗಳಾನ್ನು ನೋಡಿದ ಪತ್ರದ ಒಕ್ಕಣೆಯಣ್ನು ಓದಿಸಿದ : ತಮ್ಮನ ಸಾವು ನಿಜವೆಂದೇ ತಿಳಿದು ಹಲುಬಿದ . ಆ ಪತ್ರದ ಒಕ್ಕಣೆಯ ಸೊಗಸು ಮಿಗಿಲಾದುದು. ವಸುದೇವನು ನಿರಪರಾಧಿಯಾಗಿದ್ದೂ ಲೋಕಾಪವಾದಕ್ಕೆ ಗುರಿಯಾಗಬೇಕಾಗಿ ಬಂದ ವಿಷಮಸಂದರ್ಭ ಆತನಿಗೆ ಎಷ್ಟು ಮನಸಿಕಹಿಂಸೆಯನ್ನೊಡ್ಡಿತು ಎನ್ನುವುದರ ಸ್ಪಷ್ಟಚಿತ್ರಅಲ್ಲಿ ದೊರೆಯುತ್ತದೆ :

ಪಾದರಿಗನೆಂದು ಪರ ಪರ
ವಾದಪರಪ್ರಭುಗೆ ದೂಱಿದರ್ಗಡ ತಮಗಾಂ
ಸೋದರನಲ್ಲೆಂ ಬಸದಿಯೊ
ಳೋದೆಂ ಪರವೆಣ್ಗೆ ಮಱಿದುಮೆಱಗಿದ ದಿವಸಂ ॥
ಇದು ತಮ್ಮಿಂದಾದುದೆ ಮ
ನ್ಮಥನ ಮದಾವೇಶದಿಂದಮಾಯ್ತೆನ್ನಯ ತು
ಪ್ಪದೊಳನೆ ಬೆಂದನ್..... (೫-೪೨-೪೭)

ಹೀಗೆ ಆತ ಹೋಳಾಡುವುದು ನಿಜ ಆದರೆ ಆತ ದಿಟವಾಗಿ ಸಾಯುದೆ , ಸತ್ತ ಹಾಗೆ ಸುಳ್ಳಕಾಗದ ಬರೆದು ಕಣ್ಮರೆಯಾದುದು ಸನ್ನಿವೇಶವನ್ನು ಕೃತಿಮಗೋಳಿಸಿದಂತೆ ಅಗಿಲ್ಲವೇ ಎನ್ನಿಸವುದು. ಸಮುದ್ರವಿಜಯ ತಮ್ಮ ಸತ್ತನೆಂದೇ ಬಗೆದು ಹಲುಬಿದ್ದು ಇದಕ್ಕಿಂತ ನೈಜವಾದುದು ಎನ್ನಬೇಕು. ಈ ಸಂದರ್ಭದಲ್ಲಿ " ಹಾ ವಸುದೇವ ಹಾ ಹರಿಕುಲಾಂತಕ .. .. ಎಂದೂ " ಮನಸಿಜನಂದು ಬೆಂದನೆ ಹರಾನಳನಿಂ ಪುಸಿಯಿಂದು ಬೆಂದನೆವೆನೊ ವನ,ಮಿಂದು ಶೂನ್ಯ ಮೆಳವೆಂಡಿರ ಗಾವಣಮಿಂದು ಶೂನ್ಯಂ .. ( ೫-೫೧ ,೫೨) ಎಂದೂ ಪ್ರಲಾಪಿಸಿದ್ದು ರನ್ನನ ದುರ್ಯೋಧನವಿಲಾಪದ ಸ್ಪಷ್ಟ ಪ್ರಭಾವಾವನ್ನು ಕೇಳಿದ ಮೆಲೆಯೇ ಆತನಿಗೆ ಸಮಧಾನವುಂಟಾದುದು .

ಮುಂದಿನ ಕೆಲವು ಪ್ರಕರಣಗಳು ವಸುದೇವನ ಲೀಲಾವಿಹಾರಸಂಬಂಧವಾದವು. ಇವುಗಳಾಲ್ಲಿ ಮೊದಲನೆಯದು ವಸುದೇವ-ಶ್ಯಮಳೇಯರ ವಿವಾಹ ವೃತ್ತಾಂತ .ಇದು ಶೃಂಗಾರ ನಾಟಕವೊಂದರ ರತಿರಾಗವಿಲಶಿತವಾದ ಯಾವುದೋ ಸ್ವಪ್ನಲೋಕದ ದೃಶ್ಯವನ್ನು ಅನುಸರಿಸಿದಂತೆ ತೋರುತ್ತದೆ. ಇಲ್ಲಿಯ ಕಥಾಸಂವಿಧಾನರಚನೆ ನೇಮಿಚಂದ್ರನ ಸ್ವತಂತ್ರ ಪ್ರತಿಭೆಯ ಫಲವಾದ ಕಲಾಸೃಷ್ಟಿ . ಆತ ಶೃಂಗಾರವನ್ನು ಸೆರೆಹಾಕಿಃಡ ಕಾಲಾಕಾಂತನೆ ಸರಿ. ಅಂಗಜಸೌಖಿಅವಾಟದಂತಿದ್ದ ವಿಜಯಖೇಟಪುರವನ್ನು ವಸುದೇವನು ಸಮೀಪಿಸಿ ಆದ ಮೇಲೆ ಬಹಿಪುರದ ಒಂದು ನಂದನವನದ ತಾವರೆಗೊಳಾದಲ್ಲಿ ಆತನು ಸುಖಮಜ್ಜನ ಮಾಡಿ ಸಾಕ್ಷಾತ್ತಾಗಿ ಅಂಗಜನಂತೆಯೇ ಅಲಂಕಾರಮಾಡಿಕೊಂಡನೆಂಬುದನ್ನು ವೈಖರಿಯಿಂದ ವರ್ಣಿಸುವುದರ ಮೂಲಕ ಅರ್ಧನೇದಲ್ಲಿ ವೃತ್ತಾಂತವನ್ನು ಮೊದಲುಮಾಡಿದೆ. ಇಲ್ಲಿ ಕವಿಯ ಪ್ರಕೃತಿಪ್ರೇಮ, ಶಬ್ದಾಲಂಕಾರದ ಮೋಹ ಎರಡೂ ಒಟ್ಟಿಗೆ ಪ್ರಕಟಗೊಂಡಿವೆ.

ಮಗಧರಾಜಪುತ್ರಿ ಶ್ಯಮಳೆ ವಿನೋದವಿಹಾರದಲ್ಲಿದ್ದು ವನಪಾಲಕರ ಮೂಲಕ ಕಾರಣಪುರುಷನ ಅಗಮನ ತಿಳಿದಳು.ಈ ಧೀರಲಲಿತೆ ಸಖೀಸಹಾಯೆಯಾಗಿ , ಮಾನಿನ ಮರದ ಅಡಿಯುಲ್ಲಿ ಮಲಗಿ ಪಥಪ್ರಿಶ್ರಮವನ್ನು ಆರಿಸಿಕೊಳ್ಳುತ್ತಿದ್ದ ವಸುದೇವನ ಸೇವೆಗೆ ತನನ್ನು ಒಪ್ಪಿಸಿಕೊಂಡಳು. ವಸುದೇವನು ಸಿದ್ದೆತಿಳಿದೇಳುತ್ತಲೂತನ್ನ ಕಣ್ಣವಿಗೆ ಕೊರತೆ ಬಂದಿತಲ್ಲಾ ಎಂದು ಮರುಗುವಮಟ್ಟಿಗೆ ಶ್ಯಾಮಳೆ ತನನ್ನು ಆತನಲ್ಲಿ ಐಕ್ಯಗೊಳಿಸಿದ್ದಳೆಂದು ಇಲ್ಲಿ ಚಿತ್ರಿಸಿದೆ. ಶ್ಯಾಮಳೆಯ ಪಾತ್ರಸೃಷ್ಟಿ ಆಕೆಯ ಸಖಿ ಚಿತ್ರಲೇಖೆಯ ಪ್ರಸ್ತಾವದಿಂದ ಪರಿಪೋಷಣೆಗೊಂಡಿದೆ. ಕಾವ್ಯರಂಗಸ್ಥಲದಲ್ಲಿ ಈ ಸಖೀಪಾತ್ರದ ಪ್ರವೇದವೇ ನಾಟಕೀಯವಾಗಿದೆ. ಅವಳ ವ್ಯಕ್ತಿವರ್ಣನೆಯಲ್ಲಿ ಯಾವುದೋ ಶಿಲ್ಪಕೃಪಿಯ ಪ್ರೇರಣೆಯಿರುವಂತಿದೆ. ವೃತ್ತಾಂತದ ಮುಖ್ಯ ಕಥಾಸಂಗತಿಯಾದ ಶ್ಯಾಮಳೇಯ ವಿವಾಹವಿಷಯದ ಆದೇಶವು ಸಖಿಯ

ಮುಖಾದಿಂದಲೇ ನಿರೂಪಿತವಾಗಿದೆ. ಅವಳೇ ನಿಜವಾಗಿ ವಸುದೇವ–ಶ್ಯಾಮಳೆಯರ ವಿವಾಹಬಂಧನವನ್ನು ಬೆಸೆದ ಪ್ರಿಯಾದೂತಿಕೆ. ಸಮಗ್ರವೃತ್ತಾಂತವು ಒಂದು ಶೃಂಗಾರನಾಟಕದ ದೃಶ್ಯವೇ ಎನ್ನುವ ಮಟ್ಟಿಗೆ ಸೊಗಸುಗೊಂಡಿದೆ. ಅದರೆ ಸುಂದರ ಸುಕುಮಾರವಾದ ಈ ವೃತ್ತಾಂತದ ಚಿತ್ರಣದಲ್ಲಿಯೂ ಕವಿಯ ರತಿವರ್ಣನಚಾಪಲ್ಯದ ಫಲವಾಗಿ ಹಿತವಲ್ಲದ ಸಂಭೋಗಶೃಂಗಾರದ ಎರಡು ಪದ್ಯಗಳು ದೃಷ್ಟಿಬೊಟ್ಟಿನಂತೆ ಸೇರಿಕೊಂಡಿವೆ. ವಿಷಮನೃತ್ಯಶಾಂತೆಯಾಗಿ ಮಲಗಿದ್ದ ಶ್ಯಾಮಳೆಯನ್ನು ಬಿಟ್ಟು ತೆರಳಿದಾಗ , ವಸುದೇವ ಆಕೆಗೆ ಸಂದೇಶವನ್ನು ಬಿಟ್ಟು ಹೀಗೆ ಹೋದನಂತೆ :

ಶ್ರವದಿಂ ಭಾಳಕ್ಕೆ ಬಾನಲ್ವರಿದ ಕುರುಳ ಕಸ್ತೂರಿಕಾರೇಣುಚಾಳ

ದ್ರವಮಂ ಕಂಡರ್ದಿಕೊಂಡೊಳ್ನನೆಯ ಮೊನೆಯೊಳಾಂ ಬಂದೆಪೆ ಪೋಗಿ ತಾನ

ನ್ನವರಂ ನಿಶ್ಚಿತಮಿರ್ಕೇನಲಸಳೆ ನೆಲಸಿರ್ಪಾಗಳೆಂದಾ ಸುಕೇಶಿ

ಶ್ರವಣಶ್ರೀಪತ್ರದೊಳ್ ತಾಂ ಬರೆದಱಿಯದವೋಲ್ ಪೊದನಲಿ ಕುಮಾರಂ ॥

ಇಂತಹ ಸುಕುಮರವಾದ ಕಲ್ಪನೆಗಳು ನೇಮಿಚಂದ್ರನಲ್ಲಿ ಹೇರಳವಾಗಿ ದೊರೆಯುತ್ತವೆ.

ಎರಡನೆಯ ಪ್ರಕರಣ, ವಸುದೇವ–ಶ್ಯಾಲ್ಮಲಿದತ್ತೆಯರ ವಿವಾಹವೃತ್ತಾಂತ. ಇದು ಈ ಮೊದಲಿನ ವೃತ್ತ್ಯಾಂತಕ್ಕಿಂತ ವಿಸ್ತಾರವಾದ್ದು ; ಕಿನ್ನರಿಗೀತ್ ನಗರದ ವಿದ್ಯಾಧರರಾಜ ಅಶನಿವೇಗನ ಪುತ್ರಿ ಶಾಲ್ಮಲಿದತ್ತೆಯನ್ನು ನಿರೂಪಿತವಾಗಿದೆ. ಈ ವೃತ್ತಾಂತದ ವ್ಯಾಪ್ತಿ ೫ ನಯ ಆಶ್ವಾಸದ ಅಂತ್ಯದಲ್ಲಿ ತೊಡಗಿ ೬ನೆಯ ಆಶ್ವಾಸದ ಆದಿಭಾಗದ ವರೆಗೆ. ಆದೇಶಪುರುಷನಾದ ವಸುದೇವನೌ ಅಶನಿವೇಗನ ಸೇವೆಯ ಖಚರಯುಗಳಾವು ಸಿದ್ಧಪಡಿಸಿದ ಮಣಿವಿಮಾನವನ್ನೇರಿ ಕಿನ್ನರಗೀತ್ ಪುರದ ಕಡೆಗೆ ಪಯಣಿಸಿದನೆಂಬಲ್ಲಿಗೆ ಪಂಚಮಾಶ್ವಾಸ ಮುಗಿದಿದೆ. ಎಂದಿನಂತೆ ಇಲ್ಲಿಯೂ ನೇಮಿಚಂದ್ರನು ಒಂದು ಸಮಗ್ರವೃತ್ತಾಂತವನ್ನು ಈ ಆಶ್ವಾಸದ ಕೊನೆಗಿಷ್ಟು ಆ ಆಶ್ವಾಸದ ಮೊದಲಿಗಿಷ್ಟು ಎಂಬಂತೆ ಇಬ್ಬರವಾಗಿ ಒಡೆದು ಹಂಚಿದ್ದಾನೆ . ವೃತ್ತಾಂತದ ಪೂರ್ವಭಾಗವೆಲ್ಲ ಪೂರ್ತಿಯಾಗಿ ಅರಣ್ಯ ವರ್ಣನೆ ಸರೋವರವರ್ಣವೆಗಳಿಂದ ವ್ಯಾಪೃತವಾಗಿ ಉತ್ತರಭಾಗದಲ್ಲಿ ಕಥೆಯೆಂಬುದು ಹಿತಮಿತವಾದ ವರ್ಣಾನಾಂಶಗಳಿಂದ ಕೂಡಿ ಮಂದವೂ ಅಲ್ಲದ, ತ್ವರಿತವೂ ಅಲ್ಲದ ವೇಗದಲ್ಲಿ ಸಾಗಿದೆ. ನೇಮಿಚಂದ್ರನು ಹೇಗೆ ಶೃಂಗಾರಪ್ರಿಯನಾದ ಕವಿಯೋ ಹಾಗೆಯೇ ಪ್ರಕೃತಿಪ್ರಿಯನಾದ ಕವಿಯೂ ಆಗಿದ್ದಾನೆ. ಅರಣ್ಯವರ್ಣನೆ ಕವಿಯ ಮೆಚ್ಚಿನ ವಣ ವರ್ಣನೆಗಳಾಲ್ಲಿ ಒಂದು ವಿಂಧ್ಯಕ ವಾಗುರೆಯರ ವೃತ್ತಾಂತಾವಸರದಲ್ಲಿ ಮಗಧಮಂಡಲದ ಕಾನನವನ್ನು ವರ್ಣಿಸುವಾಗೊಮ್ಮೆ ಇದು ಬಂದಿದೆ .ಪ್ರಸ್ತುತ

ವೃತ್ತಾಂತದಲ್ಲಿಯೂ ಅದೇ  ಧಾಟಿಯನ್ನು ಹಿಡಿದು ವನವರ್ಣನೆ ಬ,ಂದಿದ್ದರೂ ಅಲ್ಲಿಗಿಂತ ಇಲ್ಲಿ ಅದು ವಿಸ್ತಾರವಾಗಿದೆ. ಆದರೆ ಈ ವರ್ಣನೆ ಬಂದಿದ್ದರೂ ಅಲ್ಲಿಗಿಂತ ಇಲ್ಲಿ ಅದು ವಿಸ್ತಾರವಾಗಿದೆ. ಅದರೆ ಈ ವರ್ಣನೆಯ ಬಹ್ವಂಶ ಕವಿಸಮಯನಿಷ್ಠವಾದ್ದು , ಅಲಂಕಾರಚಮತ್ಕಾರಗಳ ಪ್ರದರ್ಶನಕ್ಕೆ ಮೀಸಲಾದ್ದು . ಇದರಲ್ಲಿ ಉತ್ತಮವಾದ ಪದ್ಯಗಳು ಕೆಲವಾದರೂ ದೊರೆಯುತ್ತವೆ ಎನ್ನುವ ಒಂದು ಸಮಾಧಾನ.

ಇದು ಒಂದು ಸರೋವರದ ವರ್ಣನೆ :

ಗಂಗೆಯ ಗೋತ್ರವೋ ಸೋದೆಯ ಸಾರವೋ ಬೆಳ್ಳಗೆಯೊಂದು ಬಿತ್ತೊ ಮ

ತ್ತಿಂಗಡಲಿರ್ದ ಬೇರೋ ಪೊಸಮುತ್ತಿನ ಪುಟ್ಟುವ ನೀರೋ ತೋರ್ಪ ಬೆ

ಳ್ದಿಂಗಳ ಬಯ್ಕೆಯೋ ಬನದ ದೀವರೆಯರ್ಕಳ ಕಣ್ಣ ಬೆಳ್ಪು ಬೆ

ಳ್ಪಂಟೆಡೆದತ್ತೊ ಪೆಱ್ಮೆನೆ ನಿರ್ಮಲವಾದುದು ನೀರಾಂಜಕರಂ ॥

ಒಂದು ಪ್ರಯಣಸಂದರ್ಭದ ಚಿತ್ರಣದಲ್ಲಿ ಹಲವಾರು ಪದ್ಯಗಳ ಈ ವನವರ್ಣನೆಯ ಹಿನ್ನೆಲೆ ಅನಾತ್ಯವಾಗಿದ್ದು,  ಕವಿಯ ದೌರ್ಬಲ್ಯವನ್ನಿದು ತೋರಿಸದೆ ಇರುವದಿಲ್ಲ. ಇಂಥ ಹಿನ್ನಲೆಯಲ್ಲಿ ವಸುದೇವನು 'ಗಜಶೃಂಗಾರಗೊಂಡು ಕೊಳದ ತಡಿಯಲ್ಲಿ ಸಮವಸರಣದ ಅಶೋಕವೃಕ್ಷದಂತಿದ್ದ ಅಶೋಕವೃಕ್ಷದ ನೆರಳಲ್ಲಿ ಕುಳಿತಿದ್ದನೆಂದು ಈ ೨ನೆಯ ವೃತ್ತಾಂತ ಆರಭವಾಗಿದೆ. ಕುಸುಮಾಕರವೆಂಬ ಕಮಳಾಕರದಿಂದ ಎದ್ದು ಬಂದ ಮಹೋಗ್ರಮದಗಜವನ್ನು ವಸುದೇವ ಏರಿ ಅಂಕೆಗೆ ಒಳಪಡಿಸಿದನು. ಇದು ಕಾರಣಪುರುಷನ ಆಗಮನ ಸೂಚಿಸುವ ಸಂಕೇತವಾಗಿ, ಶಾಲ್ಮಲಿದತ್ತೆ ವಸುದೇವರ ವಿವಹ ಜರುಗಿತು. ನೇಮಿಚಂದ್ರನು ಗಜಚರ್ಯೆಯನ್ನು ವರ್ಣಿಸುವದರಲ್ಲಿ ತುಂಬ ಆಸಕ್ತ. ಇಲ್ಲಿಯೂ ಅದರ ನಿರೂಪಣೆ ಸೊಗಸಾಗಿ ಬಂದಿದೆ.

ವಿಜಯಾಧಾರ್ಚಲದತ್ತ ದಿವ್ಯವಿಮಾನದಲ್ಲಿ  ವಸುದೇವನನ್ನು ಹತ್ತಿಸಿಕೊಂಡು ಖೇಚರರಿಬ್ಬರು ಕರೆತಂದುದು ಕಿನ್ನರಗೀತಪುರಕ್ಕೆ. ಆಕಾಶದಿಂದ ವಿಮಾನಯಾನದಲ್ಲಿ ಭೂಮಿಯ ದೃಶ್ಯ ಹೀಗೆ ಕಂಡಿತಂತೆ:

ಸಾಗರವೊಂದು ಕಂಕಣದಿನುರ್ವರೆ ಕಾವಲಿಯಿಂ ಕುಳಾದ್ರಿಗಳ್

ಪಾಗಲ ಕಾಯ್ಗಳಿಂ ಮದಗಜಾವಳಿ ಪಂದಿಗಳಿಂ ನದೀವ್ರಜಂ

ಭೊಗಿಗಳಿಂ ತಆಗತಿತಿ ಕಣ್ಗಳಿನುನ್ನತಪಾದಪೋತ್ಕರಂ

ಸೀಗುರಿಯಿಂ ಕರಂ ಕಿಱಿಯವಾದುವು ಕಣ್ಗೆ ಕುಣಾವಲೋಕನಾ ॥

ವಸುದೇವ ಶಾಲ್ಮಲಿದತ್ತೆಯರು ಒಂದಾದರು, ನಿಜ. ಆದರೆ ಒಮ್ಮೆ ಇಬ್ಬರೂ ಸುರತಶ್ರಾಂತರಾಗಿ ಪವಡಿಸಿದ್ದಾಗ, ಒಬ್ಬ ಖೇಚರನು ವಸುದೇವನನ್ನು ಅಪಹರಿಸಿಕೊಂಡು ಹೋದನು. ಶಾಲ್ಮಲಿದತ್ತೆ ವೀರಾಂಗನೆಯಾಗಿ ಧಾವಿಸಿಹೋಗಿ, ಅವನನ್ನು ಎದುರಿಸಿದಳು. "ಬಿಡು ಬಿಡು ಮನ್ಮನಃಪ್ರಿಯನನ್ ; ಅಲ್ಲದೊಡಣ್ಮು ಎನ್ನುತ್ತ ಖಡ್ಗವನ್ನು ಬೀಸಿದಳು. ಅವನು ಹೆದರಿ ವಸುದೇವನನ್ನು ಬಿಸಾಡಲು, ಕುಡಲೇ ಆಕೆ ಆತನನ್ನು ಹಿಡಿದಪ್ಪಿಕೊಂಡಳು; ದಿವ್ಯಧ್ವನಿಯ ಸೂಚನೆಯಂತೆ ಪರ್ಣಲಘುವಿದ್ಯೆಯ ಕೈಗೆ ಒಪ್ಪಿಸಿ ತೆರಳಿದಳು.

ಮೂರನೆಯ ವೃತ್ತಾಂತವೇ ವಸುದೇವನ ಗಂರ್ವದತ್ತೆಯರ ವಿವಾಹ ವೃತ್ತಾಂತ. ಇದರ ಒಂದು ಭಾಗವಾಗಿ ಬರುವ ಬಲಿ – ವಾಮನೋಪಾಖ್ಯಾನವು ಕಾವ್ಯ ಕಲೆಯ ದೃಷ್ಟಿಯಲ್ಲಿ ಗಮನಾರ್ಹವಾಗಿದೆ.

ಚಂಪಾಪುರದಲ್ಲಿ ಚಾರುದತ್ತನ ದತ್ತಕಪುತ್ರಿಯಾದ ಗಂಧರ್ವದತ್ತೆಯೆಂಬ ಖೇಚರ ಕನ್ಯೆಯನ್ನು ವಸುದೇವನು ವೀಣಾವಿದ್ಯೆಯಲ್ಲಿ ತನ್ನ ಅತೀಶಯತ್ವವನ್ನು ಪ್ರಕಟಿಸುವ ಮೂಲಕ ವರಿಸಿದನು ಎಂಬ ಈ ವೃತ್ತಾಂತ, ಇಲ್ಲಿಯೇ ಬರುವ ಬಲಿ – ವಾಮನೋಪಾಖ್ಯಾನ ವೃತ್ತಾಂತ ದಿಂದಷ್ಟೇ ಪ್ರಮಾಣದಲ್ಲಿ ವಿಸ್ತಾರವಾಗಿ ತೊರುವದಲ್ಲದೆ, ಈ ಹಿಂದೆ ನೊಡಿರುವ ಎರಡು ವೃತ್ತಾಂತಗಳಿಂದ ಕಥಾಂಶಗಳನ್ನೇನೂ ಒಳಾಗೊಂಡಿಲ್ಲ, ಕಥಾ ನಿರೂಪಣೆ ಅಲ್ಲಿಯ ಹಾಗೆಯೇ ಇಲ್ಲಿಯೂ ಸುತ್ತು ಬಳಸಿಲ್ಲದೇ ನೇರವೂ ಸರಳವೂ ಆಗಿ ಬಂದಿವೆ. ವಾದ್ಯ ವಾದನ ಕಲೆಯ ಪ್ರಸಕ್ತಿಯಿರುವ ಪ್ರಸ್ತುತ ವೃತ್ತಾಂತವನ್ನು ನೇಮಿಚಂದ್ರನು ತನಗೆ ಸಹಜವಾದ ಕಲಾಸಕ್ತಿಯಿಂದಲೂ ಆತ್ಮೀಯತೆಯಿಂದಲೂ ಚಿತ್ರಿಸಿದ್ದಾನೆ. ವಿವಾಹ ವೃತ್ತಾಂತದ ಬಹುಭಾಗ ಗದ್ಯದಲ್ಲಿಯೇ ನಿರೂಪಿತ ವಾಗಿರುವುದೂ ಇಲ್ಲಿಯ ಗದ್ಯ ಸಾದಾರಣವಾಗಿ ಸರಳವಾದ ಭಾಷೆಯಲ್ಲಿ ಸಣ್ಣಸಣ್ಣ ವಾಕ್ಯಗಳಿಂದಾಗಿರುವುದೂ ಗಮನಾರ್ಹವಾಗಿದೆ.

ಗಧರ್ವದತ್ತ ವೃತ್ತಾಂತದೊಡನೆ ಸೇರಿಕೊಂಡು ಬಂದಿರುವ ಬಲಿ– ವಾಮನೋಪಾಖ್ಯಾನವು ಅರ್ಧನೇದಲ್ಲಿಯ ಅತ್ಯಂತ ಸುಂದರವಾದ ರಸಸ್ಥಾನಗಳಲ್ಲಿ ಒಂದು. ತ್ರಿವಿಕ್ರಮನ ರೂಪು ತಳೆದ ವಿಷ್ಣುಕುಮಾರನ ಅತೀಮಾನುಷ ಅತ್ಯದ್ಭುತಗಾತ್ರವೈಭವವನ್ನು ವರ್ಣಿಸಿರುವ ಕಾವ್ಯಭಾಗವಂತೂ ನೇಮಿಚಂದ್ರನ ಉಜ್ವಲ ಪ್ರತಿಭೆಯ ಹಾಗೂ ಉನ್ನತ ಕಲ್ಪನೆಯ ಶ್ರೇಷ್ಠ ಪ್ರತೀಕವಾಗಿದೆ; ಕವಿಯ ದರ್ಶನೋಜ್ವಲತೆಗೆ ಧೃವ ಸಾಕ್ಷಿಯಾಗಿದೆ; ಕನ್ನಡ ಸಾಹಿತ್ಯದ ಭವ್ಯತಾಚಿತ್ರಗಳ ಶ್ರೇಣಿಯಲ್ಲಿ ಸೇರತಕ್ಕದ್ದಾಗಿದೆ.

ಪರ್ಣಲಘುವಿದ್ಯೆ ವಸುದೇವವನು ಚಂಪಾಪುರದಿಂದ ಹೊರವೊಳಲ ತಾವರೆಗೆರೆಯ ದಂಡೆಯಮೇಲೆ ಬಿಟ್ಟು ಹೋಯಿತು. ಸ್ವಲ್ಪ ಹೊತ್ತಿಗೆ ಬೆಳಗಾಗಿ ; ಎದ್ದು ವಸುದೇವನು ದಂಡೆಯ ಜನರನ್ನು ಕೆರೆಯನ್ನು ದಾಟಿ ಹೋಗಲು ದಾರಿ ಯಾವದು ಎಂದು ಪ್ರಶ್ನಿಸಿದ್ದನಂತೆ. ಅವರು ಗಹಗಹಿಸಿ ನಕ್ಕು "ಈಯಣ್ಣ ನಾಗಸದಿ ನೊಡೆದು ಬಿದ್ದಂತೆ ನುಡಿದಪ್ಪನ್ ಎಂದು ಜಿನಾಲಯದ ಬೋಧ ಸಿಂದುಭಟ್ಟಾರಕ ಮೂಲಕ ತಾನು ವಿದ್ಯಾಧರ ಲೋಕದಿಂದ ಅಲ್ಲಿಗೆ ಬಂದ ವೃತ್ತಾಂತವನ್ನು ಅರಿತುಕೊಂಡು ದಿನಬಸದಿಯನ್ನು ಬಿಟ್ಟು ಮುಂದೆ ತೆರಳಲು; ವೀಣಾಧ್ವನಿಯೊಂದು ಸೊಂಪಾಗಿ ಕಿವಿದಾಟಿತು ಎಂತಹ ವಿಣಾಧ್ವನಿ?

ಇದು ವಾಣೀಮತ್ತಹಂಸೀಸ್ವನಮಿದು ಮದನಜಾಲತಾಸಿಂಜಿತಂ ಮ
ತ್ತಿದು ನೃತ್ಯದ್ಭಾರತೀನೂಪುರರುತಮಿದು ಪುಷ್ಪಾಯುಧಾಮೊದಮುದ್ಯ
ನ್ಮ ದಭೃಂಗೀರಂಜಿತಂ ತನೆನೆ ನಿನೆಗಣೆಯಂ ತೋಱಿಬಂದಿಂಪುನುಣ್ಪಂ
ದುದಿರ್ವಮತಾ ರಾಜಪುತ್ರಶ್ರುತಿಗತಿತಿಥಿಯದೊಂದಾಯ್ತು ವೀಣಾಪ್ರಣದಂ ॥

ಈ ವೀಣಾಧನಿ  ಉಪವನದ ನಡುವೆ ಹಿಮ್ಮಿದ್ದು. ಹಲವರು ವೀಣಾಪಣೆಯರು ನಡುವೆ ಇದ್ದವಳೇ ನೀಣಾವಿಶಾರದೆ ಗಂಧರ್ವದತ್ತ. ಈಕೆಯ ವೀಣಾವಾದನದ ವೈದಗ್ದತೆಯನ್ನು ವಸುದೇವ ಮರೆಯಿಂದ ಕುಳಿತ್ತಿದ್ದಾಗ ಇವಳ ಗುರು ಮನೋಹರನೆಂಬ ಗಂಧರ್ವಾಚಾರ್ಯನು " ವಸುದೇವನಂ ದೇವನೆಂಹೇ ಬಗೆದು, ಏಱಿಯಮಿಱಿಯಯುಂ ನೀಡಂ ಭಾವಿಸಿ ನೋಡಿ ಸಂತೋಷಿಸಿಸ್ ಸ್ವಾಗತಿಸಿದ. " ನಾಮನ್ಯನಲ್ಲಂ ತ್ರಿವುವನಜನತಾಮನ್ಯಂ ಎಂದು ಅರ್ಥ ಮಾಡಿಕೋಂಡ., ಕವಿ ತನ್ನ ನಾಯಕನನ್ನು ಕಾರಣಪುರುಷನೆಂದು ಹೀಗೆ ಹೆಜ್ಜೆಹೆಜ್ಜೆರೂ ಹಾಡಿ ಹೊಗಳಿದ್ದನೆ ಪನ್ನಗಪೂಜಿತೆ ದೇವಿ ಪದ್ಮಾವತಿ ಕಿರೀಟದ ಹೂವನ್ನು  ಕನ್ಯಗೆ  ಅನುಗ್ರಹಿಸಿದಳು; ಆಕೆ ವರಪ್ರಸಾದವೆಂದು ಅದನ್ನು ಗ್ರಹಿಸಿದಳು.

ವಸುದೇವನಿಗೆ ಮನೋಹರನಿಂದ ಗಂಧರ್ವದತ್ತೆಯ ವೃತ್ತಾಂತಸಮಸ್ತವೂ ತಿಳಿದುದಲ್ಲದೆ, ನಡೆಯಲಿರುವ ವೀಣಾಸ್ವಯಂವರದ ಉದ್ದೇಶವೂ ವಿಧಾನವೂ  ತಿಳಿದುವು 'ಈ ಕುಮಾರಿಯಾರ ವಗಳ್ ಅರ್ಗ್ ಕುಡಲಿರ್ದಪಳ್ ಈ ಪರಮೇಶ್ವರಿಯ ಪಾರಿಜನಮೇಕೆ ಬಾಳಕರನೆತ್ತಿದಂತೆ ವೀಣೆಯಂ ಕೌಂಕುಳಿಯೊಳಾಂಕಿಕೊ,ಂಡ್ಡಿರ್ದಪರ್ ಎಂದು ಕುತೂಹಲದ ಪ್ರಶ್ನೆಗಳಾನ್ನು ಕೇಳಿದ ವಸುದೇವನಿಗೆ ಮನೋಹರ ಎಲ್ಲವನ್ನೂ ಸ್ಪಷ್ಟಪಡಿಸಿದುದಲ್ಲದೆ,  ಆಕೆ ವಿದ್ಯಾಧರಕನ್ಯೆಯಿಂಬುದನ್ನೂ ತಿಳಿಸಿದನು.

ವೀಣಾಸ್ವಯಂವರವೇರ್ಪಟ್ಟಿತು. ಅದರೆ ನೆರೆದ ಕಿನ್ನರ ಕಿಂಪುರುಷಾದ್ಯರೆಲ್ಲ ಆಕೆಯನ್ನು ವೀಣಾವಾದನ ಕೌಶಲದಲ್ಲಿ ಗೆಲ್ಲಲಾರದೆ ಹೋದರು . ವಸುದೇವನು ಯುದ್ಧರಂಗಕ್ಕೆ ಬರುವಂತೆ ವಿದ್ಯಾಪೀಠವನ್ನು

ಹತ್ತಿದ ವೀಣೆಯೊಂದನ್ನು ಬೇಡಿದ ಒಳ್ಳೆಯ  ವೀಣೆ ಯೊಂದನ್ನು ಬೇಡಿದ. ಒಳ್ಳೆಯ ವೀಣೆಗಳೆಂದು ತಂದು ಕೊಟ್ಟವನ್ನು ಸಹ ವಸುದೇವ ದೋಷಯುಕ್ತವೆಂದು ನಿರಾಕರಿಸಿ ನಿರ್ದುಷ್ಟವಾದ ವೀಣೆಯನ್ನು ಮತ್ತೆ ಕೇಳಿದ. “ ಈ ಲೋಕದಒಳೊವಾಲ್ಲದಿಲ್ಲ ನಿ,ಂ ಮೆಚ್ಚುವ ಬೀಣೆಯಾವ ಲೋಕ ದೊಳುಂಟು ಎಂದು ಮನೋಹರನು ಪ್ರಶ್ನಿಸಲು ವಸುದೇವ ಬಲಿ– ವಾಮನೋಪಾಖ್ಯಾನವನ್ನು ವಿವರಿಸಲು ತೊಡಗಿದ ಈ ಭಾಗದಲಿಯ ಗದ್ಯದ ಪ್ರಾಚುರ್ಯ ಕಥನಗತಿಗೆ ಗದ್ಯ ಪ್ರಶಸ್ತವೆನ್ನುವುದನ್ನು ಹೇಳುವಂತಿದೆ. ಇಲಿಯ ಬಲಿ– ವಾಮನೋಪಾಖ್ಯಾನ ಜೈನಸಂಪ್ರದಾಯಕ್ಕೆ  ಅನುಸಾರವಾದುದು. ಆದರೆ ವೈಷ್ಣವಪ್ರಭಾವವುಳ್ಳದ್ದು . ಸ್ವಂತಂತ್ರವಾದ ಕಥೆಯೆಂಬಂತೆ  ಇಲಿ ಇದು ಬಂದಿದೆ.

ಹಸ್ತಿನಾಪುರದ ದೊರೆ ಮೇಘಾರಥ ಹೆ ಮ್ಡತಿ ಪದ್ಮಾವತಿ. ಇವರ ಮಕ್ಕಳು ವಿಷ್ಣುಕುಮಾರ, ಪದ್ಮರಥ ಎಂಬುವರು. ಮೇಘರಥ ಮುಗಿಲು ನೋಡಿ ವೈರಾಗ್ಯಗೊಂಡ . ವಿಷ್ಣುಕುಮಾರನೂ ಆತನನ್ನು ಅನುಸರಿಸಿದ. ಈಗ ಪದ್ಮರಥ ದೊರೆ ಒಮ್ಮೆ  ಪ್ರತ್ಯಂತಭೂಪಾಲರು ದಂಡೆತ್ತಿ ಬಂದಾಗ ಮಂತ್ರಿ ಬಲಿ ಉಪಾಯದಿಂದ ಅವರನ್ನ್ನು ಮೇಲೆ ಬೀಳದಂತೆ ನಿವಾರಿಸಿದ್ದ ಇದಕ್ಕಾಗಿ ದೊರೆ ಮೆಚ್ಚಿ “ ಮೆಚ್ಚಿತಂ ಬೇಡಿಕೊಳ್ ಎಂದು ಸೂಚಿಸಿದ, ಬಲಿ “ ಜೋಕೋರನಂತಿರೆ (=ಜೋಕುಮಾರ) ಏಟುದಿವಸದರಸುತನಮಂ ಬೇಡಿ ಪಾಡೆದಂ ಇದೇ ಸಮಯುಕ್ಕೆ ಪಟ್ಟಣಾದ ಹೊರಗೆ ಸೌಮ್ಯಗಿರಿಯಲ್ಲಿ ಅಕಂಪನವೃತಿ ಇತರ ಯತಿಗಳೊಂದಿಗೆ ಬಂದು ಯೋಗಾರೂಢನಾಗಿದ್ದ ಆತನಿಗೆ ಕೇಡು ಮಾಡಲು ಬಲಿ ಚಿಂತಿಸಿ  ಬ್ರಾಹ್ಮಣಭೋಜನ , ಕೋಏಹೋಮ ಎಂದು ಸಾರಿ ಅಲ್ಲಿ ಅಡುಗೆಷ್ಣೆ ಹೋಮಕೆ ಎಂದು ಸತ್ತ ಅಗ್ನಿಯನ್ನು ಹೂಡಿದನು. ಇದರಿಂದ ಅಕಂಪನವೃತಿಗೂ ಅನ್ಯಯತಿಗಳಿಗೂ ದೊಡ್ಡ ಬಾಧೆಯಾಯಿತು: ವಿಷ್ಣುಕುಮಾರನಿಗೆ ಇದು ತಿಳಿಯಿತು ಅವನು ತನ್ನ ತಮ್ಮನೇ ಆದ ದೊರೆ ಮೇಘರಥನನ್ನು ಕಂಡು “ ಇದೇಕೆ ಹೀಗೆ ಎಂದು ಪ್ರಶ್ನಿಸಿದನು. ಪದ್ಮರಥ ನಡುಗಿದ ಮೊಱುಲೋಕವುಮನೆಱಗಿಸುವ ನಿಮ್ಮಡಿಯ ತಪೋರಾಜ್ಯಮೆ ರಾಜ್ಯಂ ಎಡೆಯ ಕಡೆಯ ಬ್ಡವರುಮನೆಱಗಿಸಲಾಱದೆಮ್ಮ ರಾಜ್ಯಮೇತಱ ರಾಜ್ಯಂ ಎಂದು ,ಮುಂತಾಗಿ ತಿಳಿಸಿ ಈ ಮುನಿಜನೋಒಪಸರ್ಗವನ್ನು ಅತನೇ ಪರಿಹರಿಸಬೇಕು ಎಂದು ಹೇಳಿಬಿಟ್ಟನು. ಮಂತ್ರಿಗೆ ರಾಜ್ಯವೊಪ್ಪಿಸಿದ ದೊರೆಯ  ವಿವೇಕ ಈ ರೀತಿಯದು !

ವಿಷ್ಣುಕುಮಾರ ವಾಮನೋಪಾಖ್ಯಾನವು  ತಳೆಡು ಈಗ ಬಲಿಯಲ್ಲಿಗೆ ಬಂದನು. ವಾಮನಮೂರ್ತಿಯ ಆಕೃತಿಚಿತ್ರವಿದು :

ಒಗೆಯೆ ಕವಿಲ್ಪ ಕಾಸೆ ಪೊಸಜನಿವರಂ ಶಿಖಿ ಕೋವಣಂ ಕರಂ

ಡೆಗೆ ಕಿಸುವೊನ್ನ ಬಟ್ಟಗೊಡೆ ಬಾರಸನಾಮದ ಬೊಟ್ಟು ಕೊಪ್ಪಿನೊಳ್

ನೆಗೆದ ಕುಶಾಂಕುರಂ ಮಿಸುಪ ಮುಂಜಿ ಷಪಲಾಶದ ದಂಡ ಕು,ಂಡಳಂ

ಬಗೆವುಗೆ ಬಂದನಂದು ಬಲಿಯಲ್ಲಿಗೆ ವಾಮನನಾಗಿ  ಕಾಮದಂ ॥

ಹೀಗೆ ಕಾಣಿಸಿಕೊಂಡ ಮಾಣಿಕದಂತಪ್ಪ ಮಾಣಿ ಮಂತ್ರಿಯ ಮುಂದೆ ನಿಂತು ಮಂತ್ರಘೋಷಮಾಡಿ ಅಕ್ಷತೆಯಿತ್ತು ಆಶೀರ್ವದಿಸಿದ . ಬಲಿ ಸಾಷ್ಟಾಂಗನಮಸ್ಕಾರಪೂರ್ವಕ ಬೇಡಿಂ ಎಂದು ಆ ಜಾಣ ವಾಮನ " ಎಮಗೆ ಕುಳ್ಳಿರ್ದನುಷ್ಠಾನಮಂ ಮಾಡಲ್ಕಕುಅನಿತನೆಮ್ಮ ಕುತ್ತಡಿಯೊಳ್ಮೂಱಡಿ ನೆಲನನೀವುದು ಎಂದು ಕೇಳಿಕೊಂಡ ಬಲಿಗೆ " ಅಯ್ಯೋ  ಇದೆಂಥ ಬೇಡಿಕೆ  ಎನಿಸಿರ್‌ಬೇಕು.ಅವನು ನಿಟ್ಟುಸಿರುಬಿಟ್ಟು " ಎನಗದೃಷ್ಟಮೆಯ್ದದಿರ್ಕುಂ ಕಿಱಿದಂ ಬೇಡಿದರ್ ಕೊಟ್ಟೆನಳೆದುಕೊಳ್ಳಿಂ ಎಂದ. ]

ಆಮೇಲೆ  ವಾಮನ ತ್ರಿವಿಕ್ರಮನಾಗಿ ಬೆಳೆದ ಪರಿ ಬಹು ಸೊಗಸಾದುದು. ಆತನ ಆಕೃತಿ ಆಕಾಶದ್ದುದ್ದಕ್ಕೆ ಬೆಳೆದುದನ್ನು ಕವಿ ನಾನಾ ಹೋಲಿಕೆಗಳಿಂದ ಚಿತ್ರಗಳಿಂದ ಮೂಡಿಸಿದ್ದಾನೆ. ಒಂದೊಂದು ಪದ್ಯವೂ ಒಂದೊಂದು ಸ್ವತಂತ್ರಚಿತ್ರವನ್ನು ಅದ್ಭುತವಾಗಿ ಕಣ್ಣೆದುರು ಕಟ್ಟಿ ನಿಲ್ಲಿಸುತ್ತದೆ. ಇಲ್ಲಿ ಆರಂಭದ  ಎರಡು ಪದ್ಯಗಳನ್ನಷ್ಟೇ ಉದ್ಧರಿಸಬಹುದು.

ವಟು ಮರದುದ್ದವಾದನನಿತಲ್ಲ  ದೊಡಿತ್ತಲೆಯುದ್ಧವಾದನ

ಕ್ಕಟ ಮದಿಲುದ್ಧವಾದನಿವನವನೋ ಪೆರ್ಮರದುದ್ದವಾದನಿಂ

ತುಟು ಗಿರಿಯುದ್ಧವದನಿದು ವಿಸ್ಮಯಮಾ ಮುಗಿಲುದ್ಧವಾದನೋ

ವಟಮಟಿಗಂ ದಿಟಕ್ಕನೆ ಕರಂ ಬಳದಂ ಮನದಂತೆ ವಾಮನಂ ॥

ಅಂತುಮಲ್ಲದೆ

ಮರನಂ ಮುಟ್ಟಿದನಿಲ್ಲ್ ಮೇಘಘಟೆಯೊಳ್ ಕಾಲ್ವೊದನಿಲ್ಲಿಲ್ಲ ಭೂ

ಧರಮಂ ದಾಂಟಿದನಿಲ್ಲ ಬಾಂದೊಱೆಯೊಳಿಟ್ಟಂ ಕಾಲನಿಲ್ಲಿಲ ಭಾ

ಸ್ಕರನಂ ಮಯಾದ ಮಾಣಿ ಸೆಂಡೊದೆದನಾ ಇಲ್ಲೆಂಬಿನಂ ನೀಡಿದಂ

ತರದಿಂ ಪಾದಮನರ್ವಿ ಕೊರ್ವಿ ಬಲಿಯಂ ಗೆಲ್ವಾ ಮನಂ ವಾಮನಂ ॥

ಹೀಗೆ ಬಂದರ ಮೇಲೊಂದು ಅದ್ಭುತಚಿತ್ರಗಳನ್ನು ಅಡಕಿಲಿಟ್ಟಿದ್ದಾನೆ ಕವಿ. ಇಂಥ ಸೊಗಸಾದ

ಚಿತ್ರಗಳನ್ನು ಕಟ್ಟುತ್ತಲೇ " ಇಂತಪ್ಪ ಸಿತಗನೀ ವಟು ; ಇಂತಪ್ಪತಿವರ್ತಿ ಮಾಣೆಯುಂ ಕೋಡಗಮುಂ ಸಂತಮಿರಲರ್ಕುಂಮೇ ..... ಎಂಬಂಥ ಕುಚೇಷ್ಟೇಯನ್ನು ಕವಿ ಏಕೆ ಮಾಡಿದ್ದಾನೆಯೋ ತಿಳಿಯದು. ಹೀಗಿದ್ದೂ

ಅಂಗರತಃಳಕ್ಕೆ ಬಳೆದು ತೆ

ಱಂಬೋಳೇವಚ್ಯುತನ ಚರಣದಂಡಂ ನಕ್ಷ

ತ್ರಂ ಬಳಸಿ ದೀಪಮಾಲೆಯ

ಕಂಬದವೋಲ್ ತೊಳಗಿ ಬೆಳಾಗುತಿರ್ದತ್ತಾಗಳ್ ॥

ಎನ್ನುವಂತಹ ಅದ್ಭುತಕಲ್ಪನೆಗಳನ್ನು ಮೂಡಿಸಲು, ನೇಮಿಚಂದ್ರನಂಥ ಒಬ್ಬಿಬ್ಬರು ಕವಿಗಳಿಗೆ ಮಾತ್ರ ಸಾಧ್ಯ ಎನ್ನಬಹುದು.

ಇಂತಹ ವಿಷ್ಣುಕುಮಾರನು ವೈಕುರ್ವಣ ಋದ್ಧಿಯಿಂದ ಬ್ರಹ್ಮಾಂಡವನ್ನೇ ಒದೆದು ಬೆಳೆದನಷ್ಟೆ ಅತನ ಅಂಗುಷ್ಠಘಾತಕ್ಕೆ ತ್ರಿದಿವವೂ ಎಲಿ ಉದುರಿಹೋದೀತೋ ಎಂದು ಬೆದರಿದ ಇಂದ್ರ. ಆತನ ಆಜ್ಞೆಯಂತೆ ಗಂಧರ್ವದೇವರು ಧಾರಾವಿ ಸಾರಿರಿ ಎಂಡ್ಬ ಎರಡು ವೀಣೆಗಳನ್ನು ಶ್ರುತಿಮಾಡಿ ದಿವ್ಯಗಾನವನ್ನು ಆಲಾಪಿಡಿದರು. ಹೀಗೆ ಬಲಿವಾಮನೋಪಾಖ್ಯಾನವನ್ನು ನಿರೂಪಿಸಿ ಆ ವಂಶದ ವೀಣೆಯಿದ್ದರೆ ತನ್ನಿ , ಎಂದು ವಸುದೆವ ಕೇಳಿದನು ಆ ಕಥೆಗೂ ಆತನಮನೋಹರಾಕೃತಿಗೂ ಗಂರ್ಧದತ್ತೆ ಮನಸೋತು ಆತನನ್ನೇ ವರಿಸಿದಳು.

ಹೀಗಿರಲು ಕುಂಕುಮ–ಕುಚಳಾಕಸರೆಂಬ ಇಬ್ಬರು ವಿದ್ವಾಂಸರು ಆತನೆದರು ಬಂದು ಶುಭವನ್ನು ಹರೈಸಿ ಸನ್ಮಾನಪಡೆದು ತೆರಳುತ್ತ, ಮಾಗಧಿಯೆಂಬ ಹೊಳಲ ರಕ್ಷಾಕ್ಷಸುಮಿತ್ರೆಯರೆಂಬ ರಾಜದಂಪತಿಗಳ ಮಗಳು ರೋಹಿಣಿಗೆ ಸ್ವಯಂವ್ರವೇರ್ಪರ್ರ್ರಿರುವುದನ್ನು ಶ್ರುತಪಡಿಸಿ ತೆರಳಿದರು. ಈ ಮುಂಡಿನದು ವಸುದೇವ–ರೋಹಿಣಿಯರ ವಿವಾಹವೃತ್ತಾಂತ.

ಹೊಗಳುಭಟ್ಟ ವಿದ್ವಾಂಸರು ಸ್ವಯಂವರ ಸಂದರ್ಭದಲ್ಲಿ ಜರಾಸಂಧ ಚಕ್ರವರ್ತಿಯೂ ಸಮುದ್ರವಿಜಯ ಮೊದಲಾದ ಮಾಂಡಲಿಕರೂ ಬಂದಿರುವರೆಂದು ಹೇಳಿಹೋದುದು, ವಸುದೇವನಿಗೆ ಒಂದು ತೆರನ ಪ್ರಚೋದನೆಯನ್ನೊಡ್ಡಿದಂತಾಯಿತು; ಪರ್ಣಲಘುವಿದ್ಯೆಯ ಸಹಾಯದಿಂದ ಮಾಗಧಿಗೆ ಕೂಡಲೇ ಬಂದು ಸೇರಿದನು. ಮುದ್ದಳೆಗನ ವೇಷದಲ್ಲಿ ಬಂದು, ಸೊಗಸಾಗಿ ಮುದ್ದಳೆ ನುಡಿಸತೊಡಗಿ, ಸ್ವಯಂವರದ ರಾಜಸಮೂಹವನ್ನೆಲ್ಲ ಒಂದೇ ಗಳಿಗೆಯಲ್ಲಿ ಆಕರ್ಷಿಡಿಬಿಟ್ಟನು. ರೋಹಿಣಿಗಿಂತ ಈ ವಾದ್ಯವಿದ್ಯಾಧರನ

ವಾದನವೈದಗ್ಧತೆಯೇ ಅವರ ಮನಸ್ಸನ್ನು ಸೋಲಿಸಿಬಿಟ್ಟಿತು. ರೋಹಿಣಿಯೂ ಆತನಿಗೆ ಮನಸೋತು ಮಾಲೆಸೂಡಿದಳು. ಇದು ಅಲ್ಲಿ ನೆರೆದಿದ್ದ ರಾಜಕುಮರರ ಮನಸ್ಸಿನಲ್ಲಿ ಕಿಚ್ಚುಹೊತ್ತಿಸಿತು.. "ಚಕ್ರವರ್ತಿಗಂ ಮಂಡಳಿಕರ್ಗಂ ಕುಡಲಿರ್ದ ಕೂಸಂ ದೇಸಿಗಂ ಕೊಂಡನ್. ಎಂದು ಎಲ್ಲರೂ ವಸುದೇವನ ಮೇಲೇರಿ ಬಂದರು. ಆದರೆ ಅದು ಬಾಲ ಭಾಸ್ಕರನ ಮೇಲೆ ತಮದೊಡ್ಡು ಕವಿದಂತೆ, ಕಿಶೋರಕೇಸರಿಯ ಮೇಲೆ ಆನೆಗಳ ಹಿಂಡು ಕವಿದಂತೆ ಆಯಿತು, ಅಷ್ಟೆ. ಪುಂಖಾನುಪುಂಖವಾಗಿ ಬಾಣವರ್ಷವನ್ನು ಕರೆದು ವಸುದೇವನು ಅವರೆಲ್ಲರನ್ನೂ ಗಾಸಿಗೊಳಿಸಿದನು. ಆದರೆ ಅಣ್ಣ ಸನುದ್ರವಿಜಯನ ವಿಷಯದಲ್ಲಿ ಅವನು ಹೀಗೆ ವರ್ತಿಸಲ್ಲಿಲ್ಲ; ಬಿಟ್ಟ ಬಾಣಗಳು ಅವನನ್ನು ಮುಟ್ಟದೆ ಹಾರಿಹೋದವು. ಒಂದೊಂದೇ ಬಾಣದಲ್ಲಿ ಆನೆಕುದುರೆಗಳನ್ನೂ ಅದಟರನ್ನೂ ನಿಗ್ರಹಿಸಿದ ಬಾಣವು ಸಮುದ್ರವಿಜಯನ ಪಾದಪದ್ಮದಲ್ಲಿ ಅಭಿವಾದನ ಪೂರ್ವಕವಾಗಿ ಬಂದು ಬಿದ್ದಿತು. ಆಣ್ಣನಿಗೆ ಇದು ಅರ್ಥವಾಯಿತು.

ಕೆಯ್ಯುಪ್ಪಾದುದು ಕಾದಲೊರ್ವನೆ ಸಮುಗ್ರಾನೀಕದೊಳ್ ಕೋದು ಕೋ
ಲ್ವೊಯ್ದಂ ಬಾಳನಕೊಕ್ಕ ತುಪ್ಪಮುಡಿಗಲ್ಕೆಂ ಬರ್ಕುಮೇ ಗಂಟಲಂ
ಕೊಯ್ದಂ ಕೈತವದಿಂದಮೆಂದೊಗೆದ ನೋವಂ ಸಂತಸಂ ನೊಂಕೆ ಮೇ
ಲ್ವಾಯ್ದಿಂದ್ರೇಭಸಮಂ ಸಮುದ್ರವಿಜಯಂ ತಙ್ಕೈಸಿದಂ ತಮ್ಮನಂ ॥

ಆರಂಭದಲ್ಲಿ ತಪ್ಪು ಆಭಿಮಾನಕ್ಕೆ ಅವಕಾಶವಿದ್ದ ಸಮುದ್ರವಿಜಯನಿಗೆ, ಬರುಬರುತ್ತ ನೆಮ್ಮದಿಯಾಯಿತು; ಇಬ್ಬರೂ ಈಗ ಒಗ್ಗೂಡಿದರು. ಅಣ್ಣನ ಸೂಚನೆಯಂತೆ ಜರಾಸಂಧನಿಗೆ ಎರಗಿ, ವಸುದೇವನು ಸ್ವಯಂವರಕ್ಕೆ ಬಂದ ಅಸುರ ಮಕ್ಕಳೆನ್ನೆಲ್ಲ ನಿಬ್ಬಣಿಗರಾಗಿರಲು ರೋಹಿಣಿಯನ್ನು ಮದುವೆಯಾದನು. ಆಕೆಯಲ್ಲಿ ಕಾಲಕ್ರಮದಲ್ಲಿ ಆತನಿಗೆ ಬಲದೇವನೆಂಬ ಮಗನೂ ಜನಿಸಿದನು; ಸ್ವಯಂವರಸಂದರ್ಭದಲ್ಲಿ ತನ್ನ ಪೌರುಷವನ್ನೂ ಬಿಲ್ಲ ಬಿಲ್ಲಣವನ್ನೂ ಮೆಚ್ಚಿಕೊಂಡು ಬಿಲ್ವಿದ್ಯೆಯನ್ನು ಕಲಿಸಲು ತನ್ನನ್ನು ಪ್ರಾರ್ಥಿಸಿದ ರಾಜಕುಮಾರರಿಗೆ ಶಿಕ್ಷಕನಾಗಿ ಶೌರ್ಯಪುರದಲ್ಲಿ ಇರತೊಡಗಿದನು.

ನೇಮಿಚಂದ್ರನು ವರ್ಣಿಸಿದ್ದು ನಾಲ್ಕು ವಿವಾಹಗಳನ್ನೇ ಆದರೂ ಮೂಲಕಥೆಯಲ್ಲಿ ಹಲವು ವಿವಾಹವರ್ಣನೆಗಳು ಬಂದಿವೆ. ಅದನ್ನು ಗಮನಿಸಿಯೇ ನೇಮಿದಂದ್ರನು "ವಸುದೇವನಾಳ್ದನೀ ಧರೆ ಪೊಗಟಿಲ್ಕೆ ಷೋಡಶ ಸಹಸ್ರವಿವಾಹಮಹೋತ್ಸವಂಗಳಂ ಎಂದು ಹೇಳಿ ತೃಪ್ತನಾಗಿದ್ದಾನೆ. ಹಾಗೆಯೇ ಚಾರುದತ್ತ ಚರಿತ್ರವರ್ಣನವೆಂಬ ಸವಿಸ್ತರವಾದ ವೃತ್ತಾಂತವೂ ಇಲ್ಲಿ "ಚಾರುಚರಿತಂ ಚಾರುದತ್ತಂ

ಎಂಬ ಸೂಚನೆಯೊಂದಿಗೆ ಮುಗಿದು ಹೋಗಿದೆ. ಇದಕ್ಕೆ ಉತ್ತಪು.ದ ಅನುಸರಣೆ ಕಾರಣವಾದರೂ, ಕವಿಯ ಸಂಗ್ರಹಶೀಲಪ್ರವೃತ್ತಿಯೇ ಮುಖ್ಯಕಾರಣ. ವಸುದೇವ ವಾಸುಪೂಜ್ಯಜಿನಾಲಯಕ್ಕೆ ಬರುವ ಮೊದಲು 'ಹನುಮನ  ಮತದಿಂ ತವರೆಗೊಳವನ್ನು ದಾಟಿದ್ದು ಪದ್ಮರಥನ ಸೂಚನೆಗೆ ಬಲಿ "ಜೋಕೋರಂತಿರೇಟುದಿವಸದರಸುತನಮಂ ಬೇಡಿ ಪಡೆದದ್ದು ಇಂಥವು, ಕೃತಿಯೊಳಗೆ ಕವಿ ಜಾನಪದ ಮುಂತಾದ ಅಂಶಗಳನ್ನು ಹೇಗೆ ತರಬಲ್ಲನೆಂಬುದನ್ನು ಸೂಚಿಸುತ್ತವೆ. ಕವಿಗೆ ಪ್ರಾಕೃತ ಭಾಷಾಸಾಹಿತ್ಯಗಳ ಪರಿಚಯವಿದ್ದುದು ರೋಹಿಣೀಸ್ವಯಂವರ ಸಂದರ್ಭದ ಭಾಗದಲ್ಲಿ ವ್ಯಕ್ತಪಟ್ಟಿದೆ; ಹಾಗೆಯೇ ಸಂಗೀತಶಾಸ್ತ್ರಜ್ಞಾನವನ್ನು ಗಾಂಧರ್ವ ದತ್ತಾಪರಿಣಯಭಾಗದ್‌ಲ್ಲಿ ತಿಳಿಯಬಹುದಾಗಿದೆ.

'ಲೀಲಾವತಿ ಕಾವ್ಯದ ನಾಯಕ ರೂಪಕಂದ್‌ರ್ಪದೇವನ ಹೆಸರನ್ನು ವಸುದೇವನಿಗೆ ಆರೋಪಿಸಿರುವದೂ ಉಂಟು. ಅಲ್ಲದೆ ಪ್‌ದ್ಮಾವತೀದೆವಿಯ ಪ್ರಸಕ್ತಿಯನ್ನು ಎರಡು ಕವ್ಯಗಳಲ್ಲಿಯೂ ಕವಿ ತಂದಿದ್ದನೆ; ಹಾಗೆಯೇ ಭೋಧಸಿಂಧುಭಟ್ಟಾರಕರನ್ನೂ ಕುರಿತಿದ್ದಾನೆ.

ಕೃಷ್ಣನ ಬಾಲಲೀಲೆಗಳು, ಸಾಹಸಗಳು

ಕವಿ ನೇಮಿಚಂದ್ರನಲ್ಲಿ ನಾಟಕೀಯ ಪ್ರತಿಭೆ ಮಿಗಿಲಾಗಿದ್ದಿತು ಎಂದು ಅವನು ಕಂಸ ಪಾತ್ರದ ಪ್ರವೇಶವನ್ನು ತನ್ನ ಕಾವ್ಯದಲ್ಲಿ ತಂದಿರುವ ರೀತಿಯಿಂದಲೇ ತಿಳಿಯಬಹುದಾಗಿದೆ.

ವಸುದೇವ ತನ್ನ ಲೇಲಾವಿಹಾರಗಳನ್ನೆಲ್ಲಾ ಪೂರೈಸಿಕೊಂಡು ಶೌರ್ಯಪುರದಲ್ಲಿ ನೆಲಸಿದ. ತನ್ನ ಬಿಲ್ವಿದ್ಯೆಗೆ ಬಂಟರಾಗಿ, ತಾವೂ ಅದನ್ನು ಕಲಿಯಲಿಂದು ಆಸೆಪಟ್ಟು ಬಂದವರಿಗೆ ಅದನ್ನು ಕಲಿಸುತ್ತ ಇದ್ದ ಆತನಲ್ಲಿಗೆ, ಆ ಅಪೇಕ್ಷೆಯಿಂದಲೇ ಬಂದ ಉಲ್ಕೆಯಂತಹ ವ್ಯಕ್ತಿ ಕಂಸ  ಇನ್ನೂ ಯುವಕ, ಮಹತ್ವಾಕಾಂಕ್ಷೆಯ ವೀರ್ಲ, ಅತನ ವ್ಯಕ್ತಿಚಿತ್ರವಿದು:

ಸುಡುದಲೆ ಬಿಟ್ಟ ಕಣ್ ಕಲಿಮೊಗಂ ಕಡಿಗೊಂಡುಡೆ ಬೆಟ್ಟಿತಪ್ಪ ಕೈ
ಯಿಡಿದು ಪೊರಳ್ವಿ ಮಾಡಿದವೊಲಿಪ್ಪೊಡಲೊಪ್ಪುವ ರೂಪು ತುಪ್ಪಮಂ
ತೊಡೆದವೊಲಿಪ್ಪ ಮೀಸೆ ಮಿಸುಗುತ್ತಿರೆ ಬಂದನಘೋರ್ವಹೊಂದು ಬಿ
ಲ್ವಿಡಿದು ಯುವಾನನಲ್ಲಿಗೆ ನವೀನ ನವೀನನದೋತ್ಕಟ ಭಟಂ ॥

ಆತನ ಆಗಮನ ವಸುದೇವನ ಕುತೂಹಲವನ್ನೂ ಕೆರಳಿಸಿ, ಅವನು ಕುಶಲಪ್ರಶ್ನೆಮಾಡಿದ. ವಿನಯದಿಂದ ತನ್ನ ಮಹೋದ್ದೇಶವನ್ನು ಕಂಸ ಹೀಗೆ ನಿರೂಪಿಸಿದ:

ಜನನಾಥಾ ನಿತ್ಯಚಂದ್ರೋದಯ ಧರಣಿಪತೀ ನಾಡುನಾಡಂ ತೊಟಿಲ್ದೆಂ
ಧನುವಂ ಕಲ್ವಟ್ಟೆಯಿಂ ಬಿಲ್ಲೋಜನನಱಿಸಿ ಬಿಲ್ವಲ್ಮೆಯೊಳ್ ದೇವ ನೀಂ ದೇ
ವನೆಯಾನುಂ ಚಟ್ಟನಾಗಲ್ ನಿನಗೆ ಬಗೆದು ಯುಷ್ಮತ್ದ್ವಿಷಧ್ವಂಸನೆಂ ಕಂ
ಸನೆನೆಂಬೆಂ ನಿನ್ನ ವಿಖ್ಯಾತಿಯನಖಿಳದಿಶಾಚಕ್ರದೊಳ್ ಕೇಳ್ದು ಬಂದೆಂ ॥

ವಸುದೇವ ಕಂಸನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದ, ವಿದ್ಯೆ ಕಲಿಸತೊಡಗಿದ. ಕಂಸನಾದರೋ "ವಸುದೇವನ ಶಿಷ್ಯ, ಮಿಕ್ಕ ಚಾಪಾಚಾರ್ಯರಿಗೆ ಉಪಾದ್ಯಾಯ ಎನ್ನುವಂತೆ ಬಿಲ್ವಿದ್ಯೆಯನ್ನು ಸಾಧಿಸತೊಡಗಿದ.

ಈ ಘಟ್ಟದಲ್ಲಿ ಸಿಂಹರಥನೆಂದು ಅನ್ವರ್ತಾಭಿಧಾನನಾದ ತಾಳಹಸ್ತನೆಂಬ ಒಬ್ಬ ದೊರೆಯ ಕೋಟಲೆಯ ಪ್ರಸ್ತಾವವನ್ನು ಕವಿ ತಂದಿದ್ದಾನೆ. ಪೌದನಪುರದ ಒಡೆಯನಾದ ಈ ಸಿಂಹರಥ ನಿಜವಾದ ಸಿಂಹವನ್ನು ಏರುತ್ತ, ಇತರರನ್ನು ಬೆದರಿಸುತ್ತ, ಭಯೋತ್ಪಾದಕನಾಗಿದ್ದ. ಎರಲೆ, ಕೋಣ, ಟಗರು, ಎತ್ತು ಎಂಬ ಸಾಮಾನ್ಯಪ್ರಾಣಿಗಳನ್ನು ವಾಹನವಾಗಿ ಪಡೆದು ದೇವರೆಂದು ಬೀಗುತ್ತಿರುವ ದಿಕ್ಪಾ;ಅರಿಗಿಂತ ತಾನು ಮಿಗಿಲೆಂದು ಆತ ಜಂಬ ಪಡತ್ತಿದ್ದನಂತೆ ,ಇಂತಹ ಕಡೆಗಳಲ್ಲಿ ಕವಿ ಅನಾವಶ್ಯಕವಾಗಿ ಅನುಚಿತಸಾದೃಶ್ಯಗಳನ್ನು ಕಲ್ಪಿಸಿ ಕವಿಸಮಯುದ ಬೆನ್ನುಬಿದ್ದಿದ್ದಾನೆ, ಈ ಸಾದೃಶ್ಯ ಎರಡು ವೃತ್ತಗಳಲ್ಲಿ ಬೆಳೆದಿರುವುದಂತೂ ಅಕ್ಷಮ್ಯ . ಸಿಂಹರಥ ಶೂರನೆಂಬುದನ್ನುಅ ಈ ಕಂದಪದ್ಯದಿಂದ ಸ್ಥಾಪಿಸಬಹುದಾಗಿತ್ತು :

ನಾಡೊಳಾಗೆ ಮೀಸೆದೆಱೆಯಂ
ಬೇಡಿಸುವಂ ಬೀರರರಸಿಯರ ವೆಸರಿಂ ಕೂ
ಸಾಡಿಸಲೀಯಂ ಹುಲ್ಲುರಿ
ಯಾಡಿಸುವಂ ತೇಜದುರಿಯಿನ್ಸಮೀಸೆಗಳಂ ॥

ಈ ಪದ್ಯದ ಮುಂದಿನ ಭಾಗವಾಗಿ ಬಂದಿರುವ ಪೌರುಷವರ್ಣವೆಯು ಪರಿಣಾಮಕಾರಿಯಾದ್ದು. ಜರಾಸಂಧಚಕ್ರವರ್ತಿಯನ್ನೇ

ಆತ ಕೆಣಕೆ , " ಬಿಡುವೆಸರ ಚಕ್ರಿಯಪ್ಪೊಡೆ । ಮಡಕೆಗಳಾಂ ಮಾಡಿ ಕಳಿಪುಗಲ್ಲದೊಡೀಗಳ್ ಮಡಕೆಗೆಡೆಮಾಡಿಕೊಳ್ಗೆ ಎಂದು ಮೂದಲಿಕೆಯ ಮಾತನ್ನಾಡಿ ಕ್ಷುದ್ರನಾದೊಬ್ಬ ದೂತನನ್ನು ಕಳಿಸಿದನಂತೆ. "ಖಳನಂ ಗೆಲ್ವುದೆ ಭಂಗಂ । ಕೆಳೆಗೊಳ್ವುದೆ ಕಷ್ಟಮನೊಳಾಗದು ಮಗೆಯಂ । ಕೆಳೆಯುಂ ಎನ್ನುವಂತಹ

ವಿಚಿತ್ರ ಪರಿಸ್ಥಿತಿ ಜರಾಸಂಧನಿಗೆ ಆದ್ರು ಆತ ತನ್ನ ಚತುರಂಗವನ್ನು ಯುದ್ಧಕ್ಕೆ ಅಟ್ಟಿದ . "ಅಟ್ಟಿತಿಂಬ ದೈವಕ್ಕೆ ಪಾಟಿಂಬಟ್ಟಂತೆ ಆಯಿತು, ಅಷ್ಟೇ ಸೈನ್ಯವೆಲ್ಲ ಸಿಂಹರಥನ ಸಿಂಹದ ಕೈಯಲ್ಲಿ ಸಿಕ್ಕಿ ವಿಧ್ವಸ್ತವಾಯಿತು. ಮಾರಿಯುಟಿ‍ದಡಿನಂತೆ ಒಬ್ಬನು ನುಸುಳಿಕೊಂಡು ಓಡಿಹೋಗಿ ಜರಾಸಂಧನಿಗೆ ವಿಷಯ ತಿಳಿಸಿದೆ ಈಗ ಕಂಗೆಟ್ಟ ಜರಾಸಂಧನಿಗೆ ಸ್ವಯಂವರಸಂದರ್ಭದಲ್ಲಿ ತನ್ನ ಪೌರುಷವನ್ನು ಮೆರೆದ ವಸುದೇವನ ನೆನಪು ಬಂತ್ತು. ಅವನಲ್ಲಿಗೆ ಹೇಳಿ ಕಳಿಸಿದ. ಅಲ್ಲದೆ ಸಿಂಹರಥನನ್ನು ಹಿಡಿದು ತಂದವನಿಗೆ ತನ್ನ ಮಗಳನ್ನೂ ಬೇಡಿದ ರಾಜ್ಯವನ್ನೂ ಕೊಡುವುದಾಗಿ ಘೋಷಣೆಯನ್ನೂ ಹೊರಡಿಸಿದ . ಕಂಸ ಆ ಘೋಷಣೆಯನ್ನು ಒಪ್ಪಿ ವಸುದೇವನಿಂದ 'ಚಟ್ಟರೊಳಗೆ ಪೆಸರಂ ನಿಲಿಸಿದೆ. ಎಂಬ ಮೆಚ್ಚುಗೆಪಡೆದ. ತಾನೇ ಸಿಂಹರಥನನ್ನು ಹಿಡಿದು ತರುವುದಾಗಿ ಹೇಳಿ ಪೌದನಪುರಕ್ಕೆ ಪಡೆಯೊಂದಿಗೆ ತೆರಳಿದ.

ಸಿಂಹರಥ ಸೊಕ್ಕಿನ ಶಿಖರವೇರಿದ್ದ " ಸೋರ್ಕಾನೆದಿಂಬಂಗೆ ಆಡೆ ಹೋಟಿ‍ಗೆ ಜರಾಸಂಧ ಚಕ್ರವರ್ತಿಯ ಸೇನಿಯನ್ನೆ ಬರಿದು ಮಡಿದ ತನಗೆ ಕಂಸನ ಸೇನೆ ಯಾವ ಲೆಕ್ಕ ? ಎಂದು ಗಹಗಹಿಸಿದ. ಎಡೆಯ ಕಡೆಯ ಬಡವರ ಬಲವೊಂದು ಪಲ್ಲ ಕೊನೆಗಂ ಬಾರದು ಎಂದು ಹೀನಾಯಮಾಡಿದ ಆದರೆ ಕಂಸನ ಪೌರುಷದ ಅರಿವು ಅವನಿಗೆ ಇರಲಿಲ್ಲ ,ಸಿಂಹರಥನ ಬಲವೆಲ್ಲ ಅವನ ಸಿಂಹ ತಾನೇ ಎಂದು ತಿ:ಇದಿದ್ದ ಕಂಸ ಅದರ ಮೇಲೆಯೇ ಕಿತ್ತ ಕತ್ತಿಯೊಂದಿಗೆ ಹಾರಿ ಬಿದ್ದ ಸಿಂಹವನ್ನು ಕೊಂದಿಕ್ಕಿದ. ಕವಿ ಈ ಸಂದರ್ಭದಲ್ಲಿ 'ಶೂದ್ರಕಂಬೋಲ್ ಕದನದೊಳಿಱಿದಂ ಎಂದು ಪುರಾಣವೀರನನ್ನು ನೆನೆದಿದ್ದಾನೆ.

ಇಲ್ಲಿಂದ ಮುಂದೆ ಆ ಸಿಹವನ್ನೆಳೆದುಕೊಂಡು ಹೋಗಿ ,ಜೊತೆಗೆ ಸಿತಗನಾದ ಸಿಂಹ ರಥನನ್ನೂ ಬಂಧಿಸಿಕೊಂಡು ಹೋಗಿ , ವಸುದೇವನಲಿಗೆ ಕಂಸನು ತಲುಪಿ , ಕೃತಕಾರ್ಯನಾಗಿ ತಾನು ಬಂದುದನ್ನು ಬಿನ್ನವಿಸಿದನೆಂಬ ಭಾಗ ನಿರರ್ಗಳ ದೇಶ್ಯಗತಿಯಲ್ಲಿ ಕವಿಯಿಂದ ನಿರೂಪಿತವಾಗಿದೆ. " ನಿಮ್ಮ ಸಿತಗನಪ್ಪ ಸಿಂಹರಥನಿವ್ನಪ್ಪನೆ ಬೇಸಗೋಳ್ಳಿಂ ಎಂದು ಆತನು ವಸುದೇವನಿಗೆ ಹೇಳುವಲ್ಲಿ ಕಂಸನ ಆತ್ಮಪ್ರತ್ಯಯ ಗುರುಭಕ್ತಿಗಾಳು ಒಂದೇ ತೋಕದಲ್ಲಿ ಎದ್ದು ತೋಟುತ್ತವೆ. ಈ ಕಾರ್ಯ ಜರಾಸಂಧನ ಗಮನಕ್ಕೆ ಬಂದಾಗ ಆತ ವಸುದೇವನನ್ನು ಎಕಾಸನವಿತ್ತು ಮನ್ನಿಸಿದ, ಮೆಚ್ಚಿದನ್ನು ಬೇಡಿಕೊಳ್ಳುವಂತೆ ತಿಳಿಸಿದ. ವಸುದೇವನಾದರೂ ತನ್ನ ಶಿಷ್ಯನಿಗೆ ಆ ಮನ್ನಣೆ ಸಲ್ಲತಕ್ಕದ್ದು ಎಂದು ಸಹಜವಾಗಿಯೇ ಚಕ್ರವರ್ತಿಗೆ ಬಿನ್ನಹ ಮಾಡಿದನು. ಕಂಸನು ದಿಟವಾಗಿ ಈ ಮನ್ನ್ನಣೆಗೆ ಪಾತ್ರನಾದರೂ ಸಹಜವಿನಯದಿಂದ ಅದರ ಹಿರಿಮೆಯನ್ನು ತನ್ನ ಗುರುವಿಗೇ ಒಪ್ಪಿಸಿದ. ಇಲ್ಲಿಅವನಾಡಿದ ಮಾತು ಸೊಗಸಾದುದು:

ಪರಚಕ್ರಹರಿಗೆ ರಣಕೇ

ಸರಿಗೆನ್ನಂ ಕರ್ಚಿ ಪಾಱಲಾರ್ಪದಟಿನ ಚ

ಟರದೆವರುವೊಳರೆಂದೆನೆ

ದೊರೆಯಾನೇಗಣಿತಮವರೊಳಾನೇವಿರಿಯಂ ॥

ಕಂಸ ಗುರುಭಕ್ತಿಯನ್ನು ನಿಷ್ಕಪಟಃರುದಯದಿಂದ ವ್ಯಕ್ತಮಡಿದ್ದು ಮಾತ್ರವಲ್ಲದೆ, ತಾನು ಯಾರೆಂದು ಪ್ರಶ್ನಿಸಿದ ಚಕ್ರವರ್ತಿಗೆ ನಾನು ಕೌಶಂಬಿಯ ಕಳ್ಳವತಿಯಾದ ಮಂಡೋದರಿಯಮ್ಮ ಎಂದು ಇದ್ದುದಿದ್ದಂತೆ ಹೇಳಿದ . ಜರಾಸಂಧನಾದರೋ ವಿವೇಕಿ ಆತ ಈ ಬಗೆಯ ಸಾಹಸ ಬೆಸ್ತರಲ್ಲಿ ತೋರುವುದಿಲ್ಲ ;ಇವನು ರಾಜಪುತ್ರನೇ ಆಗಿರಬೇಕು ಎಂದು ಸರಿಯಾಗಿ ಊಹಿಸಿದ ಅವನ ಆಕೃತಿಯಿಂಡಲೂ ಅದನ್ನರಿತ “ ಕಾಗೆ ಪೊರೆದನಿತಱಿಂದಂ। ಕೋಗಿಲೆ ತನದಱ ಪಿಲ್ಲೇಯಕ್ಕುಮೆ ಎಂದು ಕೊಂಡು , ಕರ್ಮಘಟಿತವಘಟಿತಘಟಿತಂ ಎಂದು ತನ್ನಲ್ಲಿಯೇ ಭಾವಿಸಿದ. ಮಂದೋದರಿಯನ್ನು ಈ ಬಗ್ಗೆ ಪ್ರಶ್ನಿಸಲು, ಜರಾಸಂಧ ಜನರನ್ನು ಕರೆತರಲು ಕಳಿಸಿದ. ಜರಾಸಂಧ–ಮಂಡೋದರಿಯರ ಭೇತಿಯ ಸಂದರ್ಭದಲ್ಲಿಯೂ ಕವಿಯ ಮಾತುಗಾರಿಕೆ ಮನನೀಯವಾಗಿದೆ. ಸಾಮಾನ್ಯಕಿಲದಲ್ಲಿ ಹುಟ್ಟಿದ ಮಂಡೋದರಿ ತನ್ನ ಸ್ವಭಾವಕ್ಕೆ ಅನುಸಾಅರವಾಗಿ ತೊರಿರುವ ಪ್ರತಿಕ್ರಿಯೇ ಆಡಿರುವ ಮಾತು ಸರಳವಾಗಿರುವಂತೆ ಸಹಜವೂ ಆಗಿದೆ. ಕವಿ ಅಯಾ ಪಾತ್ರದ ಸ್ವಭಾವಚಿತ್ರಣವನ್ನು ಆಯಾ ಸನ್ನಿವೇಶಕ್ಕೆ ಒಪ್ಪುವಂತೆ , ಸಮಾಜಿಕ ಸ್ತರಕ್ಕೆ ಒಪ್ಪುವಂತೆ ಚಿತ್ರಿಸಲು ಶಕ್ತನಾಗಿದ್ದಾನೆ ಎಂದು ಇದರಿಂದ ಸುಲಭವಾಗಿ ತಿಳುಯಬಹುದು. ಆಕೆಯ ನಿರೂಪಣೆಯಂತೆ ಹಾಗೂ ಆಕೆ ಒಪ್ಪಿಸಿದ ಪೆಟ್ಟಿಗೆಯಲ್ಲಿ ದೊರೆತ ಸಾಕ್ಷ್ಯದಂತೆ ,ಅ ಆ ಕಂಸನು ಮಧುರೆಯೊಡಯನಾದ ಉಗ್ರಸೇನನಿಗೆ ಆತನ ಪತ್ನಿಪದ್ಮಾವಯಲ್ಲಿ ಹುಟ್ಟಿ ದುರ್ಮುಹುರ್ತದಲಿ ಹುಟ್ಟಿದ್ದು ಕಾರಣವಾಗಿ, ಪೆಟ್ಟಿಗೆಯಲಿ ನಿಕ್ಷೇಪಗೊಂಡು ಯಮುನಾನದಿಯಲ್ಲಿ ತೇಲಿಬಿಟ್ಟವನೆಂದೂ ಬೆಸ್ತ ಹೆಂಗಸು ಮಂದೋದರಿಗೆ ಆ ಪೆಟ್ಟಿಗೆ ದೊರೆತು ಆಕೆಯಿಂದ ಬೆಳಾಸಲ್ಪಟವನೆಂದು ವಿದಿತವಾಡುತ್ತದೆ. ಅಲ್ಲದೆ ತನ್ನ ಮಾಂಡಲಿಕ ,ಅದಕ್ಕಿಂತ ಹೆಚ್ಚಾಗಿ ತನ್ನ ತಂಗಿ ಪದ್ಮಾವತಿಯ ಪತಿಯೆ ಅಲ್ಲಿಗೆ ಕಂಸ ತನಗೆ ಸೋದರಳಿಯನೇ ಆದ, ಅದ್ದರಿಂದ ಆತ “ ನಿಸದಂ ನೀನೇನ್ನ ಕೂಸಿಂಗೊಡೆಯನ್ ಎನಗಿನ್ನುಂಟೆ ತೇಜಂ ಭವತ್ಸಾಹಸಿಂಹಕ್ರೀಡೆಗಾಂ ಪಂಗಿಗನೆನ್, ಅಱಿದಿರು ಎಂದು ಸ್ಪಷ್ರವಾಗಿ ತಿಳಿಸಿ ತನ್ನ ಮಗಳು ಜೀವ,ಂಜಸೆಯನ್ನು ಆತನಿಗೆ ಕೊಟ್ಟು ಮದುವೆಮಡಿದ. “ ಗಲ್ಲದೊಳ್ ಕೈಯನ್ನಿಟ್ಟು ಮರವಟ್ಟಿರ್ದ ಮಂಡೋದರಿಗೆ ಉಡಲುಂ ತುಡಲಂ ಕೊಟ್ಟು ಕಳುಹಿಸಿದ.

ಆಕೆಯಾದರೋ "ಆಟ್ಟುಪಡೆದ ಮರೆ ಬೆಳೆಗಯ್ಗಂಡಂತೆ ಬದುಕಿದೆ ಎಂದುಕೊಂಡು ಉಡುಗೊರೆಯೊಂದಿಗೆ ಹೊರಟುಹೊದಳು.

ಇರಾಸಂಧ ತನ್ನ ಘೋಷಣೆಯಂತೆ ಕಂಸನಿಗೆ ತಾನು ಮೆಚ್ಚಿದ ನಾಡನ್ನು ಬೇಡಿ ಕೊಳ್ಳುವಂತೆ ತಿಳಿಸಿದ ಕಂಸ, ತನಗೆ " ತನಯಪ್ರಿಯನಪ್ಪ ತಂದೆಯ ನಡನೆ ದಯೊಗೆಯ್ದುದು ಎಂದ. ಮೊದಲ ಸಲ ಕಂಸನ ವ್ಯಕ್ತಿತ್ವದಲ್ಲಿ ಮತ್ಸರವುದ್ದಿ ಕ್ರೋಧ ಹೆಡೆಯೆತ್ತಿತು, ಇಲ್ಲಿ ತನ್ನನ್ನು ನದಿಗೆ ಬೀಸಾಡಿದ ತಂದೆಯನ್ನು ವ್ಯಂಗವಾಗಿ ಅತ ತನಯಪ್ರಿಯ ಎಂದು ಹೇಳಿದ್ದಾನೆ. ಜರಾಸಂಧನಿಗೆ ಈ ಹೊಟ್ಟೆಯ ಕೋಪ ಅರ್ಥವಾಯಿತು. ಆಗ ಹೀಗೆಚಿಂತಿಸಿದ :

ಬಿಸಮೌಗುಟ್ದಿಪ್ಪನೀ ಸಾ

ಹಸಿ ತಂದೆಗೆ ಕಾಣದೆನೆನಗೀ ಸಂಸಾ

ರಸಮುದ್ರದೊಳಗಿಟದೇ ತಾ

ಮಸವೆಸಡಿಯ ಬಸಿಱನೊಡೆದು ಪುಟ್ಟವೆ ಮಱಿಗಳ್ ॥

ಎನಿತು ತನೂಜಂ ತಂದೆಗೆ ಮುನಿದೊಡಂ ಅಱಿವಂತು ಪೊಲ್ಲಕೇಯ್ಗಮೆ ಪಿರಿದುಂ ಎಂದೂ " ಬಿಸುನೂರಾ ಮನೆಯಂ ಸುಡುಗುವೆ ಎಂದೂ ಅತ ಉದರವಾಗಿ ಯೋಚಿಸಿದ. ಅದರೆ ಹೀಗೆ ಯೋಚಿಸಿದ್ದೇ ತಪ್ಪಾಯಿತು ಚಕ್ರವರ್ತಿ ಮದುರಾಪುರದ ಒಡೆತನವ್‌ನ್ನು ತನಗೆ ಒಪ್ಪಿಸಿದ್ದೇ ತಡ ಕಂಸನು ಚರುರಕ್ಷೋಹಿಣೀ ಬಲದೊಂದಿಗೆ ವಸುದೇವ ಸಹಿತವಾಗಿ ದಾಳಿಟ್ಟು " ಮದುರಪುರಮು, ಮಹೀನೂಪುರಮಂ ಕೊಳ್ವಂತೆ ಲೀಲೆಮಾತ್ರದಿಂದ ತನ್ನ ವಶಪಡಿಸಿಕೊಂಡನು. ಅರಣಿಯಿಂದ ಹೊತ್ತಿಕೊಂಡ್ ವೈಶ್ವಾನರ ಅರಣಿಯನ್ನೇ ಸುಟ್ಟುರುಹುವಂತೆ , ಮನಸ್ಸಿನಲ್ಲಿ ಹುಟ್ಟಿದ ಮನಸಿಜ ಮ್ನಸ್ಸನ್ನೇ ಬೇಯಿಸುವ್ಮೆ್ತ ಉಗ್ರಸೇನನು ಜನ್ಮ ಕೊಟ್ಟ ಕಂಸನು ಜ್ನನ್ಮದಾತನಾದ ಉಗ್ರಸೇನನನ್ನೇ ಸೋಳಿಸಿ ಬಂಧಿಸಿದ ತಾನೇ ದೊರೆಯಾದ . ಇದರಿಂದ ಸಹಜವಾಗಿಯೇ ಉಗ್ರಸೇನನ ಸೋದರ ದೇವಸೇನಾನ ಮಗ ಯುವರಾಜ ಅತಿಮುಕ್ತಕನೂ ತನ್ನ ದೊಡ್ಡಪ್ಪ್ವನನ್ನು ಹಾಗೆ ಸೆರೆಗೆ ಹಾಕಿದ್ದೇ ತನಗೆ ನಿರ್ವೆಗವನ್ನುಂಟುಮಸಲು (೭–೫ ವ.) ತಪಸ್ಸಿಗೆ ಹೊರಟುಹೋದನು. ಅತಿಮುಕ್ತಕ ಪ್ರತಿಭಟಿಸಲಿಲ್ಲ , ವೈರಾಗ್ಯಕ್ಕೆ ಮನಸ್ಸುಮಾಡಿದ ಎನ್ನುವುದು ಜೈನಧರ್ಮದ ಮೂಲಶ್ರುತಿಗೆ ಅನುಸಾರಾವಾದ್ದು. ಇರಲಿ ಅದರೆ ಕಂಸನಹೀನ ಕೃತ್ಯ ದಲ್ಲಿ ವಸುದೆವನು ಏಕೆ ಭಾಗಿಯಾಗಬೇಕಾಗಿತ್ತು ? ಇಂಥ ಪ್ರವಲನ ಬೆ,ಂಬಲ

ದೊರೆತ ಕಂಸನು ಸಹಜವಾಗಿಯೇ ಆ ಉಪಕಾರವನ್ನು್ನ ಸ್ಮರಿಸುತ್ತ ಇವೆಲ್ಲ ಆತನ ' ಕಾರುಣ್ಯದ ಫಾಲ ಎಂದು ವ್ಯಕ್ತವಾಗಿಯೇ ಹೇಳಿದನು.

ಆನೆತ್ತರ್ಕಸುತಾಪ್ರವಾಹವ್ರಮೆತ್ತಲ್ಲಿರ್ದ ಮಂಜೂಪವೆ

ತ್ತಾ ನೀಚಾಶ್ರಯವೆತ್ತ ನಿಮ್ಮ ಬರವೆತ್ತೀ ಶಾಸ್ತ್ರ ಶ್ರಮಂ

ತಾನೆತ್ತಿಕ್ಕುವುದತ್ತ ಸಿಂಹರಥನಂ ಚಕ್ರಿಪ್ರಸಾದೋದಯಾ

ಧೀನಂ ರಾಜ್ಯಮಿದೆತ್ತದೆವುದಿನಿತುಂ ಯುಷ್ಮತ್ಪ್ರಸಾದೋದೆಯಂ ॥

ಎಂದು ಅರಿಕೆಮಾಡಿದ್ದು ಮಾತ್ರವಲ್ಲ. "ನನನ್ನೂ ನನ್ನ ರಾಜ್ಯಭಾರಸಪ್ತಾಂಗ ಎಲ್ಲ ವನ್ನೂ ನೀನು ಸಂರಕ್ಷಿಸಬೇಕು ಎಂದು ಸಃ ಕೇಳೀಕೊಂಡ.ಅ ಅವನು ಅಡಿದ ದೊಡ್ಡ ಮಾತು ಗಳಾಲ್ಲಿ ಸಹಜವಿನಯವೆಷ್ಟು . ವಿಚಾರಿಸಬೇಕಾದ್ದು. ಸಹಜವಿನಯದ ಪಾಲೇ ಇಲ್ಲಿ ಹೆಚ್ಚಾಥಿದ್ದರೂ ಇರಬಹುದು ಇಂತಹ ಸಂರಕ್ಷಕನಿಗೆ ತನ್ನಯ ಮನೆಯ ಬಲದ ಕೆಲದೊಳ್ ಭವ್ಯವ್ವಾದ ರಾಜಭವನವನ್ನು ಮಾಡಿಸಿ ವಸುದೇವನನ್ನು ಅಲ್ಲಿರುವಂತೆ ಮಾಡಿದ. ಅತಮಲ್ಲಿ ಮೊದಲೇ ಅಸಕ್ತೆಯಾಗಿದ್ದ ತನ್ನತಂಗಿ( ತನ್ನಚಿಕಪ್ಪನಮಗಳು) ದೇವಕೀಯನ್ನು ಆತನಿಗೆ ಮದುವೆಯನ್ನೂ ಮಾಡಿಕೊಟ್ಟು ಬಹುಪತ್ನಿಯರ ಸ್ವಮಿಯಾಗಿದ್ದವಸುದೇವನು ಯಾವ ಹಿಂಜರಿಕೆಯೂ ಇಲ್ಲದೆ ಅಕಿಯನ್ನೂ ಸಂತೋಷವಾಗಿಯೇ ಮದುವೆಯಾದನು! ದೇವಸೇನ, ದೇವಕಿಯ ತಂದೆ  ಎಲ್ಲಿದ್ದನೋ ಆವನು ಒಪ್ಪಿದನೋ ಬಿಟನೋ ಕಂಡವರಾರು?

ವಸುದೇವ–ದೇವಕಿಯರ ವಿವಾಹಮಂಃಗಳದೊಂದಿಗೆ ನೇಮಿಚಂದ್ರನು ತನ್ನ ಕಾವ್ಯದ ಆರನೆಯ ಆಶ್ವಾಸವನ್ನು ಕೊನೆಗೊಳಿಸಿದ್ದಾನೆ ; ಅವರ ಬೋಗನುಭವದ ವರ್ಣನೆಯನ್ನೂ ಪ್ರೌಢಿಮೆಯ ಶೈಲಿಯಲ್ಲಿ ಸಾಂಪ್ರದಾಯಿಕವಾಗಿ ಒದಗಿಸಿದ್ದಾನೆ.

ಸಪ್ತಮಾಶ್ವಾಸನು ಕಾರಣಪುರುಷನಾದ್ ಶ್ರೀಕೃಷ್ಣನ ಜನನಕ್ಕೆ ಹೇತುವಾದ ಒಂದು ವಿಚಿತ್ರ ಸನ್ನಿವೇಶದ ವರ್ಣನೆಯೊಂದಿಗೆ  ಆರಂಭಗೊಂಡಿದೆ. ಅದೊಂದು ದಿನ ಮಧ್ಯಹ್ನದ ಹೊತ್ತು . ಕೆಲಕಾಲದ ಹಿಂದೆ ಯುವರಾಜಪದವಿಯನ್ನು ಬಿಟ್ಟು ತಪಸ್ವಿಯಾಗಿದ್ದ ಅತಿಮುಕ್ತಕಯತಿ ಚರಿಗೆಗೆ ಎಂದು ಮಧುರಾಪುರವನ್ನು್ನ ಪ್ರವೇಶಿಸಿದ. ರಾಜ್ಯದ ಸಿರಿ ಸಂಪತ್ತುಗಳಾನ್ನು ಅನುಭವಿಸಿ ವೈಭಾವದಲ್ಲಿದ್ದ ಈ ವ್ಯಕ್ತಿ ಈಗ ಹೇಗಿದ್ದಾನೆ?

ಬಲಿಯೆಲ್ ಬೇಱರ್ದ ಕಂಕಾಳಿಕೆ ಪೆಡತಲೆಯಂ ಪೊಕ್ಕ ಕಣ್ ತೋರ್ಪ ಕೆಯ್ಯಾ

ಲ್ಸೆರೆ ಪಾತಾಳಕ್ಕೆ  ಪೊಕ್ಕಿರ್ದೋಣವಸಿಱುಡುಗಿರ್ದೋಂದುರಂ ಪೊಟ್ಟಿಬಾಯ್ ಬೇ

ಕರಿವೋದಂತಿರ್ದ ಬಾನಂಗುಂಟೆ ಗಿಡಿಗಿಡಿಜಂತ್ರಬೋಲಾರ್ಗಿಡ  ಮೈ ಮೈ

ಸಿರಿ ಚಿದ್ರೂಪಕ್ಕೆ ಪಕ್ಕಾಗಿರೆ ಚರಿಗೆಗೊಡಲ್ವಂದನೊರ್ವ  ಮುನೀಂದ್ರಂ ॥

ಕವಿಯ ಕುಂಚದ ಸುಂದರ ಚಿತ್ರವಿದು ಈ ತಪಸ್ಸಿಯತಪಸ್ಸಿನ ತಾಪಕ್ಕ್ಕೆ ಸೂರ್ಯ ಮೋಡದ್ ಮರೆಗೆ ಸೇರುವಂತಾಯಿತು. ಅಡವಿಯ ಕಿಚ್ಚು ಹುಲ್ಲು ಕಚ್ಚುವಂತಾಯಿತು ನೀರಕಿಚ್ಚು ಹೇಗ್ಗಡಲಿನಲ್ಲಿ ಅಡಗಿರುವಂತಾಯಿತು.  ಮುಂತಾಗಿ ಕವಿ ಅತಿಶಯೋಕ್ತಿಯ ಮಾತುಗಳಾನ್ನು ಮುಂದೆ ಅಡಿದ್ದಾನೆ.

ಮಾಸೋಪವಾಸದ ಪಾರಣೆಗೆ ಬಂದವನು ಕಂಸನ ಅರಮನೆಯ ಮುಂದೆಯೆ ನಡೆದಿದ್ದ ಈ ಸಂದರ್ಭವನ್ನು ಉಪಯೋಗಿಸಿಕೊಂಡು , ಕಂಸನ ಪತ್ನಿ ಜೀವಂಜಸೆ ಅತನನ್ನು ಅಪಹಾಸ್ಯ ಮಾಡಲೆಂದು ಉದ್ದೇಶಿಸಿಸ್ ಅದೇ ತಾನೇ ಋತುಮತಿಯಾಗಿದ್ದ ದೇವಕಿಯ ‘ಆನಂದವಸ್ತ್ರವನ್ನು ಹಡಲಿಗೆಯಲ್ಲಿಟ್ಟುಕೊಂಡು ಆತನೆದುರಿಗೆ ಬಂದು ವಿನೋದಕ್ಕೆಆರಂಭಿಸಿದಳು.

ಭಾವಾ ನಮೋಸ್ತು ಡಿ

ದೇವಕಿ ಮೈನೆಱೆದಳೆಂದು ಬಂದಿರೆ ಲೇಸಾ

ಯ್ಯಾವುದನುಡತಂದಿರೆನು

ತ್ತ ವಧು ಮೈದುನಿಸಿ ನಗ್ಗುತಮಡ್ಡಂ ಬಂದಳ್ ॥

ಬತ್ತಲೆ ಬಂದಿರೆ ಪಿಡಿಯಿಂ

ಸುತ್ತಿಮಿದಂ ನಿಮ್ಮ ತಂಗೆಯಡಲಟ್ಟಿದಳೆಂ

ದೆತ್ತಿದಳಾವಂಗೆ ಮೊಗಮುರಿ

ವುತ್ತಿರಲನಂದವಸ್ತ್ರಮಂ ದೇವಕಿಯಾ ॥

ವಿರಕ್ತರ ಮೊಗಕ್ಕೆ ಹೀಗೆ ರಕ್ತವಸ್ತ್ರವನ್ನೆತ್ತಬಹುದೇ? ಅತಿಮುಕ್ತನಿಗೆ ನಾಚಿ ನೆಲಕ್ಕೆ ಇಳಿಯುವಂತಾಯಿತು; ಹಸಿವಿನ್ ಬೆಂಕಿ ರೋಷದ ಬೆಂಕಿಯಾಗಿ ಚಿಮ್ಮಿತು. ವಾಚಾಸಾಮಿತಿಯನ್ನು ಆತ ಮೀರ,ಆಕೆಯ  ಕುಲವಲ್ಲರಿಯನ್ನು ಬೇರುಸಹಿತ ಕಿತ್ತು ಬಿಸುಡವಂತಹ ಮಾತು ಆಡಿದನು .ಈ ಮಾತು , ಆ ಮುಂದಿನವಿದ್ಯಮಾನಗ್ಳು ಹರಿತವಾದ ಬಾಣ ಸಾಗುವಂತೆ ಸಾಗುತ್ತವೆ. ಮುನಿ ಜೀವಂಜಸೆಯ ಕುಚೇಷ್ಟೇಯ ಮಾತು ವರ್ತನೆಗಳು ಆಕೆಗೆ ವಿಪತ್ಕರವಾಗಿ ಪರಿಣಮಿಸುವುದೆಂದು ಸಾರಿದನು. “ ಬದ್ದವಣಾಕ್ಕೆತ್ತಿದ ಕಎಯ್ಯನೆ ಬಸಿಱಿಂಗೆತ್ತುವ ಎಂದು ಕೆಟ್ಟಕಾಲ ಸನ್ನಿಹಿತವಾದ್ದುದನ್ನು ಆಡಿದನಲ್ಲದೆ.

ಆಕೆಯ ತೋರಿದ ಋತುವಸ್ತ್ರ ಮುಂದೆ ಜನಿಸ್ಲಿರುವ ದೇವಕಿಯ ತನಯನಿಂದ ನೆತ್ತರಕಾರುವ ಕಂಸನ ರಕ್ತವಸ್ತ್ರವನ್ನು ಮುಂದಾಗಿ ತೋರಿಸುವ ಸಂಕೇತವೆಂದು ಹೇಳಿ ಆಕೆ ಬೆಚ್ಚುವಂತೆ ಮಾಡಿದ. " ಇದು ತಪ್ಪಿದಂದು ನೀನು ನನ್ನನು ಕಾಡಬಹುದು, ನಗಬಹುದು ಎಂದು ಚಲವಾಡಿದ "ಇಟ್ಟಗ್ರ್ಗಾಜಿದೆ ಪೆಟ್ಟೆಯಂ ಕಚ್ಚುವಂತೆ ಹುಟ್ಟಿದ ಮನೆ ಹೊಕ್ಕಮನೆ ಎರಡರ ಕೇಡನ್ನೂ ಆಡಿ ತೋರುವಂತೆ , ಆ ಋತುವಸ್ತ್ರವನ್ನು ಎರಡು ಸೀಳಾಗಿ ಜೀವಂಜಸೆ ಹರಿದುಬಿಟ್ಟಳು. ಮುನಿ ಮುಂದುವರಿದು,

ಜೀವಮಂಜಸೆ ದುರ್ಧರಯ

ದ್ಧಾವನಿಯೊಳ್ ನಿನ್ನ ಗಂಡನಂ ತಂದೆಯುಮಂ

ದೇವಕಿಗೆ ಪುಟ್ಟದಾತನೆ

ದೇವರ್ಕ್ಗಾದೊಡಮಡುರ್ತು ಕೊಲ್ಲದೆ ಮಾಣಂ ॥ ಎಂದು ಸಹ ಹೇಳಿಬಿಟ್ಟನು. ಇನ್ನು ಜೀವಂಜಸೆಯ ಪಾಲಿಗೆ ಏನು ಸಂತೋಷವುಳಿದಿದೆ ? ಆಕೆಯ ಕಿವಿಗೆ ಮಹಾಪ್ರಳಯ ದ್ದ ಕವಿದಂತಾಯಿತು. ಆಕೆ ಕ್ಷಮೆ ಬೇಡಿದಳಾದರೂ ಮುನಿ , " ಎಮ್ಮ ಪರಕೆಗೆತೆಱೆವ ಬಾಯಂ ಬಯ್ಗುಳಿಂಗೆ ತೆಱೆಯಿಸಿದೆ ; ಕ್ಷಮೆಗೆ ಬಂದ ಮನಮಂ ಮುನಿಸಿಂಗೆ ಬರಿಯಿಸಿದೆ ; ಇನ್ನು ಕ್ಷಮಿಯಿಸುವುದೊಡಮಿದು ನಿನ್ನ ನಸುನಗೆನಗುವ ಮೊಗಮನಟಿಸಿದಲ್ಲದೆ ಮಾಣದು ಎಂದು ಹೇಳಿಬಿಟ್ಟನು. ತೊಟ್ಟ ಬಾಣ ಹಿಂದಿರುಗುವಂತಿರಲಿಲ್ಲ ಬಾಣ ನೆಟ್ಟ ಜಿಂಕೆಯಂತೆ ಜೀವಂಜಸೆ ತಲ್ಲಣಿಸಿದಳು. ಹಾರ ಕಡೆಗಗಳೂ ಕಣ್ಣೀರೂ ಕೆಳಗುರುಳಿ ಆಗಲೇ ತನ್ನ ಗಂಡನ ಸಾವುಗಂಡಂತೆ ಆಯಿತು. ಅವಳಿಗೆ.

ವಿನೋದ ತೀವ್ರವಿಷಾದಕ್ಕೆ ತಿರುಗಿತು. ಆಕೆಯ ಗರ್ವಪ್ರೇರುತವಾದ ಚರ್ಯೆ ಆಕೆಯ ಪತನಕ್ಕೆ ಹೇತುವಾಯಿತೋ ಕಂಸನ ದುರ್ವರ್ತನೆಯ ಫಾಲವೇ ಅವಳಿಂದ ಹಾಗೆ ಮಾತನಾಡಿಸಿತೋ ಅತಿಮುಕ್ತಕನ ಮನಸ್ಸಿನಾಳಾದಲ್ಲಿ ಹೂದುಗಿಡ್ಡ ಕಂಸ–ಜೀವಂಜಸಯರ ಮೇಲಿನ ಪೂರ್ವಕ್ರೋಧವೇ ಉಕ್ಕಿ ಬಂದು ಹೀಗೆ ಆಯಿತೋ , ಕೃಷ್ಣನ ಅಭ್ಯುದಯದ ಭಾವಿ ಶಿಲಾಲಿಖಿತ ದಂತೆ ಇಲ್ಲವೆ ಆಗವೇಕಾಗಿದ್ದಿತೋ ಅಂತೂ ವಿಷಾದಕರ ಸಂಘಟನೆಗಳು ಹೀಗೆ ಜರುಗತೊಡಗಿದವು.

ಈಗ ಜೀವಂಜಸೆ 'ನೀರ್ಪೋಱಗಟಿದ ಬಾಳೆಯಂತೆ ಮಿಡುಕಿದಳು, ಮೂರ್ಛೆ ಹೋದಳು ಶೈತ್ಯೋಪಚಾರಕ್ಕೆ ಎಚ್ಚತ್ತಳಾದರೂ ಎದೆಯೊಳಗೆ ಸಂಕಟ " ಪೊಟ್ಟರದ ಕಿರ್ಚಿನಂತೆ ಸುಡುತ್ತಲೇ ಇತ್ತು. " ಕನ್ನದೊಳ್ಸತ್ತ ಕಳ್ಳನ ತಾಯಂತೆ ಒಳಗೊಳಗೇ ಅಳುತ್ತಿದ್ದಳು. ತಾನು ಮಾಡಿದ ಪಾತಕವನ್ನು ಯಾರಲಿಯೂ ಹೇಳಿಕೊಳ್ಳುವಂತಿರಲಿಲ; ನಿಂಗಿಕೊಳ್ಳುವಂತೆಯೂ ಇರಲಿಲ್ಲ . ದೇವಲಿ ಏಕೆ

ಮೈನೆರೆದಳೋಈ ಯತಿ ಏಕೆ ಬಂದನೋ ಅವನನ್ನು ಅಂಜದೆ ನನು ಏಕೆ ಕೆರಳಿದೆನೋಆನು ಏಕೆ ಹೀಗೆ ವಿಷವಿಟ್ಟನೋ ಇವೆಲ್ಲ ನನ್ನ ಪುರಾಕೃತಕರ್ಮ ಎಂದು ಗೋಳಿಟ್ಟಳು. ಕಂಸನಿಗೆ ಆಕೆಯ ಅವಸ್ಥಾಂತರವನ್ನು ಕಂಡು ಗಾಬರಿಯಾಯಿತು. ಅವಳ ಮೊಗದ ದುಗಡ ಕಣ್ಣ ನೀರು ಬಿಸಿಯುಸಿರು ಇವಕ್ಕೆ ಏನು ಕಾರಣ ? ಎಂದು ಪ್ರಶ್ನಿಸಿದ . ಪತ್ನಿಯ ವಿಷಯದಲ್ಲಿ ಅವನ ಅದರ ಅಸ್ಥೆಗಳು ಮೆಚ್ಚುವಂಥವು. ಆಕೆ ಮೂಗರು ಕಂಡ ಕನಸಿನಂತೆ ಏನನ್ನೂ ಆಡದೆ ಸ್ವಲ್ಪ ಹೊತ್ತು ಸುಮ್ಮನಿದ್ದಳು ; ಅಮೇಲೆ “ಇದು ನಿನಗೆ ನುಡಿಯಲ್ಕಕ ಮಾತಲ್ಲ ಎಂದು ತೆಲಿಯಾಡಿಸಿದಳು. ಪತಿಯ ಒತ್ತಾಯಕ್ಕೆ ನಡೆದುದನ್ನು  ತನ್ನದೇನೂ ತಲ್ಲಿಲ ಎಂದು ಅವನು ತಿಳಿಯುವಂತೆ ಜಾಣ್ಮೆಯಿಂದ ಹೇಳಿದಳು. ಹೇಳುವುದು ಅವಳಿಗೆ ಕಷ್ಟವಾಯಿತು. ಈ ಜಾಣ್ಮೆ ಪ್ರಾಯಃ ಸ್ತ್ರೀಸಹಜವಾದ್ದು ! ಕಂಸ ಬೆದರಿದ  “ ಕದಡೆ ಕಲಂಕದಿರ್ಕುಮೆ ಮರುನ್ನದಿಯಂ ಪೊಸಿದಿಕ್ಕೆ ಕಂದುನಾಱದ ಪೊಸಪೂವುಂ, ಏನ್ ಅರಿಯ ಚಂದನದೊಳ್ ಕಿಡಿ ಪುಟ್ಟದೆ? “ ಶಾಂತರಾದವರನ್ನು ಗರ್ವಿಷ್ಠರು ತಿರಸ್ಕರಿಸಿದರೆ, ಅವರ ಮನಸ್ಸು ಸಹ ವಿಹಾರಕ್ಕೆ ಇಳಗಾಗದಿರುವುದು ಸಾಷ್ಯವಿಲ ಎಂದು ಅವನು ಬಲ್ಲಾದನ್ನು ಎತ್ತಿ ಆಡಿಯೂ , ಹೆಂಡತಿಯನ್ನು ಈ ವಿಷಾಯದಲ್ಲಿ ಆಕ್ಷೇಪಿಸಲು ಆನು ಹಿಂಜರಿಯಲಿಲ್ಲಿ “ ಹಿರಿಯ ಮರ್ಮಜ್ಞ, ಮೂರ್ಖ ನರಪತಿ, ಧನಪತಿ, ಗುರು, ದೈವ ಇವಕ್ಕೆ ಅಂಜಲೇಬೇಕು ಎಂಬುದನ್ನು ತಿಳಿದ ವಿವೇಲಿ ಅವನು. “ಇದನ್ನು ಯರಾದರೂ ಹೇಳಿಕೊಡಬೇಕೆ ? ಹಾಲು ಕುಡಿಯುವ ಹಸುಳೆಗಳು ಮೊದಲಾಗಿ ಎಲ್ಲರೂ  ಬಲ್ಲರು ನಗೆಗೆ ಎಂದು ಆಡಿದರೂ ಸವಣರ ಮಾತು ಸಟೆಯಾಗದು “ಎಂದು ಅವಳಿಗೆ ಮನವರಿಕೆ ಮಾಡಿದ ಅದರೆ ಅವನು ಅಧೀರನಾಗಲಿಲ್ಲ. ಕೂಡಲೇ ಉಪಾಯವೊಂದನ್ನು ಚಿಂತಿಸಿದ . “ ಕಾರನಮಿಲ್ಲದೆ ಕರ್ಯಮೆಂತಾದಾಪುದು ; ಇದರ್ಕೆ ಕಾರಣಾಭೂತಮಪ್ಪ ದೇವಕೀಯನೆ ಕೊಲ್ವೆನ್ ಎಂಬುದೇ ಅ ಕಠೋರವಾದ ಉಪಾಯ ಈ ಸನ್ನಿವೆಶವನ್ನು ಪಂಪಾರಾಯಣದಲ್ಲಿ ಬರುವ ರಾವಣನ ಮರಣಾಕಾರಣಾವನ್ನು ನೈಮುತ್ತಿಕರಿಂದ ಮೊದಲಾಗಿ ತಿಳಿದ ವಿಭೀಷಣನು ಅದನ್ನು ತಪ್ಪಿಸಲು ರಾಮನ ಜನಕ ದಶರಥನನ್ನೆ ಕೊಂದುಬಿಡಲು ಆಲೋಚಿಸಿದ ಸನ್ನಿವೆಶದೊಂದಿಗೆ ಹೋಲಿಸಬಹುದು (ಅಶ್ವಾಸ ೩ ಪದ್ಯ ೨೩–೨೪) “ ಕಾರಣಾವಿಘಟನಮೆ  ಕಾರ್ಯವಿಘಟನಮಲ್ತೇ ಎಂಗಿದಾಗಿ ವಿಭೀಷಣ ಆಲೋಚಿಸಿದನಂತೆ !

ಹೀಗೆ ಕಂಸನಿಗೆ ದುಷ್ಟಯೋಜನೆ ಬಂದಾಗ , ದಿವ್ಯಧ್ವನಿಯೊಂದು ‘ಆಗದಾಗದು ಎಂದಿತೆಂತೆ ಅದನ್ನು ಕೇಳಿ ಮತಷ್ಟು ಕೆರಳಿದ ಕಂಸ “ ವಿನಿತೀರ್ಧೂರ್ತಲಕ್ಷಣಂ ಎಂಬಂತೆ , ಕಪಟವಿನಯದಿಂದ ಭಯಸ್ಥನಾಗಿ

ವಸುದೇವನಲ್ಲಿಗೆ ಹೋಗಿ ತನ್ನ ವಿಚಿತ್ರವಾದ ಬೇಡಿಕೆಯನ್ನು ಆತನ ಮುಂದಿಟ್ಟ " ದೇವಕಿಗೆ ನನ್ನ ಮನೆ ತವರೂ ಹೌದು, ಹೊಕ್ಕ ಮನೆಯೂ ಹೌದು; ಅವಳಿಗೆ ಸಂತೋಷವಾಗುವುದಕ್ಕೆ ಅಲ್ಲದಿದ್ದರೆ ,ಈ ಸುಳ್ಳು ಸದ್ಭಾವನೆಯಿಂದೇನು ಪ್ರಯೋಜನ? ಭಗಿನಿಯರು ಹಡೆದ ಉತ್ಸವಕ್ಕೆ ಮಂಗಳವಾದ್ಯಗಳು ಮೊಳಗಿದರೆ ಮನೆ ಹೆಮ್ಮನೆಯಾಗಿ ಬೆಳೆಯುವುದು. ದೇವಕೀದೇವಿ ಸಾವಿರ ಮಕ್ಕಳನ್ನು ಹಡೆದು ಮನೆ ತುಂಬಲಿ ಅವಳನ್ನು ನನ್ನ ಮನೆಗೆ ಕಳಿಸಿಕೊಡಿ ಎಂದು ವಿಜ್ಞಾಪಿಸಿದನು.

ಈ ಮಾತು ಖಂಡಿತವಾಗಿ ಧೂರ್ತವಿನಯದ ಮಾತೇ ಕವಿಯೇ ಅದನ್ನು "ವಿಪಯೋಮುಖ ವಿಷಕಿಂಭ ಎಂಬ ಸೊಗಸಾದ ಮಾತಿನಲ್ಲಿ ಹುದುಗಿಸಿದ್ದಾನೆ. ವಸುದೇವ ಈಗ ಕಂಸನಿಗೆ ಹಂಗಿಗ ಕಂಸನ ಆಶ್ರಯದಲಿ ಬಂದಿದ್ದಾನೆ ಅವನು ಅದ್ದರಿಂದ ಇದಕ್ಕೆ ಅವನು " ಮನಮಲ್ಲದ ಮನದಿಂದೆ ಒಪ್ಪಿಗೆ ಕೊಟ್ಟ ಕವಿ. " ಸಂಪತ್ತಿದ್ದವರು ತಂಗಿಯರನ್ನು ನಾಲ್ಕು ದಿನ ಮನೆಯಲ್ಲಿರಿಸಿಕೊಳ್ಳುತ್ತಾರೆ, ಹಡೆಯುವುದಕ್ಕೆ ಕರೆಸಿಕೊಳ್ಳುತ್ತಾರೆ . ಅದರೆ ಕಂಸನ ಹಾಗೆ " ಎರ್ದೆ ಕರ್ತರಿ ನಾಲಗೆ ಬೆಲ್ಲಂ ಎನ್ನುವಂಥವರುಂಟೇ ? ಎಂದು ನುಡಿದಿದ್ದಾನೆ.

ಈ ಘಟ್ಟದಲ್ಲಿ ಕಂಸನ ವಿಷಯದಲ್ಲಿ ಕವಿಗೆ ತುಂಬ ಜುಗುಪ್ಸೆ ಬಂದಿರುವುದು ಎದ್ದು ತೋರುತ್ತದೆ. ಪಾತಕಿಗಳ ಪ್ರವೃತ್ತಿಯನ್ನುಕುರಿತು ತನ್ನ ಜುಗುಪ್ಸೆ ವಿಷಾದಗಳಾನ್ನು ದೀರ್ಘವಾಗಿ ಎತ್ತಿ ಆಡಿರುವುದು ದೇವಕಿಯ ಪಾಡಿಗೆ ಕವಿ ಸ್ವಂತಃ ನಿಟ್ಟುಸಿರುಬಿಟ್ಟಂತೆ ತೋರುತ್ತದೆ. " ಚಿತಿಸಿದಂ ಕಿಱುದಂಗೆಯ । ಸಂತತಿಯಂ ಕೊಂದು ಕೂಗಲಿರುಳಂ ಪಗಲುಂ ಎಂದು ಸ್ಪಷ್ಟ ಮಾಡಿ " ಅಯ್ಯೋ ಪಾಪ ! ಚಿಂತಿಸದೆ ಇರುತ್ತಾನೆಯೇ ? ಎಂದು ಕಟಕಿಯಾಡಿದ್ದಾನೆ. " ತನ್ನ ತಂದೆಯನ್ನೇ ನುಂಗಲು ನೋಡಿದವನು ತಂಡಿಯ ಮಕ್ಕಳನ್ನು ಕೊಲ್ಲುವುದಕ್ಕೆ ಉಂಗುರವಿಕ್ಕನೇ ಎಂದು ಹೇಳಿ " ಪಶುದಿಂಬಂಗಾಡಂ ತಿಂಗುದೆಂಬುದೇಂ ಪಾತಕವೇ ? ಎಂದು ಪ್ರಶ್ನಿಸಿದ್ದಾನೆ ಆತನ ಪ್ರವರ್ತನೆಯನ್ನು " ಕಳಾಹಿ ತನ್ನ ತಟ್ಟೆಯಂ ತಾನೆ ತಿನಲಿರ್ಪಂತೆ ಎಂದೂ " ಕೆಳಾರ್ದ ಮಹಾಕಾಳನೆನ್ನವರ್ ತನ್ನವರ್ ಎನ್ನದುಗಿದುಕೊಂಡು ಸರ್ವಗ್ರಸಂಗೋಳಲಿರ್ಪಂತೆ ಎಂದೂ ,ಮುಂತಾಗಿ ಬಣ್ಣಿಸಿದ್ದಾನೆ. ಕಂಸನ ಘನೋದ್ದೇಶವೆಂದರೆ ದೇವಕಿಯಲ್ಲಿ ಗರ್ಭಾಚಿಃಹ್ನೇ ಕಾಣಿಸಿಕೊಳ್ಳುವುದನ್ನು ನಿರೀಕ್ಷಿಸುವುದು ! ಅವನು ಮನಸ್ಸು "ಕಿಲುಂಬೇಱಿದ ಕಲುಷವೇಱಿರ್ದದು ಎಂದು ಕವಿ ಉಚಿತವಾಗಿಯೇ ಮಕ್ಕಳು ಹಡೆಯುತಾಂಗಲಿ ಎಂದು ಹಾರೈಸಿದಂತೆ! ಅದರೆ ನಿರೀಕ್ಷೆಗೆ ವಿರುದ್ಧವಾಗಿ ದೇವಕಿಗೆ ನಮಮಾಸ ನೆರೆದುದು ಕಂಸನಿಗೆ ತಿಳಿಯಿತು. " ಅವಸ್ತುಭೂತನುಂ ಭೀತನುಂ ಆದ ಕಂಸನು ದೇವಕಿಯನ್ನು ಬರಮಾಡಿಕೊಂಡ ; ಸೂತಿಕಾಗೃಹದಲ್ಲಿ

ಆಕೆಯನ್ನಿರಿಸಿ ತನಗೆ ಹಿತರೂ ಆಕೆಗೆ ಅಹಿತರೂ ಆದ ಕಂಸನು ದೇವಕೀಯನ್ನು ಬರಮಾಡಿಕೊಂಡ ; ಸೂತಿಕಾಗೃಹದಲ್ಲಿ ಆಕೆಯನ್ನಿರಿಸಿ ತನಗೆ ಹಿತರೂ ಆಕೆಗೆ ಅಹಿತರೂ ಅದ ಪರಿಚಾರಿಕೆಯರನ್ನು ನೇಮಿಸಿ, ಆಕೆ ಹಡೆಯುವುದನ್ನೇ ಹುಲಿಯಂತೆ ಕಾಡುಕೊಂಡಿದ್ದನಂತೆ. ಏನು ಸಡಗರ, ಏನು ಸಂಭ್ರಮ !

ಕಂಸನ ಪತ್ನಿ ಜೀವಂಜಸೆಯೇ ಹೆರಿಗೆಮಾಡಿಸುವ ಹೆಂಗಸು ಎಂದ ಮೇಲೆ ಇನ್ನು ಹೇಳಬೇಕಾದ್ದು ಏನಿದೆ? ಆದರೆ ದೈವ ನೈಗಮದೇವನ ರೂಪದಲ್ಲಿ ದೇವಕಿಯ ನೆರವಿಗೆ ಬಂದಿತು. ದೇವಕಿ ಹೆತ್ತ ಅವಳಿಮಕ್ಕಳನ್ನು ಆತ ಕ್ಷಣಾರ್ಧದಲ್ಲಿ ಮಲಯಾಚಲಕ್ಕೆ ಸಾಗಿಸಿ, ಮಾಯಾಶಿಶುಗಳನ್ನು ಸೂತಿಕಾಸದನದಲ್ಲಿರಿಸಿದ . ಕಂಸನು ಕಾಯುತ್ತಲೇ ಇದ್ದವಷ್ಟೇ. ಹುಟ್ಟಿದ ,ಮಕ್ಕಲು ಅತ್ತ ದನಿ ಕೇಳಿಸಿತೋ ಇಲ್ಲವೋ , ಇಲಿಯುಲಿಪುಗೇಳ್ದ ಬೆಕ್ಕಿನಂತೆ ಬೊಕ್ಕನೆ ಹಾರಿಹೊಗಿ ಆವನು ನಿಷ್ಕರುಣೆಯಿಂದ ಅಗಸ ಬಟ್ಟೆಯೊಗೆಯುವ ಹಾಗೆ ಒಗೆದುಹಾಕಿದ; ಹಸಿದ ಹುಲಿ ಜಿಂಕೆಯ ಮರಿಗಳನ್ನು ಕಂಡು ಕೊಲ್ಲುವ ಹಾಗೆ ಕೊಂದಿಕ್ಕಿದ.ಮಾಯದ ಶಿಶುಗಳು ಎನ್ನುವುದನ್ನು ಮಾತ್ರ ಅರಿಯದೆ ಹೋದ ! ಆದರೇನು ?ಮನೆಯ ಮರೆಯಲ್ಲಿ ಮಡಿದ ಪಾಪ ಹೊರಗೆ ಹಬ್ಬುವುದಕ್ಕೆ ಹೆಚ್ಚು ಹೊತ್ತು ಬೇಕಾಗಲಿಲ್ಲ ಅಡುಗೆಮನೆಯ ಹೊಗೆ ಹೊರಹೋಗದಿರುತ್ತಯೇ ? “ ಮುನಿಯ ಮಾತನ್ನು ತೊಡೆದುಬಿಟ್ಟೆ ಎಂದು ಕೈ ತೊಡೆದುಕೊಂಡ ಕಂಸನಿಗೆ ಕೊಲೆ ಹುಸಿಗೊಲೆಯೆಂಬುದು ತಿಳಿಯಲಿಲ್ಲ, ಅತಿಮುಕ್ತಕ ಯತಿಯ ಅದೇಶವೇ ಹುಸಿಯೆಂದು ಭ್ರಮೆ ಹುಟ್ಟಿತು. ಹಿಗ್ಗಿ ನಿಶ್ಚಿಂತೆಯಿಂದಿದ್ದನಂತೆ !

ಕಂಸನ ಹೆಂಡತಿ ಕಂಸನಿಗೇನು ಕಡಿಮೆಯೇ ? ಸುಳ್ಳು ಅಳುವನ್ನು ಹೇರಳವಾಗಿ ಅತ್ತಳು. ಹುಟ್ಟಿದ ಮಕ್ಕಳು ಸಾಯುತ್ತಿವೆ – ಎಂದು ದೇವಕಿಗೆ ಸುಳ್ಳು ಹೇಳತೊಡಗಿದಳು. ಸುತ್ತ ಮಕ್ಕಳು ನಿಜವಾದ ಮಕ್ಕಳೆಂದೇ ತಿಳಿದ ದೇವಕಿ ತುಂಬ ಸಂಕಟಪಟ್ಟಳು. ಆಕೆಯ ಹೊಟ್ಟೆಯ ಸಂಕಟಪಟ್ಟಳು. ಆಕೆಯ ಹೊಟ್ಟೆಯ ಸಂಕಟ ಏನೆಂಬುದು ಕವಿ ತುಂಬ ಮಾರ್ಮಿಕವಾಗಿ ಚಿತ್ರಿಸಿರುವದನ್ನು ಓದಿದಲ್ಲದೆ ನಮಗೆ ತಿಳಿಯವಂತಿಲ್ಲ :

ಅಸಕಱಿದಟಲಿಂ ಬಸಿಱೊಳ್
ಕುಸುಂಬೆವುರಿವುರಿಯೆ ಸುತ್ತಳತ್ತಳ್ ಬಸಿಱಂ
ಪೊಸೆದಳ್ ಜಿಗಿದಳ್ ನೀಡುಂ
ಬಿಸುಸುಯ್ದಳ್ಮಡಿದು ಕೆಡೆದು ಬಿದಿಯಂ ಬಯ್ದಳ್ ॥

ಎಂದು ಆರಂಭವಾಗಿ, ಮುಂದೆ ಬರುವ ಗದ್ಯದಲ್ಲಿ ಆ ನೋವು ಸಂಕಟದ ಹೊನಲೆಂಬಂತೆ ಹರಿದುಕೊಂಡು ಹೋಗಿದೆ. ತಾಯ್ತನದ ಅನುಭವಕ್ಕೆ ಸಹಜವಾದ ಮಾತುಗರಿಕೆ ಇಲ್ಲಿಯದು. " ಸತ್ತ ಕೂಸನಾದೊಡಮೆತ್ತಿಕೊಳ್ಳದೆಯಂ ಬಳಗಂ ಬಳಸಿ ಸುತ್ತಿಕೊಳ್ಳದೆಯುಂ ಮೇಲೆ ಪೊರಳ್ದಟಿದೆಯಂ ಕರೆಯದೆಯುಂ ಪೂಟಿಲ್ಕೊಮ್ಮುಡ್ಡಪೋಗದೆಯುಂ ಎಂತು ಬಾಟ್ವೆಂ. . . ಎಂದು ಆಕೆ ಗೋಳಾಡುವದಕ್ಕೆ ತೊಡಗಿದಳೆಂದು ಕವಿಯ ಬಣ್ಣನೆ, ಆದರೆ, ಅನಾಥರಿಗೆ ಎಹೈವಸಹಾಯವುಂಟು ಎನ್ನುವಂತೆ ಅತಿಮುಕ್ತಕ ಮುನಿ ಟಾನಿರುವಲ್ಲಿಗೆ ಬರಲು, ತನ್ನ ಕಷ್ಟವನ್ನು ಆಕೆ ತೋಡಿಕೊಳ್ಳುವುದೂ ಆತ ಪರಿಹಾರ ಸೂಚಿಸುವುದೂ ನಡೆಯಿತು. ಕವಿ, ದೇವಕಿ ತನ್ನ ದುಃಖವನ್ನು ಯತಿಯ ಎದುರು ಪರಿಪರಿಯಾಗಿ ತೋಡಿಕೊಂಡಳು ಎನ್ನುವದು ಹಲವು ದೃಷ್ಟಾಂತಗಳನ್ನು ಪಾರಿಸಿ ಮನಸ್ಸಿಗೆ ಮುಟ್ಟಿಸಿದ್ದಾನೆ. "ಕಾವರೆ ಮಣೆಗೊಳ್ವರ್ ತಾಯೆ ರಕ್ಕಸಿಯಾದಳ್ ಕರುಳೆ ಪಾವಾಗಿ ಕೊಱೆದು ತಿಂಡಪುದು. . . ಮುಂತಾಗಿ ನರ್ಗಳಗತಿಯಲ್ಲಿ ಸಗುವ ಈ ದೃಷ್ಟಾಂತಮಾಲೆ ಬರಿಯ ಮಾತಿನ ಮಂಟಪವಾಗಿಲ್ಲ, ಗದ್ಗದಿಕೆಯ ಬಿಕ್ಕುಗಳೇ ಎನ್ನುವಂತಿವೆ. ಅತಿಮುಕ್ತರು ನಿಜಸಂಗತಿಯನ್ನು ಆಕೆಗೆ ತಿಳಿಸಿದ್ದಲ್ಲದೆ, " ಇನ್ನುಮೊರ್ವನದಟಂ, ಚಾಣೂರದರ್ಪಾಪಹಂ, ಮುರಶೈಲಾಶನಿ, ಕಂಸಕೇಳಿಮಥನಂ, ಮಾದ್ಯಜ್ಜರಾ ಸಂಧಸಿಂಧುರಸಿಂಹಂ ನಿನಗಾದಪಂ ಮಗನ್; ಇದಕ್ಕೇಕಬ್ಬ ನಿಮ್ಮುಬ್ಬೆಗಂ ಎಂದು ಭವಿಷ್ಯವಾಡಿದರು. ಇಲ್ಲಿಯ ವಿಶೇಷಣಗಳನ್ನು ಗಮನಿಸಿದಾಗ, ಕವಿಗೆ ಕೃಷ್ಣನ ಪಾತ್ರವನ್ನು ಪ್ರವೇಶಮಾಡಿಸುವಲ್ಲಿ ತುಂಬ ಉತ್ಸುಕತೆಯಿರುವಂತೆ ತೋರುತ್ತದೆ.

ಅಂತೂ, ದೇವಕಿಗೆ ಯತಿವಚನದಿಂದ ದುಃಖಾಗ್ನಿಯ ಮೇಲೆ ದಯಾರಸವನ್ನು ವರ್ಷಿಸಿದಂತಾಗಿ, ಸ್ವಲ್ಪ ನೆಮ್ಮದಿಯಾಯಿತು. ಮತ್ತೆ ಕೆಲವುದಿವಸ ಹೋಯಿತು. ದೇವಕಿಗೆ, "ಕಂಸಗೆ ಮಿಟ್ಟುಮೂಡುವ ತೆಱದಿಂ ( ಹೋಲಿಸಿ : "ಬಕಂಗೆ ಮಿಟ್ಟು ಮೂಡುವ ತೆಱದಿಂ – ಪಂಪಭಾ.೩–೨೭) ಗರ್ಭಚಿಹ್ನೆಗಳು ಮೂಡಿದುವು. ಕಂಸನ ಪತನವನ್ನು ಸೂಚಿಸುವ ರೀತಿಯಲ್ಲಿ ಅವು ವೃದ್ಧಿಗೊಂಡುವೆಂದು ಕವಿ ವಿಸ್ತರವಾಗಿ, ಆದರೆ ಚಮತ್ಕಾರಕವಾಗಿ ವರ್ಣಿಸಿರುವದು, ಮುಂದಿನ ಕೆಲವು ಪಂದ್ಯಗಳಲ್ಲಿ ಕಂಡುಬಂದಿವೆ(೭–೩೮–೪೧). ಇವು ಸಂಪ್ರದಾಯದ ತಲೆಹೊರೆ. ೭–೩೭ನೆಯ ಒಂದು ಪದ್ಯವೇ ಅಗತ್ಯಕ್ಕೆ ಸಾಕಾಗಿದ್ದಿತ್ತು. ೭–೪೧ನೆಯ ವೃತ್ತವಂತೂ – ಮೇಳದ ಕುಬ್ಬ ಕಿರಾತರ ಕುತ್ತಿಗೆಗೆ ವಿನೋದದಿಂದ ದೇವಕಿ ಕಡಗಗಳನ್ನೆಸೆದುದನ್ನು ಇಲ್ಲಿ ಹೇಳಿದೆ – ಸನ್ನಿವೇಶದ ಗಾಂಭೀರ್ಯವನ್ನು ಕಲುಕುತ್ತದೆ ಎನ್ನಬೇಕು!

ಮಳೆಗಾಲ ಬಂದಿತು. ಕೃಷ್ಣ ಜನನದ  ಮುಹೂರ್ತವೂ ಜತೆಗೆ ಮಂದಿತು. ಇಲ್ಲಿಯೂ “ಕಂಸೋಷ್ಣನಂ ಕೃಷ್ಣನಂ ದೇವಕಿ ಪಡೆದಳೆನ್ನುವುದನ್ನು ಕವಿ “ಅಳಿಯಂ ಪದ್ಮಿನಿ, ವಾರ್ಧಿ ವೇಳೆ ವಿಷಯಂ, ಕಸ್ತೂರಿಯಂ ಪುಲ್ಲೆ, ಕಜ್ಜಳಮಂ ದೀಪಿಕೆ. . . ಪಡೆಯುವಂತೆ ಪಡೆದಳೆಂದು ಕೃಷ್ಣನ ಮೈಬಣ್ಣವೂ ಸ್ಫುರಿಸಿವಂತೆ ಧೃಷ್ಟಾಂತಮಾಲೆಯನ್ನು ನೆಯ್ದು ಹೇಳಿದ್ದಾನೆ. ಕರಣಪುರುಷನಾದ ಕೃಷ್ಣ ಕಂಸನಿಗೆ ಅರಿವಾಗದ ಹಾಗೆ ಮಳೆಯ ಹೊಯ್ಲಿನ ಮರೆಯಲ್ಲಿ ಜನಿಸಿದನೆಂದೂ ಕವಿ ಸೊಗಸಾಗಿ ನಿರೂಪಿಸಿದ್ದಾನೆ.

ಈ ಸೊಗಸು ಕೃಷ್ಣನನ್ನು ಕಂಸನ ದೌಷ್ಟ್ಯದಿಂದ ಪಾರುಮಾಡಲು ವಸುದೇವ ಬಲದೇವರು ನಡಸಿದ ಪ್ರಯತ್ನಗಳ ನಿರೂಪಣೆಯಲ್ಲಿ ಇನ್ನೂ ದಟ್ಟೈಸಿದೆ. ಸರಳವೂ ನಿರರ್ಗಳವೂ ಆದ ಇಲ್ಲಿಯ ನಿರೂಪಣೆ ನಾಟಕದ ದೃಶ್ಯದ ಹಾಗೆ ಕಣ್ಣೆದುರು ಸನ್ನಿವೇಶವನ್ನು ಕಟ್ಟಿ ನಿಲ್ಲಿಸುತ್ತದೆ. ಮಳೆಯ ಹೊಯ್ಲು ಕೃಷ್ಣಮಹಿಮೆಗೆ ಸ್ತಬ್ಧವಾಯಿತು; ಮೋಡಗಳು ಕುಡುಮಿಂಚಿನ ಕೈದೀವಿಗೆಗಳನ್ನು ಹಿಡಿದವು. ಇಂಥ ನಡುರಾತ್ರಿ ಕೃಷ್ಣನನ್ನು ಸಾಗಿಸಿಕೊಂಡು ಅವನ ರಕ್ಷಕರು ಹೊರಟರಂತೆ. ಕೃಷ್ಣನ ಶರೀರದ ತಮಾಲರುಚಿ, ಸುತ್ತಣ ಗಾಢಾಂಧಕಾರ, ನೀಲವಸನವನ್ನು ಮುಸುಕಿಕೊಂಡ ಬಲದೇವ ಎಲ್ಲವೂ ಕಪ್ಪುಮಯ. ‘ ತಮ್ಮೊಡವೆಗೆ ತಾವೇ ಕಳ್ಳರಾಗಿ ಕಳ್ಳಹೆಜ್ಜೆಯಲ್ಲಿ ಸಾಗಿ ಅವರು ಹೆಬ್ಬಾಗಿಲು ಸಮೀಪಿಸಿದರಂತೆ. ‘ಪುರುಷೋತ್ತಮನ ಪುಣ್ಯಪ್ರೇರಣೆ ಯಿಂದ ಮಳೆ ನಿಂ,ತಿತು ;  ಸ್ವರ್ಗೌಕಸರ ಸೈಪಿನಿಂದ ಅವನ ಉಂಗುಷ್ಠ ಸ್ಪರ್ಶದಿಂದ “ ಬಿಯ್ಯಗವಿಕ್ಕಿ ಚಿಕ್ಕುಟಂ ನುಸುಳಲ್ ಬಾರದಂತಾಗಿ ಬಿಗಿಯ ಕೆತ್ತಿದ ಕರ್ಬುನದ ಪಡಿಗಳುಂ ತೆರೆದು ಕೊಂಡವು ರಾತ್ರಿಸರದಿಯು ರಕ್ಷಕರು ‘ಮಾಟದ ಮಾನಸರಂತೆ ಮಿಳಮಿಳನೆ ಈ ಅದ್ಭುತವನ್ನು ನೋಡಿ ಪು,ಂಡರೀಕಾಕ್ಷನಿಗೆ ವಂದಿಸಿದರು.

ಮುಂದೆ“ ದೀಪಕಳಿಕಾಂಕುರಿತ ವಿಷಾಣನಪ್ಪ ವೃಷಭದ ಮಾರ್ಗದರ್ಶನದಲ್ಲಿ ಕಪ್ಪುತೊರೆ ಕಾಳಿಂದಿಯನ್ನು ಬಲದೇವ ವಸುದೇವರು ಮಗುವಿನೊಂದಿಗೆ ದಾಟಿ ಹೋದರು. ಅದನ್ನೂ ಕವಿ ಸೊಗಸಾಗಿ ಬಣ್ಣಿಸಿದ್ದಾನೆ. ಪ್ರವಾಹದಲಿದ ಆ ಯಮುನೆಯನ್ನು ಕಂಡು “ ಅಹೋ ವಿಘ್ನ ಪರಂಪರಾ ಎಂದು ಅವರು ಉದ್ವೇಗಗೊಂಡಿರಬ್ವೇಕಾದರೆ, ಆ ಬಸಾವಂ ಪಸಲೆಯಂ ಪುಗುವಂತೆ ಜಮನೆಯಂ ಪೊಕ್ಕು ಅದರ ಹಿಂದೆಯೇ ಅವರು ತೆರೆಳಿ “ನೀಲದ ಪೊಸ ನೆಲಗಟ್ಟಿನ ಮೇಲೆ ನಡೆಯುವಂತೆ ಸುಲಭವಾಗಿ ನಡೆಃಡುಹೋದರು. ಪ್ರವಾಹವೂ ಇಬ್ಬಗವಾಗಿ ಅವರಿಗೆ ದಾರಿಬಿಟ್ಟಿತು.

ವೃಷವ ಒಂದು ದೇವಾಯತನದ ಹತ್ತಿರ ಅವರನು ಬಿಟ್ಟು ಅದೃಷ್ಯವಾಯಿತು . ಅದು ಅವರ ಪುಣ್ಯದೇವಾಯತನದಂತೆ ಕಂಡಿತೆಂತೆ. ಜೈನ ನೇಮಿನಾಥಪುರಾಣಗಳಾಲ್ಲಿ ಈ “ ಪುಣ್ಯದೇವತೆಗಳ ಮಾತು

ಈ ಬಗೆಯ ಸಂದರ್ಭಗಳಲ್ಲಿ ಆಗಾಗ ಕಂಡುಬಂದಿದೆ. (ನೋಡಿ ಕರ್ಣಪಾರ್ಯನ ನೇ,ಮಿನಾಥ ಪುರಾಣ : " ತತ್ಪಣ್ಯದೇವತಾಪ್ರಭಾವದಿಂ " ೬-೨೦ ಮತ್ತಮಾ ಪುಣ್ಯದೇವತಾಪ್ರೇಟಣೆಯಿಂ ೬-೭೧ ವ. ೩ )

ಈ ಮುಂದೆ ಗೋಕುಲದ ನಂದ ಮತ್ತ್ಟು ವಸುದೇವ ಇವರ ನದುವೆ ಅಪ್ರತ್ಯಕ್ಷವಾಗಿ ಪರಸ್ಪರರ ಶಿಶುಗಳ ಹಸ್ತಾಂತರವಾದ ಸುಂದರವಾದ ಸಾನ್ನಿವೇಶದ ನಿರೂಪಣೆ ಬಂದಿದೆ. ಇಲ್ಲಿ ಕಂಡು ಬರುವ ಮಾತುಗಾಗಿಕೆ ಹಾಗೂ ಸನ್ನಿವೇಶಕಲ್ಪನೆ ಗ್ರಾಮೀಣ ವಾತಾವರಣಕ್ಕೆ ಅನುಸಾರಮದ್ದು; ಸಂಮಗ್ರವಾಗಿ ದೇಸಿ ಎಂದು ಹೇಳಾವಹುದಾದ್ದು ಹರಸಿಕೊ,ಂಡದ್ದು ಗಂಡುಕೂಸನ್ನು ಕೊಡವುದಾಗಲಿ ಎಂದು . ಹುಟ್ಟಿದ್ದು ಹೆಣ್ಣು ಎಂದು ದೇವತೆಯ ಮೇಲೆ ಆಕ್ರೋಃಶಪಟ್ಟು ಹುಟ್ಟಿದ ಮಗುವುನ್ನು ಹಿಂದಿರುಗಿಸಲು ಬಂದ ಗೊಲ್ಲ ನಂದನಿಗೆ, ದೇವತೆಯನುದ್ದೇಶಿಸಿ ಅವನಾಡಿದ ರೋಷಾವೇಶದ , ಮುಗ್ಧಪ್ರಕೃತಿಗೆ ಸಹಜವಾದ ಮತುಗಳನ್ನು ಕೇಳಿದ ಮೇಲೆ ದೇವತೆಯೇ ಹೆಣ್ಣು ಮಗುವನ್ನು ಹಿಂದಕ್ಕೆ ಪಡೆದು ಗಂಡನ್ನು ಅನುಗ್ರಹಿಸಿದಳು ಎಂದು ತೋರುವಂತೆ ಬಲದೇವ-ವಸುದೇವರು ಮಾಡಿದ ಚಮತ್ಕಾರ ಬಹುಸ್ವಾರಸ್ಯವಾದ್ದು ಈ ಭಾಗವನ್ನಿಲ್ಲಿ ಅದರ ಸೊಗಸಿಗಾಗಿ ಉದ್ಧರಿಸಬಹುದು :

..ಮುಂದೊಂದು ದೇವಾಯತನಮಿರ್ದುದನವರ್ ಪೊಕ್ಕು ಪೊಱಗಂ ನೋೞ್ಪಾಗಳಲ್ಲಿಗೆ ಮತ್ತೊಂರ್ವ ದೀವಿಗೆವೆರಸು ತೆರ್ೞಸಿಬರ್ಪುದು ಕಂಡು ತಮ್ಮ ಪಜ್ಜೆವಿಡಿದು ಬೆನ್ನಟ್ಟಿಬಂದ ಕಂಸನೆಂದೇ ಬಗೆದು ಭಯಂಗೊಂಡು ಮೆಯ್ಗರೆದಿರ್ಪಿನಮತನಾ ತುಱುವಟ್ಟಿಗೆಱ್ಯನಪ್ಪ ನಂದನಾದವನುಂ ತಮ್ಮ ತೆಱದಿನಾಗಳೆ ಪುಟ್ಟಿದೊಂದು ಪೆಣ್ಗೂಸಂ ಪಿಡಿದು ಬಂದು ದೇವತೆಗಿಂತೆಂದಂ

ಕಿತಕಂ ದೇವತೆಗೇಕೆ ಪೇೞ್ ಪರಸಿ ಗಂಡಂ ಬೇಡಿಕೊಂಡೆನ್ನ ಪೆಂ

ಡತಿಗೆತ್ತಿ ಪುೞ್ತೊಂದು -ಪೆಣ್ಣನಿದನೊಲ್ಲಳ್ನೀನೆ ಕೊಳ್ಳದ ದಾ

ವತಿಯಕ್ಕುಂ ತುಱುಗಾಱರೇಂ ಪಡಸಿ ಕೊಂಡು,ಂಡಪ್ಪರೇ ಒಳ್ಳಿತೊ

ಳ್ಳಿತು ಪೆಣ್ಗೂಸಿದು ಕಾಯಲೋ ಕೞ್ಯಲೋ ಬೆನ್ನಟ್ಟಲೋ ಕಟ್ಟಲೋ ॥

ನಚ್ಚಿನೆಮ್ಮ ಕೋಣನನೀದಂತಾದುದು ನೀನು,ಂ ಪೆಣ್ಣಪು ಶಿದಱಂಪೆಣ್ಣನೀವೆಯಲ್ಲಎದೆ ಗಂಡಂ ಕರ್ದು ತಪ್ಪಾ ನಿನ್ನ ಪೆಣ್ಣಂ ನೀನೆ ಕೊಳ್ಳೆನ್ನ ಪೆಂಡತಿ ನೋಂತು ಪಸಿದುಂ ಪಾಲಿಂಬಟ್ಟುಂ ಕೊಟ್ಟ ಪರಕೆಯಂ ಮಗುೞ್ ಕಂಡು ಕುಡದಂಘು ನಿನ್ನನೀ ಮನಿಯೊಳಾಗೆ ದಿಟದ ದೇವತೆಯಂತೆ ಮಲಗಿ ಮಲ್ಲಂತಿಗಿಱದು ಕುಳ್ಳಿರಲ್ಲಿಯೇಂ ವಿಷ್ಣುಗುಪ್ತಂ ಲಿಂಗದ ನೆತ್ತಿಯೊಳಿಕ್ಕಿಂದಂತೆ ಪಿರಿಯ ಕರಿಯ ಕಲ್ಲನೆತ್ತಿ ತಂದು ನಿನ್ನ ನೆತ್ತಿಯೊಳಿಕ್ಕಿ ತ್ಪುಕರ್ತಿಯರನಾಳಿಗೊಂಡು ನುಣ್ಣಘೆ ನುಂಗಿದುದೆಲ್ಲಮಂ ಮುಗಿಂ ಬಾಯಿಂ ಕಾೞ್ಸುವೆನ್

ಎಂದು ಮೀಸೆಯಂ ಕಡಿದು ಕೂಸನೀಡಾಡಿ ನಂದಂ ಮಗುೞ್ದು ಪೋಪುದುಮವರ್ಕಂಡಱಿಸುವ ಬೞಿ ಕಲೊಡರ್ದುದೆಂದು ದೇವತೆಯ ಮುಂದೆ ಮಗನನಿರಿಸಿ ಮಗಳಾಂ ಕರೆದುಕೊಂಡು ವಸುದೇವಂ ಕಾರ್ಯವಶಕ್ಕೆ ಕತ್ತೆಯ ಕಲ್ಪಿಡಿದನೆಂಬಂತೆ ಕಾಲ್ಪಿಡಿದೆಂ ಕನಲ್ದು ಪೋಗದೆ ಬಾ ಗಂಡುಗೂಸಂ ಕೊಟ್ಟಪೆನೆಂದು ಕರೆಯೆ ತನಗಂಜಿ ದೇವತೆ ಕರೆದಳೆ ಗೆತ್ತು ಮತ್ತೆ ಬಂದು ನಂದನಾನಂದಂದಿಂ ಕಂಡಳೆಗೆ ಮಾಣಿಕಮಂ ಕೊಳ್ವಂತೆ ಕಳೆದುಕೊಂಡು ನಲಿದಂ ನಂದಂ ಇಂತಾದೊಡೆ  ನೀನೆ ದೇವತೆಯೆಂದು ಪೊಡೆವಟ್ಟು ಪೋಗಿ ಯಶೋದೆಗೆ ಕೊಟ್ಟನಿತ್ತಾಲಾ ಬಾಲಕಿಯಂ ದೇವಕಿಯ ಮುಂದೆ ತಂದಿಕ್ಕಿ ತಮ್ಮಿರ್ವರುಂ ತಾಮಱಿಯದಂತಿರೆ...... ( ೭-೪೯ ವ-೫೧ ವ.)

ನಾಟಕಕ್ಕೆ ಸೊಗಸಾದ ದೃಶ್ಯವಿದ್ದು್ಡ ಇಲ್ಲಿ ಸಹಜದೇಶ್ಯ , ಪಾತ್ರೋಚಿತವಾದ ಮಾತುಗಾರಿಕೆ, ಸಂವಾದಗುಣ ನಾಣ್ನುಡಿಗಳು, ನುಡಿಗೆಟ್ಟುಗಳು ಇವೆಲ್ಲ ಒಂದಕ್ಕಿಂತ ಒಂದು  ಚೆಲುವಾದುದು.

ಹುಟ್ಟಿದ್ದು ಹೆಣ್ಣೂ ಎಂದು ತಿಳಿದ ಮೆಲೆ ಕಂಸ ಗಂಡಾದರೆ ಅವನು ತನಗೆ ಮಾರಿ ಯಾಗುತ್ತಾನೆ, ಅದರಿದೇನಾದೀತು ಎಂದುಕೊಂಡು ಆ ಹೆಣ್ನು ಮಗುವಿಗೆ ಮೂಗನ್ನೋತ್ತಿ ಸುಮ್ಮನಾದನು. ಅ ಮಗುವಾದರೂ ಮುಂದೆ ಬೆಳೆದ ಮೇಲೆ ಜನರ ನೋಟಕ್ಕೆ ನಾಚಿಕೊಂಡು ವಿಂಧ್ಯಪರ್ವತಕ್ಕೆ ಹೊರಟು ಹೋಗಿ, ಅಲ್ಲಿ ವಿಂಧ್ಯಮಾನಸೆಯೆಂಬ ದೇವತೆಯದಳು.

ನಂದಗೋಕುಲದಲ್ಲಿ  ಶ್ರೀಕೃಷ್ಣನ ಬಳವಿ ಮತ್ತು ಬಾಲಲೀಲೆಗಳ ರಂಮ್ಯಕಥನವೇ ಮುಂದಿನ ಘಟ್ಟಮಗುವನ್ನು ಯಶೋದೆ ಸ್ವಿಕಾರ ಮಾಡಿದ್ದು , ಗೋಪಿಯರು ಆಕೆಗೆ ಜಾತಾಶೌಚ ಸ್ನನಮಾಡಿಸಿದ್ದು್ಡ, ಆಕೆ ಮಗುವಿಗೆ ಪೀತಂಬರವುಡಿಸಿದ್ದು, ಮುಂಗೈಯಲ್ಲಿ ಕವಡೆಗಳಾನ್ನು ಕಟ್ಟಿದ್ದು ಇತ್ಯಾದಿ ವಿವರಗಳು ಸಹ ಗ್ರಮೀಣವಾತಾವರಣಕ್ಕೆ ಸಹಜ ವಾಡಿರುವಂತೆ ಗುದ್ದಿ ಗುದ್ದಿ  ಕೊಲ್ಲುವ್ನೇನೋ ಎನ್ನುವಂತೆ ಮಗು ಕೃಷ್ಣನ ಬೆರಳು ಮಡಿಚಿದ  ಮುಷ್ಟಿಗೆ ಆಗಾಗ ಬಡಿಯುವ ಕಾಲಿಗಳು ಸೊಗಸುತ್ತಿದ್ದುವಂತೆ . ಅರಳಿಗಿಳಿಯನ್ನು ಮಾಣಿಕ್ಯದ ಪಂಜರದಲ್ಲಿಟ್ಟ ಹಾಗೆ ಮರಕತವರ್ಣನಾದ ಕೃಷ್ಣನನ್ನು ಮಣಿದೊಟ್ಟಿಲಲ್ಲಿಟ್ಟು ಯಶೋದೆ ತೂಗಿ ಜೋಗುಳ ಹಾಡುತ್ತಿದ್ದಳಂತೆ  ಆ ಜೋಗುಳವಾಡು :

ಜೋ ನಳಿನಾಕ್ಷ ಜೊ ಭುವನವಲ್ಲಭ ಜೋ ನಯನಭಿರಾಮ ಜೋ

ಜಾನಕಿಯಾಣ್ಮ ಜೋ ಜನಮನೋಹರ ಜೋ ಜಗದಿಶಕೃಷ್ಣ ಜೋ

ಜೋ ನರಸಿಂಹ ಬೇಡಟಿದಿರಾ ಮೊಲೆಯಂ ಪಿಡಿ ಹೋಯಿಯೊಂದು ಚಂ

ದ್ರಾನನೆ ತೊಟ್ಟಿಲಂ ತೊನೆದು ತೂಗುತುಮಾಡಿ ಯಶೋದೆ ಪಾಡಿದಳ್ ॥ (೭-೫೯)

ಕೃಷ್ಣ ಗೋಪಿಯರ ತೋಳಲ್ಲಿಯೂ ತೊಟ್ಟಿಲಲ್ಲಿಯೂ ಮನ್ಮಥನ ಹಾಗೆ ಬೆಳೆದನು. ಕೃಷ್ಣ ಕಪ್ಪಥಿದ್ದ ಎಂದು ಹೇಳಲು ಕವಿ ಹಿಂಜರಿಯುವುದಿಲ್ಲ " ಕರಿಯ ನೆಯ್ದಿಲ ಬಣ್ಣಂಬೋಯ್ದಂತೆ ಕರಿಯ ರೂಪಿಸೊಳೆಸೆದಂ ಎಂದಿದ್ದಾನೆ. ಶೈಶವದಲ್ಲಿ ಯುವತಿಯರನ್ನೂ ಕೃಷ್ಣ ಒಲಿಸಿದನು. ಈ ಘಟ್ಟದಲ್ಲಿ ಇತ್ತ ಮಧುರೆಯಲಿ ಕಂಸನ ಅರಮನೆಯಲ್ಲಿ ದುದ್ಯಕುನಗಳದವು. " ಪಗಲುಳ್ಕಂ ಬಿರ್ದುದು, ಊರ್ವಿರುಹಂ ಇಳಱಿದುವು .. ..ಎಂದು ಮುಂತಗಿಯೂ ಉಡಿ ದತ್ತುಗ್ರಾಸಿ, ಬೆಂದತ್ತರಮಃನೆ.. .. ಎಂದು ಮುತಾಗಿಯೂ ಸಾಲಿಟ್ಟು ಬರುವ ಈ ಅಪಶಕುನಗಳು ಸಾಲವೆಂಬಂತೆ , ಜೀವಂಜಸೆಗೆ ಹಾಗೂ ಕಂಸನಿಗೆ ಹೋಲ್ಲಗನಸುಗಳು ಬಿದ್ದುವು . ಆ ಕನಸುಗಳಾದರೋ ಹೇಳಬಾರದವು, ಹೇಳಾದೆ ಸುಮ್ಮನಿರಲೂ ಸಾಧ್ಯವಿಲ್ಲದವು, ಏನು ಎತ್ತ ಎಂದು ಕೇಳಿದವರು ಯಾರೂ ಬದುಲುವಂತಿಲ್ಲ ಮರದ ಬಿಳಲು ಬೆಳೆಯುವಂತೆ ಬೆಳೆಯುವಂಥವು ಇನ್ನು ಹೇಗೆ ತಾನೆ ಕಂಸ ಸುಮ್ಮನಿದ್ದಾನು? ವರುಣನೆಂಬ ನೈಮಿತ್ತಿಕನನು ಕರೆಸಿಕೊಂಡು ಪ್ರಶ್ನಿಸಿದ ಆತನು " ಕಿವಿಗೆ ಮಾತಿಕ್ಕದ ಮುನ್ನಮೆ ಕಣ್ಬನಿಯನಿಕ್ಕಿ ದೇವಕಿಯಮಗನೊಬ್ಬ ಬೇರೆಯ ಕಡೆ ಬೆಳೆಯುತ್ತಿದ್ದನೆ ಎಂದು ತಿಳಿಸಿದ ಕಂಸನಿಗೆ ಬಗೆಯಲ್ಲಿ ಹಗೆಯಿಕ್ಕಿದಂತಾಯಿತು. " ಅರ್ಜುನನ ಬಾಣ, ವಿಧಿಲಿಖಿತ , ತಪೋಧನರ ವಾಕ್ಯ ಎಲ್ಲಿಯದರೂ ತಪ್ಪುವುದುಂಟೆ ? ಎಂದು ಕೊಂಡ ಅಲ್ಲದೆ ಆತ ತನಲ್ಲಿಯೇ ಸರಳವಾಗಿ ಹೇಳಿಕೊಂಡ :

ಅವೋಂಗಮಾದೊಡಂ ಮ

ತ್ತಾವುದುಮಂ ಕಟಿವುಪಾಯಮುಂಟೀ ಜಗದೊಳ್

ದೇವಂಗಂ ದೈತ್ಯಂಗಂ

ಸಾವಂ ತಪ್ಪಿಸುವುಪಾಯಮಾವುದುಮುಂಟೇ ॥

ಈಮಾತು ಎಂಥ ಕಟುಸತ್ಯ ಎಂದು ಯಾರಿಗಾದರೂ ಹೊಳೆಯದಿರುವುದು ಸಾಧ್ಯವಿಲ್ಲ. ಪಾಪವೂ ಪೈಶೂನ್ಯವೂ ತನ್ನನ್ನು ಬೆನ್ನಟ್ಟುತ್ತಿರುವುದಕ್ಕೆ ಬೇಸತ್ತು ಮಲಗಿದ ಆತನಿಗೆ " ಪೂರ್ವಭವದೆಣ್ಬರ್ ದೇವತೆಯರ್ ಕಾಣಿಸಿಕೊಂಡು ಯಾರನ್ನು ತಿನ್ನಲಿ ಯಾರನ್ನು ಕೊಲಲ್ಲಿ ಎಂದು ಅಪ್ಪಣೆ ಬೇಡಿದರು. ಇತರ ನೇಮಿಚರಿತ್ರಗಳಿಲ್ಲಿ ಓ ದೇವತೆಯರ ಪ್ರಸಕ್ತಿ ಕಂಸನ ಪೂರ್ವಭವವೃತ್ತಕದೊಂದಿಗೆ ಹೊಂದಿಕೊಂಡು ಎಂದ. ಮಹಾಭಾರತದಲ್ಲಿ ಯುದ್ಧದ ಕೊನೆಯ ದಿವಸಗಳಲ್ಲಿ ದುರ್ಯೋಧನನು ಅಸಹಾಯಕನಾಗಿ ಹಿಂಸೆಪಟ್ಟುದನ್ನೂ ಆಶ್ವತ್ಥಾಮನಿಗೆ ಪಾ,ಂಡವರ ತೆಲೆಗಳನ್ನು ಕೊಂದು ತರುವಂತೆ ಹೇಳಿದುದನ್ನೂ ಇಲ್ಲಿ ನೆನೆಯಬಹುದು.

ಹೀಗೆ ಕಂಸನಿಂದ  ಅಜ್ಞಪ್ತರಾದ ದೇವತೆಯರು ತಮ್ಮ ಕಾರ್ಯಾಚರಣೆಗೆ ಇಳಿದರು. ರಾಕ್ಷಸಪ್ರಕೃತಿಯ ಮೊದಲ ದೇವತೆ ಪೂತನಿ ಕೃಷ್ಣ ನಂದಗೋಕುಲದಲ್ಲಿ ರುವುದನ್ನು ವಿಭಂಗಜ್ಞಾನದಿಂದ ತಿಳಿದುಕೊಂಡು , ಬಾಲಕೃಷ್ಣನನ್ನು ಕೊಲ್ಲಲೆಂದು ಗೋಲಿಯ ವೇಷದಲಿ ಬಂದಳು. ಆಕೆಯು ರೂಪಾಂತರಗೊಂಡ ಚಿತ್ರವಿದು :

ಚಿಪೆಱ್ ನೊಸಲಾಗೆ ನಕ್ಕನೊಸಲೊಳ್ನಿಕೆಯಪ್ಪೊದಲಗೆ ನಿಟ್ಟೊಡ

ಲ್ನಿಱ್ದಲೆಯಾಗೆಯೊಪು ಶಿದಲೆಯೊಪ್ಪುವ ತೋಳ್ ತನಗಾಗೆ ಪೊಲ್ಲದೋಳ್

ತುಱುಗೆವೆಗಣ್ಗಳಾಗೆ ಬಿಡುಗಣ್ಗಳೆ ತೆಳ್ವಸಿಱಾಗೆ ಪಾಟ್ವ್ಸಱ್

ಸಱ್ಮೊಲೆಯಗೆ ಬಿರ್ದ ಮೊಲೆ ಪೂತನಿ ಗೋಪಿವೊಲಾಗೆ ಬೇಗದಿಂ ॥

ಬಂದು “ ನೀರುನಿಟ್ಪಿ ಎತ್ತುವರಿಲ್ಲದೆ ಮಾಯದ ಮಗಳಾಂ ತಳ್ವಿದೆನೆನ್ನ ಹೋರಿ ಹಸಿದನೆ ಬಾ ಬಾ ಎಂದು ಅನಾಥಶಿಶುವನ್ನೇತ್ತಿಕೊಳ್ಳುವಂತೆ ಆ ಮಗುವನ್ನೆತ್ತಿಕೊಂಡವಳಂತೆ ಅದರೆ ಮಹಿಮಾನ್ವಿತಮೂರ್ತಿ ಕೃಷ್ಣನು, ‘ ನಂಜಿನನಂತಪ್ಪ ನೀಳಾಂಜನವರ್ಣನು,ಆಕೆಯನ್ನು  ಕರಡಿಯ ಮರುಯ ಹಾಗೆ ಕಾಡಿ ಜಿಗುನೆ ಕನ್ನೆತ್ತರನ್ನು ಹೀರುವಂತೆ ಆಕೆಯ ಸ್ತನ್ಯವನ್ನು ಹೀರಿ ಕೊಂದಿಕ್ಕಿದನು.

ಚಾಂಡಾಳ ಪ್ರಕೃತಿಯ ಇನ್ನೊಂದು ದೇವತೆ ಕಾಗೆಯ ಆಕಾರ ತಳೇದು ಏಕಾಕಿಯಗಿದ್ದ ಕೃಷ್ಣನನ್ನು ಅವನು ತೊಟ್ಟಿಲಲ್ಲಿ ಮಕಗಿರುವಾಗಲೇ ಕಣ್ಣು ಕುಕ್ಕಿ  ಕೊಲ್ಲುವುದಾಗಿ ಸಂಚುಹಾಕಿ ಬಂದಳು. ಆದರೆ ಕಾಗೆಯ ಕೊಕ್ಕು ಮುರಿದು ಗಿಡುಗನಂತೆ ಬಡಿದು ಕೃಷ್ಣ ಆ ಪ್ರಯತ್ನವನ್ನು ವಿಫವಗೊಳಿಸಿದ. ಈ ಸಂದರ್ಭದಲ್ಲಿ “ ಅಡರ್ದು ಕಮಂಡಲುಜಳಮಂ ತುಡುಂಕೆ ಕಂಡೊಳ ಗಣೆಸಡಿ ಕಾಗೆಯ ಮೂಗಂ ಪಿಡಿದಿಱಂ,ಕಿ ಮುಱಿದವೊಲ್ ಎಂಬುದಾಗಿ ಕೊಟ್ಟಿರುವ ದೃಷ್ಟಾಂತ ಪಂಚತಂತ್ರದಂತಹ ಜಾನಪದ ಜಾನಪದ ಮೂಲದ್ದಾಗಿರುವಂತೆ ತೋರುವುದು.

ಮೂರನೆಯ ಪ್ರಯತ್ನ ಕೃಷ್ಣ ಸ್ವಲ್ಪ ಬೆಳೆದು ಅಂಬೆಗಾಲಿಡುವಾಗ ನಡೆಯಿತು. ಮಗುವಿನ ಮುಂದಲೆಯ ನಿಡುಜಡೆ ನೆಲ ಸೋಕುತ್ತಿತ್ತು, ಮೈಬಣ್ಣ ನುಣ್ಗಪ್ಪಿನಿಂದ ವಿರುಗುತ್ತಿತ್ತು; ಆಗ ತಾನೆ ಹಲ್ಲುಗಳೂ ಬರುತಿತ್ತು. ಈ ಘಟ್ಟದಲ್ಲಿ ಇಂದು ದೇವತೆ ಲೋಯಿಸರದ ಮೇಲೆ ಬಂಡಿ ಪರಿದಂತು ಮಾಟ್ಪೆನ್ ಎಂದು ಗಾಡಿಯ ಆಕಾರ ಧರಿಸಿ ಅಂಬೇಗಾಲ ಕೃಷ್ಣನ ಮೇಲೆ ನುಗ್ಗಿತು. ಹರಿಯುವ  ಬಂಡಿಗೆ ಕಾಲು ತೊಡರುಕೊಡುವ ಗೊಲ್ಲನೆನ್ನಿಸಿ ಕೃಷ್ಣನು ಆ ಗಾಡಿಯನ್ನು ಗಾಲಿ ನೋಗ ಅಚ್ಚು ಈಸು ಎಲ್ಲಾ ಅಸ್ತವ್ಯಸ್ತವಾಗುವಂತೆ ಬಲವಾಗಿ ಒದ್ದುಬಿಟ್ಟನು.

ಮುಂದಿನ ಸರದಿ ದುಷ್ಟಾಶ್ವದ ರೂಪಿನಲ್ಲಿ ಕೃಷ್ಣನನ್ನು ಘಾತಿಸಲು ಬಂದ ದೇವತೆಯದು. ಆ ವಿಗಡಾಶ್ವವು ಬಾಲಕನ ಕೈಯನ್ನು ಕಚ್ಚಲೆಂದು ಬಂದಿತಾದರೂ ಕೃಷ್ಣನು ಅದರ ನೆತ್ತಿಯೊಡಯುವಂತೆ ಕೈಯಿಂದ ಕುತ್ತಿದನು. ಅದು ಸತ್ತಿತ್ತು ಕೃಷ್ಣ ಕುದುರೆಯ ನೆತ್ತಿಗೆ ಕುತ್ತಿದಾಗ ಗೂಟದ ಬಾಯಲಿ ಗೂಟವನ್ನು ನಟ್ಟಂತೆ ಇತ್ತಂತೆ ; ಅಲ್ಲದೆ ಆಗ ಕ್ರೋಧ " ಕೊಂಡದ ಕಿಚ್ಚಿನಂತೆ ಇತ್ತೆಂತೆ ಇಲ್ಲಿಯ ಜಾನಪದೀಯ ಅಂಶಗಳಾನ್ನು ನಾವು ಗಮನಿಸಬೇಕು.

ಕೃಷ್ಣನ ಬಾಲಲೀಲೆಯ ಚಿತ್ರಗಳಾನ್ನು ಕವಿ ಮುಂದಿನ ಕೆಲವು ಕಂದಪದ್ಯಗಳಲ್ಲಿ ಕೊಟ್ಟಿದ್ದಾನೆ. ಇದು ದೇವತೆಯರ ಕಾರ್ಯಾಚರನೆಯ ಬಳಿಕ ಥಟ್ಟನೆ ಬರುತ್ತದೆ ಎನ್ನುವುದನ್ನು ಗಮನಿಸಿಸಬೇಕು. ತುರುಹಟ್ಟಿಯ ಹಾಳು ಮೊಸರು ಬೆಣ್ಣೆಗಆಳನನ್ನು ಸೂರೆಮಾಡಿ ಜೊತೆಯ ಜೊತೆಯ ಗೊಲ್ಲರೊಗೆ " ದಕ್ಷಿಣೆಗುಡುವಂತೆ ಕೊಟ್ಟು ಪೂರೆಯುತ್ತ ಇದ್ದ ಕೃಷ್ಣನನ್ನು ಅಂಕೆಗೆ ತರುವಂತೆ ಉದ್ಧರಿಸಬಹುದು :

ಸಲೆ ಕಾಯ್ದ ಪಾಲ್ ಬರ್ದುಂಕದು

ನೆಲಹಿನ ಪಾಲುಂ ಬರ್ದುಂಕದಲೆ ಕಱೆವೀ ಕಂ

ದಲ ಪಾಲಂ ಮುಂ ಬರ್ದುಕದು ಮೊಲೆಯೂಡ ಯಾಶೋದೆ ಕರ್ ಕರೆದು ನಿನ್ನ ಮಗನಂ ॥

"ಅರ್ಗೆ ಪುಟ್ಟಿಯರ್ಗೆ ಮುದ್ದಾದನ್ ಎಂದು ಗೋಪಿಯರು ರಕ್ಕಸಗಾಣಕ್ಕೆ ಕೃಷ್ಣನನ್ನು ಕಟ್ಟುತ್ತಿದ್ದರು; ಯಶೋದೆ ಮೊಸರು ಕಡೆಯುವ ಕಂಭಾಕ್ಕೆ ಕಟ್ಟುತ್ತಿದ್ದಳು. ಹೀಗೆ ಒಮ್ಮೆ ಮಾಡಿದಾಗ ಕಟ್ಟಿದ ಒರಳು ಸೊಂಟಕ್ಕಿಳಿದು ರತ್ನದ ಉಡಿದಾರವೆನ್ನುವಂತಾಯಿತು .ಆನೆಯ ನೆತ್ತುವಂಗಾಡು ಚಿಕ್ಕಾಡು ಎನ್ನುವಂತೆ " ಗೊವರ್ಧನಾಚಕವನೆತ್ತಿದವನಿಗೆ ಒರಳುಕಲ್ಲು ಯಾವ ಲೆಕ್ಕ? ಎಂಬುದು ಕವಿಯ ಪ್ರಶಂಸೆ. ಆದರೆ ಗೋವರ್ಧನೋದ್ಧರಣದ ರಣದ ಪ್ರಸಂಗ ಮುಂದೆ ಘಟಿಸಲಿರುವ ಪ್ರಸಂಗವಾದ್ದರಿಂದ ಇಲ್ಲಿ ಆ ಪ್ರಸಕ್ತಿ ಬಂದುದು ಸ್ಥಾನೋಚಿತವಾಗಲಿಲ್ಲ ಎನ್ನಬಹುದು.

ಮರುಳ್ದೆವತೆಗಳು ಸ್ವಲ್ಪಕಾಲಕ್ಕೆ ಮತ್ತಿಯ ಮರಗಳಾಗಿ ಕೃಷ್ಣನನ್ನು ಕಾಡಲು ಬಂದರು. ಆ ಮರಗಳು ಕೃಷ್ಣನನ್ನು ನಡುವೆ ಇರುಕಿಸಲು ನೋಡಿದಾಗ ಕಂಸನ ಎರಡು ತೋಳುಗಳನ್ನೂ ಕಿತ್ತೆಸೆಯುವುದನ್ನು ಅಭಿನಯಿಸುವಂತೆ ಕೃಷ್ಣ ಅವನ್ನು ಕಿತ್ತೆಸೆದನು. ಬಾಲಲೀಲೆಯ ಈ ಚಿತ್ರಣವೂ ಸೊಗಸಾದ್ದು.

ಅಡೆವಂ ಗೋಣ್ಮುಱಿಗೊಂಡು ಬೋಟಿದಲೆಯಂ ಮುಂಗೆಯ್ಗಳಿಂ ಮೂರಿಗೊಂ

ಡಿ ಡುವಂ ಕೂಂಕಿ ಕೊಡೆಂಕೆಯ ಮುಱಿವನುಗ್ಗತ್ತಳ್ಳೆಯಂ ಗಲ್ಲಮಂ

ಮಿಡಿವಂ ಮಿಡಿವಂ ಮೀಸೆಯಂ ಸೆಳೆದು ಮೂಗಿಟ್ಟೇಱುವಂ ಮಕ್ಕಳ

ಟ್ಟೊಡೆ ಬಾಯ್ದಯನೆ ಪೊಯ್ವನೇಂ ಸಿತಗನೋ ಕಾಳಾಹಿಕೋಳಾಹಳಾಂ ॥ (೭–೮೪)

ಇದು ಇನ್ನೂ ಒಂದು ವೃತ್ತದಲ್ಲಿ ಬೆಳೆದಿದೆ . ಆ ಮುಂದಿನ ಗದ್ಯದಲ್ಲಿ ಕೃಷ್ಣನಿಂದ ತಮ್ಮ ಮಕ್ಕಳಿಗಾದ ಕಾಟವನ್ನೊ ಗೋಪಿಯರು ಯಶೋದೆಗೆ ಬಿನ್ನವಿಸಿದ ಸಂಗತಿಯಿದೆ." ತಂತಮ್ಮ ಮಕ್ಕಳ ಅಡೆದ ನೆತ್ತಿಯಂ ಬುಗುಟುಮುಂಡೆಯುವಂ ಯಶೋದೆಗೆ ತೋಱಿ ದೂರುತ್ತಿದ್ದ ಅವರಿಗೆ ಯಶೋದೆ ಏನು ತಾನೇ ಸಮಾಧಾನ ಹೇಳಬಹುದು?"ಏನು ಮಾಡಲಿ ಕೊಂದರೂ ಅವನನ್ನು ಅಂಕೆಗೆ ತರಲು ನನ್ನಿಂದ ಸಾಧ್ಯವಿಲ್ಲ . ಕಿಚ್ಚಿಲ್ಲದೆ ಉರಿಯುತ್ತನೆ? ನನಗೊಂದು ಗೊತ್ತಿಲ್ಲ.ಹೋಗಿ ನಿಮಗೆ ತೋರಿದಂತೆ ಮಾಡಿ , ಬೇಕಾದರೆ ಹೊಡೆದು ಚಚ್ಚಿ ಎಂದಳು! ಆ ಮಾತಿಗೆ ಇವರು ತಾನೇ ಏನು ಹೇಳಾಬಲ್ಲರು? ದೂರಬೇಕೆಂದು ದೂರಿದೆವು ಆ ಮಗುವಿನ ಕಾಟ ತಡೆಯಲಾರದೆ ಬಂದೆವು. ಇಗೋ ನಿನ್ನ ಮಗನ ಕೇಡು ನೋಡು ಎಂದು ಕೋಲು ಹಿಡಿದು ಅಟ್ಟಿಕೊಂಡು ಹೋದರು. ಕೃಷ್ಣನು ಅವ್ರನ್ನು ಅಟ್ಟಡಿಸಿ ಇನ್ನು ತನು ಓಡಲಾರದನಂತೆ ನಿಂತು " ನಿಂ್ಮ ಕಾಲಿಗೆ ಬೀಲಿವವನ ಹಾಗೆಉಪಾಯಮಾಡಿ ಅವರ ಕಾಲೆಳೆದೆಳೆದು ಅಳಿಸಿ ಬಿಟ್ಟನಂತೆ !

ಇವೆಲ್ಲ ಸುಂದರನಾದ್ ಬಾಲಲೀಲೆಯ ಚಿತ್ರಗಳಾಲ್ಲಿ ಸೊಗಸಿದೆ. ಸರಳತೆಯಿದೆ ಇವುಜೈನಾವತರಣದವಲ್ಲ; ಶುದ್ಧ ವೈಷ್ಣವ–ಭಾಗವತ ವಾತಾವರಣವುಎನ್ನುವದರಲ್ಲಿ ಏನೂ ಸಂಶಯವಿಲ್ಲ. ಜಗನ್ನಾಥವಿಜಯದ ಕವಿಯ ಕಾಅಲವೂಇದೇ ಎಂಬುದನ್ನಿಲ್ಲಿ ನೆನೆಯಬೇಕು.

ಮತ್ತೆ ದೇವತೆಯ ಕಾಟ ತಾಳೇಯವರವಾಗಿ ಒಂಶು ದೇವತೆ ತಾಳೇಉಉ ಕಾಯನ್ನು ಬೇತಾಳ ಕಲ್ಲುಮಳೇ ಕರೆಯುವಂತೆ ಕರೆಯಿತು.ಕೃಷ್ಣ ಜಗ್ಗಲಿಲ್ಲ ಇವನು ಮನೆಯಲ್ಲಿದ್ದರೆ ದೂರೂ ದುರ್ಯಶವೂ ತಪ್ಪದು ಎಂದು ನಂದನು ಕೆಲವರು ಗೊಲ್ಲರೊಂದಿಗೆ ಕೃಷ್ಣನನ್ನು ವೃಂದಾರಕ ವನಕ್ಕೆ ಕಳಿಸಿದ. ಅಲ್ಲಿ ಯಾದರೂ ಕೆಲಸ ಗೋಕುಲವನ್ನು ಕಾಯುವುದೇ ಆದರೇ ಅದುದೇನು? ಹಾವುಗಳಾನ್ನು ಹಗ್ಗಗಳಂದು ಎಳೆದು ತ್ರುವ್ವ, ಕಾಡ ಹುಲಿಯನ್ನು ಬೆಕ್ಕೆಂದು ಹಿಡಿದು ತರುವುದು – ಇಂತಹ ಸಾಹಸಗಳನ್ನು ಮರೆಯುವುದೇ ಅವನ ನಿತ್ಯದ ಕ್ರಮವಾಯಿತು.

ಎಂಟನೆಯ ದೇವತೆ . ಈಗ ಕೊನೆಯ ಪ್ರಯತ್ನವಾಗಿ ಕತ್ತೆಯ ಆಕಾರವನ್ನು ತಳೆದು ಕೃಷ್ಣನ ಮೇಲೆ ಹಾಯ್ದು ಬಂತು. ಕತ್ತೆಯ ರೂಪವನ್ನು ಕವಿ ಸಹಜವಾಗಿ ಚಿತ್ರಿಸಬಲ್ಲ ಎನ್ನುವುದು "ಬಸನಕ್ಕೆತ್ತಿದ ಬಾಲಂ ಎಂಬ ವರ್ಣನೆಯಿಂದ ತಿಳಿಯುತ್ತದೆ. ಹೊಸಗರಿಕೆ ಬಣ್ಣದ ಮೈಚರ್ಮವುಳ್ಳ ಆ ಕತ್ತೆಯ ಹಲ್ಲುಗಳು ಗುದ್ದಲಿಯ ಹಾಗೆ ಇದ್ದುವಂತೆ ! ಪಿತೃಪತಿಗೆ ಪೆಣನಂ ಪೇಱುತ್ತೆಯಂತೆ ಇದ್ದ ವೇಷಧ್ರ ಗರ್ದಭವು

ತುರುಹಟ್ಟಿಅಯ್ಲ್ಲಿ ಮಾಡಿದ ಕೋಲಾಹಲದ ಚಿತ್ರಣದಲ್ಲಿ ಜಾನಪದದ ಪೌರಾಣಿಕದ, ವಾಸ್ತವತೆಯ ಅನೇಕಅಂಶಗಳು ಬೇರೆತು ಕುತೂಹಲವನ್ನು ಹೆಚಿವಿಸುವ ರಮ್ಯತೆಯಿದೆ. " ಎಣ್ಬರೇಱಿದ ಕಟ್ಟೆಯಂತೆ " ಬ್ರಹ್ಮನಂ ಕೂರಿಸಿದ ಕತ್ತೆಯಂತೆ ಕಪ್ಪೆಯ ನೇಣಂ ಕರ್ಚಿ ಪರಿವ ಕುದುರೆಯಂತೆ " ಉಂತೆ ಕುಣಿವಂಗೆಱಿಯಪ್ಪನಾದಂತೆ " ಅಬ್ಬೆಯ ಬೇಟ್ಟುದವರೆಯ ವಿಟ್ಟೆಂಬಂತೆ ಹಿಗೆ ಬಂದಿರುವ ಉಕ್ತಿವೈವಿಧ್ಯದ ಅರ್ಥವ್ಯಪ್ತಿ ವಿಸ್ತಾರವಾದುದು.

ಕೃಷ್ಣನು ಹೇಂಟೆಗಳನೂ ಕಾಡುಕುದುರೆಯಳನ್ನೂ ಜನರ ಗುಂಪನ್ನೂ ಹೊಕ್ಕು ಕೋಲಾಹಲ ಮಾಡಿ ತನ್ನಮೆಲೆ ಬೀಳಲು ಬಂದ ಆ ಕತ್ತೆಯ ಬಾಯಿಸೀಳಿ ಕೊಂದು ಹಾಕಿದನು. ಆಗ ಕೃಷ್ಣನು ಕೈಯ ಕೋಲಿಂದ ಉದಿರಿಹೊದ ಹಲ್ಲುಗಳು " ಕಟ್ಟೆಯಿಂದುಟ್ಟು ಕವಡಿಕೆಯಂ ಕವಡಿಕೆಯಂ ಬಿತ್ತಿದಂತೆ " ಆಯಿತೆಂತೆ ! ಅಂತೂ ಈ ಮುರಾರಿಯ ವೀರವೃತ್ತಿಗೆ ಜನ ಮೂಗಿನ ಮೇಲೆ ಕೈಯಿಡುವ,ಂತಾಯಿತು.

ನಂದಗೋಕುಲದ ಸನ್ನಿವೆಶಚಿತ್ರಣ , ಗೊಲ್ಲ ಗೊಲ್ಲತಿಯರ ಪ್ರವರ್ತನೆ, ಕೃಷ್ಣನ ಬಾಲಲೀಲೆಗಳ ವರ್ಣನೆ–ಇವೆಲ್ಲ ತಮ್ಮಸಹಜತೆ ಸರಳತೆಗಳಿಂದ ಸೊಗಸುತ್ತವೆ; ನೆಮಿಚಂದ್ರನ ಲೋಕಜ್ಞಾನ , ಗ್ರಾಮೀಣಪರಸರದ ಪರಿಚಯ ಇವೆಲ್ಲದಟ್ಟವಾಗಿ ಪ್ರಕಟವಾಗಿರುವಂತೆ ಕಂಡುಬರುತ್ತವೆ.

ಕೃಷ್ಣನ ಸಾಹಸಕಾರ್ಯಗಾಳು , ಕಂಸ ಚಾಣೂರರ ಸಂಹಾರ

ಕಂಸನ ಪೂರ್ವಭವದ ದೇವತೆಗಳ ಪ್ರಯತ್ನಗಳು ಒಂದೊಂದೂ ವಿಫಲವಾಗತೊಡಗಿದಂತೆ" ಗಂಡಗೋಪಾಲನ ಗೋಕುಳಾಕ್ಕೆ ಪುಲ್ಲಂ ನೀರುಮಂ ಸಲ್ಲಿಸಿ ಬೆರ್ಚಿ ಬೇಸ್ಕಯ್ಯಲೆಂದು ಕಾರ್ಗಾಲ ಕಾಲಿಟ್ಟಿತಂತೆ : ಕವಿಯ ಈ ಕಾರ್ಗಾಲದ ವರ್ಣನೆಯನ್ನು ಸ್ವಲ್ಪಭಾಗದ ಮಟ್ಟಿಗೆ ಇಲ್ಲಿ ನೋಡಬಹುದು :

ಎಳೆಮಿಂಚಂ ತಱಿಯಿಕ್ಕಿ ಚಾದಗೆಗಳಾಂ ಬಿಟ್ಟೂಡಿ ಬಲ್ಗೆಚ್ಚಲಿ
ವ್ಟಳಿನೀಳಾಂಬುದಂದಿಂ ಬಟಿಲ್ದ ಗಗನಶ್ರೀಧೆನುವಂ ಕೋಮಳಾ
ಮಳ ದೀರ್ಘಾವೃತಧಾರೆಗಳ್ಸುರಿಯೆ ಭೋರ್ಭೋರೆಂಬಿನಂ ಶಕ್ರಚಾ
ಪಳತಾ ದಾಮಕದಿಂದ ಕಟ್ಟಿ ಕಱಿವಂ ಕಾರೆಂಬ ಗೋಪಾಳಾಕಂ ॥ (೮–೩)

ಈ ಪದ್ಯದಲ್ಲಿ ಕಾರ್ಗಾಲವೆಂಬುದನ್ನು ಧೇನುದೋಹನ ಕ್ರಿಯೆಯೆಂಬಂತೆ ವರ್ಣಿಸಿದೆ " ಎಳಮಿಂಚೇ ಕಾಲಿಗೆ ಕಟ್ಟುವ ಗುದಿಗೆ ,ಚಾತಕಗಳೇ ಮೊದಲು ಊಡಲೆಂದು ಬಿಟ್ಟ ಕರುಗಳು ಮೋಡಗಳೇ ಕೆಚ್ಚಲು ಗಗನವೇ ಧೇನು ಮಳೆಯೇ ಕರೆಯುವ ಹಾಲು , ಕಾಮನ ಬಿಲ್ಲೇ ಹಸುವಿನ ಕೊರಳ ಹಗ್ಗ ಕಾರ್ಗಾಲವೇ ಗೊಲ್ಲ– ಹೀಗೆ ನಂದಗೋಕುಲಕ್ಕೆ ತಕ್ಕ ದೃಷ್ಟಾಂತ ಕಲ್ಪನೆಯಿಂದ ಕವಿ ನೇಮಿಚಂದ್ರ

ಅಷ್ಟಮಾಶ್ವಾಸವನ್ನು ಆರಂಭಿಸಿದ್ದಾನೆ. ಈ ಪದ್ಯವನ್ನೂ ಇದರ ಮುಂದಿನ ಪದ್ಯವನ್ನೂ ಜಗನ್ನಾಥ ವಿಜಯದ ಈ ಚರುರ್ಥಾಶ್ವಾಸದ ...... ಕಾರೆಂಬ ಮಾರದ್ವಿಪಂ ಎಂಬ ಪದ್ಯದೊಂದಿಗೆ (ಪ. ೨೨) ಕುತೂಹಲಕ್ಕೆ ಹೋಲಿಸಿ ನೋಡಬಹುದು.

ಆಶ್ವಾಸದಆರಂಭಾದಲ್ಲಿ ಕಾರ್ಗಾಲದ ವರ್ಣನೆ ಬರುವುದು ಒಂದು ಹೊಸ ನೋಡಬಹುದು. ಹೊಸಚಿತ್ರ ಆರಂಭವಾಗಬೇಕಾದ್ದರ ಸಂಕೇತವನ್ನು ತಿಳಿಸುತ್ತದೆ ಎಂದರೆ ತಪ್ಪಲ. ಕೃಷ್ಣವಿಘಾತಿಗೆ ಸಂಕಲ್ಪಮಾಡಿ ಬಂದ ದೇವತೆಗಳು " ಭೇತಾಳಾನ ಪೆಣದಂತೆ ಬೆನ್ನ ಕಯ್ಯಂ ಬಿಡದೆ ಸತೂ ಸಾಯದೆ , ಪುನಃ ಪ್ರಯತ್ನಕ್ಕೆಸಜ್ಜದರು. " ಪರಿವೆ ನೀರಂ ಪಱಿಯೆ ಪೊಯ್ಯುಲುಮುರಿಯಱಿದೇರ್ಪಡಿಸಲುಂ ರಸಮಂ ಸೋಯಿಸಲುಂ ನಮ್ಮಂ ನೋಯಿಸಲುಂ ಇನ್ನುವೊರ್ವಂ ಪಟ್ಟುವನುಂಟಕ್ಕು ಎಂದು ಹೇಳಿಕೊಂಡು ಓರೋರ್ವರುಂ ಕಯ್ಯಂ ಪೊಯ್ದು ಕಹಕಹಾಟಹಾಸದಿಂ ಕರುಳ್ ಪಱಿಯೆ ನಕ್ಕರಂತೆ " ಇನ್ನೂ ಮಂಡೆಯು ಮಾಸು ಅರದತಬ್ಬಲಿ ನಮಗೇ ಅಸಧ್ಯನಾಗಿದ್ದಾನೆ. ಇವನು ಹೆಚ್ಚಿದಕೊಂಡರೆ , ಆ ಪರಮೇಶ್ವರನಿಗೂ ಯಮನಿಗೂ ಮೀರದವನಾಗಿತ್ತಾನೆ. ಇವ್ನು ಎಂದು ಅವರು ಚಿಂತಿಸಿದರು ,. " ಮಲ್ಲನ ಹಾಗೆ ನಾವು ಹೋರಿದರೆ , ಧನುರ್ಧರನ ಹಾಗೆ ಇವನು ತೂರಿಕೊಂಡ; ಇರಲಿ ಇನ್ನೊಮ್ಮೆ ನೋಡೊಣ ಎಂದು ಕೃಷ್ಣ ತುರುಗಾಯಲೆಂದುಹೊಲಕ್ಕೆ ಹೋದ ಸಂದರ್ಭಾವನ್ನು ನೋಡಿಕೊಂಡು , ಭಾರಿಯ ಮೋಡವನ್ನು ಗಗನದಲ್ಲಿ ಕವಿಯಿಸಿ ಬಹುಭಾರಿಯಮಳೆಯನ್ನು ಕರೆದರು. ಆಲಿಕಲ್ಲ ಮಳೇ ಜಡಿಯಿತು . ಹಿಡಿದ ಗೋವಳಿಗೋಲಲ್ಲಿಯೇ ಹೊಡೆದ ಸಿಡಿಲುಗಳನ್ನು ಕೃಷ್ಣನು ಹೊಡೆಸೆಂಡಾಡುವಂತೆ ಗುರಿಯಿಟ್ಟು ಹೊಡೆದು, ಚೂರುಚೂರು ಮಾಡಿದನಂತೆ! ಆದರೇನು? ಅದು ಕರಗದ ಮುಗಿಲು ಚದುರದ ಕಾಮನಬಿಲ್ಲು ಕೆಡದಮಿಂಚು, ಹೊಡೆದು ಓಸರಿಸದ ಸಿಡಿಲು, ಸಗ್ಗದ ಜಡಿಮಳೇ ! ಗೊಲ್ಲರೆಲ್ಲ ಕಂಗೆಟ್ಟರು. ಕೃಷ್ಣನು ಅವರಿಗೆ ದೈರ್ಯ ಹೇಳಿ ಗದಗದಿಸುವ ಗೋವುಗಳನ್ನೂ ಗೊಲ್ಲರನ್ನೂ ಕರೆದುಕೊಂಡು ಸಮೀಪದ ಗೋವರ್ಧನಗಿರಿಗೆ ಹೋಘಿ ಸೇರಿದ. ಅದೊಂದು ಅಖಂಡವಾದ ಬಂಡೆ ಪಶುಶಿಶುಗಳ ಪ್ರವೇಶಕ್ಕೆ ಗುಹೆಯಿಲ್ಲ್ , ಕೃಷ್ಣ ಆ ಗಿರಿಯನ್ನೇ ಕಿತ್ತೆತ್ತಿ ರಕ್ಷಣೆಯನ್ನು ಒದಗಿಸಿದನು. ಆಸಂದರ್ಭವನ್ನು ಕವಿ ಹೀಗೆ ಬಣ್ಣಿಸಿದ್ದಾನೆ :

ಚಿ'ಪರಲಂ ಬಾರ್ ತೆಗೆಮೀಂಟುವಂತೆ ಚರಣಾಂಗುಷ್ಠಾಗ್ರದಿಂ ಮೀಂಟ ಝು

ಲ್ಲರಿವೋಲ್ ಝಲ್ಲನೆ ಸೂಸಿ ನಿರ್ಝರಜಲಂ ಬಿಟ್ಟಿರ್ಪಿನಂ ಕಾವಿನಂ

ತಿರಿ ಕೊಂಡೆತ್ತಿದ ಕೆಯ್ ಮುರಾರಿ ಕೊಡೆಯಂ ಕ್ರೀಡಾರಸಕ್ಕೆತ್ತುವಂ

ತಿರೆ ಕಿೞ್ತೆತ್ತಿದನೊಂದೆ ಕೆಯ್ಯೊಳೆ ಮಹಾಗೋವರ್ಧನಾದ್ರೀಂದ್ರಮಂ ॥ (೮–೧೧)

ಹೀಗೆ ಅಮೆಯಸಾಹಸಿ ಕೃಷ್ಣ ಗೋವರ್ಧನಗೊರಿಯನ್ನು ಕಿತ್ತು ಎತ್ತಿದನಷ್ಟೇ ಬಲಗೈಯಲ್ಲಿ ಗೋವಳಿಗೋಲು ಎಡಗೈಯಲ್ಲಿ ಬೆಟ್ಟ ಇವುಗಳಿಂದ ಚಂಡಾಟಕ್ಕೆ ಕೃಷ್ಣ ಸಿದ್ಧವಾದಂತೆ ಇದ್ದನಂತೆ .

ಈ ಮೇಲಿನ ಪದ್ಯವನ್ನು ' ಜಗನ್ನಾಥವಿಜಯದ ಈ ಪದ್ಯದೊಂದಿಗೆ ಹೋಲಿಸಿ ನೋಡ ಬಹುದು :

ರಸಮುದಗ್ರ ಗ್ರಾವವರ್ಷ ಕಱೆಯೆ ತುಱುವುಮಾವುಂ ಪಡಲಿಟ್ಟು ಬಿಟ್ಟಿ

ಚ್ಚೆಪ್ಪವೆನುತುಂ ಗೋಪ ಗೋಪೀತತಿ ಮಱೆವುಗೆ ಗೋವರ್ಧನಾದ್ರೀದ್ರಮಂ ಕಿ

ಟ್ಟು ಮಹಾಭೋನಿರ್ಝಿಲ್ಲರಿವೋಲಿರೆ ಮಹಾವೃಷ್ಟಿಯಿಂ ವ್ವಮದೋರ್ದಂ

ಡಮೆ ಕಾವಾಗಿರ್ಪಿನಂ ಗೋಕುಲಕ್ಕೆ ಕೊಡೆವೂಲಂದೆತ್ತಿ ನಿಂದಂ ಮುಕುಂದಂ ( ೪–೮೯)

ನೇಮಿಚಂದ್ರನಿಗೆ ಗೋವರ್ಧನಾದ್ರಿಯೆತ್ತಿದುದನ್ನು ಎಷ್ಟು ಬಣ್ಣಿಸಿದರೂ ಕಡಮೇಯೆ ಇನ್ನೂ ೨–೩ ಪದ್ಯಗಳಾನ್ನು ಇದಕ್ಕಾಗಿ ಬರೆದಿದ್ದಾನೆ. ಬೆಟ್ಟವತ್ತಿದ್ದು ಆನೆಯ ಮರಿ ಬಯಲ್ದವರೆಯನ್ನು ಕಿತ್ತು ಎತ್ತಿದ ಹಾಗೆ ಎಂದು ಒಂದರಲ್ಲಿ (ಪ. ೧೪) ಹೇಳಿದರೆ, ಇನ್ನೋಂದರಲ್ಲಿ ಹಾವುಗಳು ಹಾವಿನ ಹೇಳಿಗೆಯಿಂದ ಎದ್ದು ಬಂದಂತೆ ಪಾತಾಳದಿಂದ ಹಾವು ಹೊರಟವು (ಪ. ೧೫) ಎಂದು ಹೇಳಿದ್ದಾನೆ.

ದೇವತೆಗಳು ಕೆಂಡದ ಮಳೆ ಕರೆಯಿತು ಎನ್ನುವ್ವಂತೆ ಕಲ್ಲಿನ ಮಳೆಯನ್ನೇ ಕರೆದರು. ಈಗ ಏಳು ದಿನಗಳ ಕಾಲ ಇದು ಸಾಗಿತು . ಅವುಗಳ ಆಟ ಏನೂ ಸಾಗಲಿಲ್ಲ ಗೋವರೂಸೀವರೂ ಮಕ್ಕಳೂ ಮರಿಗಳೂ ಬೆಕ್ಕಸಪಟ್ಟರು. ಅವರ ಭಾಗಕ್ಕೆ ಕೃಷ್ಣ ಪುರುಷೋತ್ತಮನಾದ; ನಂದ ಯಶೋದೆಯರು ದೇವದೇವ್ಯೆಯರಾದರು. ನಾಡು ಬೀಡೆಲ್ಲ ಆಯೆಡೆಗೆ ಜಾತ್ರೆ ಬಂದಿತು. ಇಂದು ಕಂಸನಿಗೂ ತಿಳಿಯಿತು . ತನಗೆ ಬಂದ ಮಾರಿಯೆ ಅದು ಎಂದು ಆವನು ತಲ್ಲಣ್ಣಿಸಿದ ದೇವತೆಗಳು ಹಾಳುದೇಗುಲದ ದೇವತೆಗಳ ಹಾಗೆ ಖಿನ್ನರಾದ ಅಪಮಾನಿತರಾಗಿ , ಇದು ತಮಗೆ ಹರಿಯದ ಹಗೆ ಎಂದು ಹೇಳಿಬ ಹೊರರುಹೋದರು.

ಈಗ ಕಂಸ ಹಲ್ಲುಹೋದ ಹಾವಿನಂತಾದ ಆತ ಹಿಗೆ ಚಿಂತಿಸಿದ :

ಮೊಳೆಯೊಳೆ ಪೆರ್ಗೊಡಲಿಗಳುಂ

ಕೊಳಲಾಱದೆ ಮಕುವೋದುವೆಂದೊಡೆ ಮುಂದಿಂ

ಬಳೆದು ಮರನಾದ ಕಾಲಂ

ಕೊಳಲುಂ ಕಡೆಯಕುಱಮರ್ಪುದವುದುಮುಂಟೇ ॥

ಇಲ್ಲಿಂದ ಮುಂದೆ ಕಂಸನ ಚಿಂತೆ ಹೀಗೆ ಬಳಿಯುತ್ತ , ಅವನ ಉದ್ವೇಗ ಹೆಚ್ಚುತ್ತ, ಅವನೊಬ್ಬ ದುರಂತವ್ಯಕ್ತಿಯಗಿ ಜೀವಿತ್ವನ್ನು ಮುಗಿಸುವುದು ಕಾಣುತ್ತೇವೆ.

ಅರಿಷ್ಟ ದನವನ ಮೂಲಕ ಶತ್ರುಹನನವನ್ನು ಸಾಧಿಸಲು ಕಂಸ ಹೊಸಪ್ರಯತ್ನವನ್ನು ಹೂಡಿದ "ಯಾವದಸ್ತಿ ಪ್ರತೀಕಾರಸ್ತಾವತ್ಕುರ್ಯಾತ್ ಪ್ರತಿಕ್ರಿಯಾಂ ತಾನೆ ! ವಿರೋಧಿಯನ್ನೂ ವ್ಯಾಧಿಯನ್ನೂ ಬೆಳೆಯುವ ಮುನ್ನವೇ ಕಿರಿದು ಎಂದು ಕಡೆಗಣಿಸಿದೆ ಕೆಡಿಸಬೇಕು ಎಂಬ ಎಚ್ಚರ ಅವನಲ್ಲಿದ್ದಿತ್ತು ಅರಿಷ್ಟದಾನವ ಮೊಹೋಕ್ಷವಾಗಿ, ಪಿಂಗಲಾಕ್ಷವನ್ನು ಕೆರಳಿಸಿ ಕೃಷ್ಣನ ಮೇಲೆ ನುಗ್ಗಿದ ಅಡೆಯಂ ಕೋದುತ್ತೆಂತು ಮಾರ್ದನಿಗೆ ಮಸಗುತುಂ ಎಂಬುದಾಗಿ ಇಲ್ಲಿ ಬರುವ ಕೆರಳಿದ ಗೂಳಿಯ ವರ್ಣನೆ (೮-೧೮) ಲೀಲಾವತೀ ಪ್ರಬಂಧ ದಲಿ ಗೋಕುಲವನ್ನು ವರ್ಣಿಸುವ ಬೇರೊಂದು ಸಂದರ್ಭದಲ್ಲಿ (೫-೮೭) ಸಹ ವಂದಿರುವುದನ್ನು ಗಮನಿಸ ಬಹುದು ಕೃಷ್ಣ ಆ ಗೂಲಿಯ ಮೂಗನು ತನ್ನ ತೋರುಬೆರಳಿಂದ ತಿವಿಯುತ್ತಲೇ ಅದು ಕಣ್ಣು ಹೊರಬಂದು ಗುರುಗುರುಟ್ಟಿ ಮುದುರಿಕೊಂಡು ಬಿದ್ದಿತಂತೆ. ಆದರೆ ಎಷ್ಟಾದರೂ ಅದು ಗೋವು ತಾನು ಗೋಪಾಲಕ ತಾನೇ ! ಅದನ್ನು ಕೊಲ್ಲಲಿಲ್ಲ ಅಂತೂ ಅಂದಿನ ಅರಿಷ್ರ ತೊಲಗಿತು. !

ಗೋವರ್ಧನೋದ್ಧರಣವೂ ಅರಿಷ್ಟದನವಭಂಗವೂ ಆದ ಮೇಲೆ ಕೃಷ್ಣನ ಸಾಹಸ ಲೋಕಮಿಶ್ರುತವಾಯಿತು. ವಸುದೇವ ದೇವಕಿಯರಿಗೆ ತಮ್ಮ ಮಗನನ್ನು ನೋಡುವ ಹಂಬಲ ಹೆಚ್ಚಿಅವರು ಗೋಮುಖಿ ಎಂಬ ನೋಂಪುಯ ನೆವದಿಂದ ನಂದನ ತುರುಹಟ್ಟಿಗೆ ವೈಭವದಿಂದ ಹೋರರುಬಂದರು; ಸೌಖ್ಯದ ಸೀಮೆಯನ್ನೇ ಕಾಣುವಂತೆ ಕೃಷ್ಣನನ್ನು ಕಂಡು ಅಪ್ಪಿಕೊಂಡು ಅನಂದಿಸಿದರು. ದೇವಕ್ಕಿಗೆ ಆಕೆ ಇನ್ನೂ ಕಡುಗಂದಿಯಾದ್ದರಿಂದ , ಮಾಲೆಹಾಲು ತೊರೆಯಿತು . ಯಕ್ಷಕರ್ದಮ, ಕಸ್ತೂರಿ ಮೊದಲಾದವುಗಾಳಿಂದ ಅಲಂಕರಿಸಿ ಬೇಲೆಗೆ ಬಣ್ಣಿದುವುಂ ಮೆಯ್ಗೆ ನೊಚಿವಿದುವುಮಪ್ಪ ದೇವಾಂಗಮನುಡಿಸಿ ಮಾಣಿಕದ ತೊಡಿಗೆಯನ್ನು ತೊಡಿಸಿ ಅಮೃತಾನ್ನವಿಟ್ಟು ಆಕೆ ಮಗುವಾದ ಕೃಷ್ಣನನ್ನು ಉಪಚರಿಸಿದಳು. ಗೊಲ್ಲಬಾಲಕರಿಗೆಲ್ಲ. ಗೋಪಿಯರಿಗೆಲ್ಲಬಹುವಾಗಿ ಸತ್ಕರಿಸಿದಳು. ಇದೇ ನೋಂಪಿಯಾಯಿತು. ನಕ್ಷತ್ರಗಳ ನಡುವೆ ಚಂದ್ರನಂತೆ ಕೃಷ್ಣ ಗೊಪಾಲಕರೊಂದಿಗೆ ತನ್ನ ಬೆಲೆಗೆ ಬೇಳೆಗಾಗಿರ್ದ ನಂತೆ. ಇತ್ತ ನಂದಗೋಪನ್ನು ಗೋಪವೃದ್ಧಯರೊಂದಿಗೆ, ವಸುದೇವ ಬಲದೇವರನ್ನು ಒಡಗೊಂಡು ಹೋಗಿ ಕೃಷ್ಣ ಈ ಮೊಡ್ಡಲು ಮೆರೆಹ ಸಾಹಸದ ಕ್ಷೇತ್ರಗಳನ್ನೆಲ್ಲ ಅವರಿಗೆ ಒಂದೂಂದಾಗಿ ತೋರಿಸಿದನು. ಕವಿ ನೇಮಿಚಂದ್ರ ಈ ಸನ್ನಿವೇಶವನ್ನು ದೀಘವಾದ ಒಂದು ಗದ್ಯದಲ್ಲಿ ( ೮-೨೨ )

ನಿರೂಪಿಸಿದ್ದಾನೆ ಆದರೆ ಕೃಷ್ಣನನ್ನು ಕುರಿತು , ಆತ ಮುಂಜಕೇಶಿ ಮುರಾರಿ ಎಂದು ಇಲ್ಲಿ ಏಕೆ ಕರೆದಿರುವನೋ ತಿಳಿಯದು. ಇದು ವೈದಿಕಪರವಾದಹೆಸರುಗಳು . ಗೋಪಿಯೂ ದೇವಕಿಗೆ ಪ್ರತ್ಯೇಕವಾಗಿ ಕೃಷ್ಣನ ಸಾಹಸಗಳನ್ನು ಬಣ್ಣಿಸಿದಳು (೮–೨೩) :

ಕಡುಪಿಂದಾ ಕಾಕನಂ ಉಪ್ಪಳಿಸಿದೆಡೆಯಿದಾ ಪೂತನೀರಕ್ತಮಂ ಪೀ
ರ್ದೆಡೆಯಾ ತೇರ್ರೈಪ ತೇರಂ ಪರಪಿದೆಡೆಯಿದಾ ಮತ್ತಿಯಂ ಲೀಲೆಯಿ, ಕಿ
ಟ್ಟಿಡೆಯಾ ತಟಿಂ ಕುಮಾರಂ ಕೆಡಪಿದೆಡೆಯಿದಾ ಗರ್ದಭಾಶ್ವಂಗಳಾಂ ಸೀ
ಟ್ಟೀಡೆಯೇಂದಾ ದೇವಕೀದೇವಿಗ್ಸಮನಿತೇಡೆಯಂ ತೋಱಿದಳ್ಗೋಪಿಯಾಗಳ್ ॥

ಈ ಪುನರುಕ್ತಿ ಅನವಶ್ಯವಾಗಿತ್ತು; ಮೊದಲ ದೀರ್ಘಗದ್ಯದಿಂದ ಭಿನ್ನವಾದ್ದು ಏನಿಲ್ಲೈಲ್ಲಿ ಆದರೂ ಕವಿಗೆ ಕೃಷ್ಣನ ಸಾಹಸಸಂಕೀರ್ತನವೆಂದರೆ ಬಹಳ ಹಿಗ್ಗು ಆದ್ದರಿಂದ ಇದನ್ನು ನಾವು ಸಹಿಸಿಕೊಳ್ಳಬೇಕು. ಅದರೆ ಗೋಪಿಯು ಗೋವರ್ಧನಗಿರಿಯ ಉದ್ದರಣವನ್ನು ಉದ್ದೇಶಿಸಿ “ ನೀಂ ಬೆಸಗೊಳ್ವುದದೇನ್ ಅಣಂಬಿಯನ್ ಅವಯವದೆ ಕೀೞ್ವಿ ತೀಱಿದಿಂ ಕಿತ್ತ್ರಗಿರಿಯಿದು ಎಂಬುದಾಗಿ ಹೇಳಿದಳೆಂಬುದು ಸೊಗಸಾಗಿದೆ. ಹಗೆಯೇ ದೇವಕಿ ತನ್ನ ಮಗನ ಶಕಿ ಸಹಸಾಳಿಗೆ ವಿಸ್ಮಯಪಟ್ಟು “ ಮನದೊೞ್ ಕಂಸಂ ಮುನಿದಪ್ನೆಂದೊಡೆ ಮುನಿಯವೇಡಾ ಎಂದು ಉಪ್ಪಂ ನಿವಳಿಸಿ ತೊಪಿಗಿಳೇಂಬುದು ಸಹ ಸೊಗಸಾಗಿದೆ. ಹೀಗೆ ನೋಂಪಿಯ ನಿಮಿತ್ತದಿಂದ ಕೃಷ್ಣನನ್ನು ನೋಡಿಕೊಂಡು ವಸುದೆವ ದೇವಲ್ಕಿಯರು ಮಥುರೆಗೆ ಹಿಂದಿರುಗಿದರೆಂಬಲ್ಲಿಗೆ ಕಥೆಯಲ್ಲಿ ಮತ್ತಿಂದು ಘಟ್ಟ ತೊಡೆಗುತ್ತದೆ.

ಮಧುರಾನಗರಕ್ಕೆ ಕಾರಣಾಭೂತವಾದ ಒಂದು ಚೈತ್ಯಲಯದ ಎದುರಿನಲ್ಲಿ ಒಂದು ದೇವಾಲಯವಿದ್ದು ಅಲ್ಲಿಯ ಬಿಲದ್ವಾರದಲ್ಲಿ ಹರಿಯ ಪುಣ್ಯೋದಯದಿಂದ ಶುಚಿನಾಗಶಯ್ಯೆ ಶಾಙ್ಗಚಾಪ, ಪಂಚಜನುಅ ಶ್ಶ್ಖಗಳೆಂಬ ಮೂರು ಅಪೂರ್ವವಸ್ತುಗಳು ಉದಿಸಿದವು. ಪಂದಾಶ್ಚರ್ಯಗಳಾದವು. ಕಂಸನಿಗೆ ಈಗ ದಿಟವಾಗಿ ಭಾಯವಾಯಿತು ಚೈತ್ಯಾಲಯಕ್ಕೆ ಬಂದು ಅಲ್ಲಿ ಯ ಯೋಗಿಶ್ವರರಿಗೆ ವಂದಿಸಿ ಆ ಅಪೂರ್ವವಸ್ತುಗಳ ವೃತ್ತಾಂತವನ್ನು ತಿಸಿಸುವಂತೆ ಬೇಡಿದನು. ಅವರಾದರೋ ಅವು ಪರಮಪುರುಷನ ಪುಣ್ಯ ಪ್ರೇರಣೆಯಿಂದ ಉಡಿಸಿದುವಲ್ಲದೆ ಉತ್ಪಾತಗಳಲ್ಲ ಎಂದೂ ಯಾವಾತನು ಅವನು ಸ್ವಾಧೀನಮಾಡಲು ಶಕ್ತನೋ ಅತನೇ ಅರ್ಧಚಕ್ರವರ್ತಿಯಾಗಿ ಪೃಥ್ವೀರಾಜ್ಯವನ್ನಾಳುವನು ಎಂದೂ ನಿಮಿತ್ತವಾಡಿದರು. ಕಂಸನು “ ಇದನೀಗಳೆ ನೊೞ್ಪೆನ್ ಎಂದು ನಾಗಶಯ್ಯೆ ಏರುವಾತನಿತ ತನ್ನ ಮಗಳಾನ್ನು ಕೊಡುವುದಾಗಿ ಘೋಷಣೆ ಹೊರಡಿಸಿದನು. ಅದರೆ ಇದಕ್ಕೆ ಜನರ ಪ್ರತಿಕ್ರಿಯೆಯಿದು :

ಪಾವೆಂದೊಡೆ ಪಡೆ ನದುಗುವು

ದೇವೇಯೊ ಪಸೆಯಲ್ಲಿ ಪಾವು ಕೊಳ್ವೋಸಗೆಯನೋ

ವೋವೊ ಪುಸಿ ಮದುವೆ ಮೊದಲೊಳ್

ಸಾವು ದಿಟಂ ಸತ್ತು ಮದುವೆಯಪ್ಪರುಮೊಳರೇ ॥ (೮–೩೧)

ಇಷ್ಟು ಮಾತ್ರವಲ್ಲೋ ಅವರು ' ನಿಮ್ಮರಸನ ಕನ್ಯೆ ವಿಷಕನ್ನಿಕೆಗಾಕೆಗುುವೆವಿಲ್ಲಿ ಸೂಲಮನೇಱಿ ಪಾಲ್ಗುಡಿವರಲ್ಲ ಎಂದು ಕಿವಿಮುಚ್ಚಿಕೊಂಡು ಹೊರಟುಹೋದರು. ಇಂಥ ಹಿನ್ನೆಲೆಯಲ್ಲಿ ಕೃಷ್ಣ ಆ ಘೋಷಣೆಯನ್ನು ಕೇಲಿ ಹೀಗೆ ಹೇಳಿದ ನಡೆದುಕೊಂಡ:

ಏನಿಂ ಪಾಸುರಗನೆ ಬಿ

(ಲೇ) ನದು ಶೃಂಗಜಮೆ ಶಂಖವ್ವೆಯದೆ ಪೋ

ಗಾನೇಱುವೆನನೆತ್ತುವೆ

ಜಾನಾನೊತ್ತುವೆಂನೆಂದು ಪಿಡಿಸಿದ್ಯಂ ಡಂಗುರಮಂ ॥ (೮–೩೨)

ಹೀಗೆ ನಿರ್ಧರಿಸಿದನು , ಮನೆಗೆ ಪೋಗದೆ ಗಟಿವಟಿಯ ಪಾವಿನಂತೆ ಗೋಸಣೆಯ ಬಟಿಯನರಮನೆಗೆ ನಡೆದನು. ಕಂಸನು " ಎನ್ನ ಪಗೆಯುಂ ಬಗೆಯುಂ ಸಾಧ್ಯಮಾದುದು ನೋಂತರ ಮೆಗೆಯನೆಟ್ಟಿದಂತೆಮಾಟ್ಪೆನ್ ಎಂದು ಸಂಕಲಿಸಿಚೈತ್ಯಾಲಯದ ಮುಂದೆ ಮಹಾಸ್ಥಾನವನ್ನು ನೇರಹಿ ವಸುದೇವಾದ್ಯರಾಗಿ ಸಕಲರನ್ನೂ್ನ ಅಲ್ಲಿಗೆ ಬರಮಾಡಿಕೊಂಡನು. ಮಂತ್ರಮದಿಗಳಿಗೆ ಕಂಸ ಮೊದಲುಗೊಂಡು ಎಲ್ಲರೂ ಗದಗಃಡಸಿದರು ,ಮಂತ್ರವಾದಿಗಳ ಮೆರೆಯಲ್ಲಿ ಹೊಗಿ ಸೇರಿ ಪಂಚನಮಸ್ಕಾರಮಂತ್ರ ಜಪಿಸಿ " ಏಱುವೇನೆಂದು ಬಂದು ಕಲಿಯಂ ಕರೆಯಿಮ ಎಂದರು. ಕೃಷ್ಣ ಆ ಸರ್ಪವನ್ನು ಲೀಲೆಯಿಂದ ಬಂದು ಏರಿದನು, ಕವಿ ಸುಂದರವಾದ ದೃಷ್ಟಾಂತಗಳಿಂದ ಈ ಸಂದರ್ಭವನ್ನು ನಿರೂಪಿಸಿದ್ದಾನೆ. ಆ ಹವು ಮುಕ್ತಾಫಕದಂತೆ ಶ್ವೇತವರ್ಣದಿಂದ ಕೂಡಿತ್ತು ಗರುದಧ್ವಜ ಕೃಷ್ಣನು ಅದನ್ನು ಜಾಜಿಯ ಹೂವಿನ ಮೇಲೆ ದುಂಬಿ ಬಂದು ಎರಗುವಂತೆ ಎರಗಿದಾಗ , ಅದು ಅತನಿಗೆ ತಣ್ಣನೆ ಹಾಸಿಗೆಯಯಿತು ಕಮ್ಮನೆ ವಾಸನೆಯನ್ನು ಬೀರಿತು. ಉರಿವುರಿ ನಂಜುರಿಯ ಮೇಕೆ ನೀರು ಹೋಯಿದಂತಾಯಿತು. ಅದು ಕೃಷ್ಣನನ್ನು ನವಿಲನ್ನು ಕಂಡ ಉರಗನಂತೆ ಮುದುರಿತು. ಅದರ ಮೇಲೆ ಕೃಷ್ಣಶರಚ್ಚಂದ್ರನಿಗೆ ಕಪ್ಪು ಕಲೆ ಎದ್ದು ತೋರುವಂತೆ ಶೋಭಿಸಿದನು. ಹವನ್ನೇರಿದವನು ಪಾಂಚ ಜನ್ಯವನ್ನೂ ,ಮೊಳಗಿಸಿದನು. ಆ ಧ್ವನಿಗೆ ಬ್ರಾಹ್ಮಾಂಡಭಾಂಡವೇ ಸಿಡಿದು ಒಡೆಯುವಂತಯಿತು.

ಲೋಕಕ್ಕೆ ಕೆಡುಕಾದೀತು ಎಂದು ಕೃಷ್ಣ ನಾಗಶಯ್ಯೆಯಿಂದಿಳಿದು ನಿಂತನು; ಕಂಸನು ಏನು ಮಾಡಬೇಕು ಈಗ ? ಹೊರಟು ಹೋಗುತ್ತಿದ್ದ ಕೃಷ್ಣನನ್ನು ಬಳಿಗೆ ಬರಮಾಡಿಕೊಂಡು ನಿನ್ನ ಶುರ್ಯಕ್ಕೆ ಮೆಚ್ಚಿದೆ; ನಾಳೆ ಬೆಳಾಗಾಗುವ ವೇಳೆಗೆ ನಾಗರಮಡುವಿನ ಸಾವಿರೆಸಳ ತಾವರೆ ಹೂವನ್ನುಕೊಯ್ದು ಈ ಬಸದಿಗೆ ಬರಬೇಕು ಎಂದನು. ಹೀಗಾದರೂ ಅವನು ಸತ್ತಾನು ಎನ್ನುವುದು ಅವನ ಆಸೆ. ಕೃಷ್ಣನ ಅಮೇಯಮಹಿಮೆ , ಅಲೌಕಿಕಸಾಮರ್ಥ ಇವನ್ನು ತಿಳಿಯಲಾರದ ಮಟ್ಟಿಗೆ ಅವನ ಬಗೆಗಣ್ಣು ಕುರುಡಾಗಿದ್ದಿತು. ಹೂವನ್ನು ತಂದು ದೇವರ ಶ್ರೀಪಾದಪದ್ಮದಲ್ಲಿ ಏರಿಸಿದರೆ, ನಿನ್ನನ್ನು ಆನೆಯೇರಿಸುತೇನೆ ಎಂದು ಬೇರೆ ಕೃಷ್ಣನಿಗೆ ಆಸೆ ಹುಟ್ಟಿಸಿದನು ಕೃಷ್ಣನದರೋ ಆಗಿಂದಾಗಲೆ ತವರೆಯನ್ನು ತರುವುದಾಗಿ ಮಾತುಕೊಟ್ಟು ಯಮುನೆಗೆ ತೆರಳಿದನು. ಮುಂದಿನ ವೃತ್ತಂತ ಕೃಷ್ಣನ ಕಾಳಿಯಮರ್ದನದ ವೃತ್ತಾಂತ. ಯಮುನಾನದಿಯ ಕಾಳಿಯ ಮಡು ವಿಷಾಗ್ನಿಯ ಬೀಡು , ಕಾಳಿಯ ನಾಗನ ನಿಶ್ವಾಸದ ಗಾಳಿಯಿಂದ ಯಮುನೆಯ ಆ ಮಡು ತೆಕ್ಕತೆಕ್ಕನೆ ಕುದಿದು ಉಕ್ಕಿತ್ತಿದ್ದಿತಂತೆ ಆ ಕಾಳಿಯ ಸರ್ಪನ ವಿಜೃಂಭಣೆಯೋ? ಅಲ್ಲಿ ಗಾಳಿ ಮೇಲೆ ಸಿಳಿಯುವಂತಿಲ್ಲ; ಈ ಮಡುವಿನೊಳಾಗೆ ಶಂಖಚೂಡ ಸೇರಿದ್ದರೆ ಗರುಡ ಅವನನ್ನು ಹಿಡಿಯುವುದು ಆಗುತ್ತಿತ್ತೇ? (ಇಲ್ಲಿ ನಾಗನಂದ ವಸ್ತುವನ್ನು ಕವಿ ನೆನೆದಿರುವಂತಿದೆ ) ಕಾಳಿಯನು ವಜ್ರಾಯುಧವನ್ನೇ ಗುಳಕ್ಕೆಂದು ನುಂಗಬಲ್ಲ ಲಯೋಗ್ರಜ್ವಾಲೆಯನ್ನೇ ಕಬಳಿಸಬಲ್ಲ ಮಹಾಕಾಳಿಯನ್ನೇ ತಿಂದು ತೇಗಬಲ್ಲ ದೇವತೆಗಳಾನ್ನೇ ಸೀಳಿ ಮುಕ್ಕಬಲ್ಲ . ಸಮುದ್ರದ ವಿಷ ಒಂದು ವಿಷವೇ? ತನು ಉಗುಳುವ ವಿಷವನ್ನು ಶಿವ ಬದುಕಲಿ, ನೋಡೋಣ ಎಂದು ಕಾಳಿಯ ಈ ಮೊದಲು ಹೇಳಿಕಳಿಸಿ ಬೂತಟ್ಟಿದ ಹಾವುಗಳನ್ನು ಈಶ್ವರ ತನ್ನ ಭೂಷಣವನ್ನಾಗಿ ಮಾಡಿಕೊಂಡುಬಿಟ್ಟ ಇಲ್ಲವಾದರೆ ಎಂದೋ ಈಶ್ವರಾನನ್ನು ಕಾಳಿಯ ಮುಗಿಸಿಬಿಡುತ್ತಿದ್ದ.

ಇಂಥ ಅತಿಶಯೋಕ್ತಿ ನೇ,ಮಿಚಂದ್ರನ ಕವಿತೆಯಲ್ಲಿ ಸಾಮಾನ್ಯ ಅದಿರಲಿ ಕೃಷ್ಣ ನಾಗಹ್ರದವನ್ನು ಕ್ರೀಡಾಸರೋವರವನ್ನು ಹುಗುವಂತೆ ಹೊಕ್ಕು " ಅಟಲೆ ಫಾಣಿ ಕಟಲೆ ಕೇಸರಂ ...... ಕಮಲ ಪುಷ್ಪವನ್ನು ಕಿತ್ತುಕೊಂಡನು. " ಪೊರ್ಕಟಿ ಕಮಳದಂತೆ ಜಗುನೆಯ ಸುಟೆಯೊಳ್ ಸೊಗಯಿಸುವ ಎಂದು ನೇಮಿಚಂದ್ರ ತಿಳಿಸುವಲ್ಲಿ . ಅವನ ಬಣ್ಣನೆಯಲ್ಲಿ ಕೃಷ್ಣ ವಿಷ್ಣವೇ ಅಗಿರುವನೆಂದು ವಿಶದ ವರುವುದು . ಹೂ ಕಿತ್ತು ಗೋಪರ ಕಯ್ಯಲ್ಲಿ ಕೊಟ್ಟು ಕಾಳಿಯನಿಗಾಗಿ ಕೃಷ್ಣಹುಡುಕಿದನು. ಕಾಳಿಂದಿಯನ ಮಡುವನ್ನು ತೋಲಿಂದ ತುಳುಕಾಡಿದನು; ಸ್ಥಊಲ ತರಂಗಾವಳಿಯನ್ನೇ ಕಾಲಿಯನೇಂದು ತಿಳಿದು ಬಡಿದನು. ಗೋಪಾಲಚೂಡಾಮಣಿ ಜೀವಂಬೆತ್ತ ಗಾರುತ್ಮ ತಮಣಿಯ ಹಾಗೆ ತನ್ನ ಅಂಗಪ್ರಭೆಯನ್ನು ಮಡುವಿನಲ್ಲಿ

ಚೆಲ್ಲಿದ . ಕಾಳಿಯನು ಲತೆ ಎಳೆಯ ಬಿದಿರನ್ನು ಹಬ್ಬುವ ಹಾಗೆ ಕೃಷ್ಣನನ್ನು ಅಪಾದಮುಕ್ತವಾಗಿ ಹೆಣೆದುಬಿಟ್ಟನು. ಫಣಾಹಸ್ತದಿಂದ ಕೃಷ್ಣನ ಮುಂದಲೆಗೆ ಬಡಿದನು. ಕೃಷ್ಣ ಅದನ್ನು ಸಹಿಸಿ ಗಳಗರ್ಜನೆ ಮಾಡಿದಾಗ ಅದರ ಹಿಡಿತ ಸಡಿಲಿತು. ಅದರ ಗಂಟಲನ್ನೊತ್ತಿದಾಗ ಅದು ಗಾಳಿಯಂ ಗರಳಾಮುಮನೋಳಾಗಾಗಿ ಕರಿ ಸತಿತ್ತು . ಆ ಸತ್ತ ಹಾವನ್ನೂ ಕಮಲದ ಹೂವನ್ನೂ ಕಮಲದ ಹೂವನ್ನೂ ಕೃಷ್ಣನು ಗೋಪಲಕರೆ ಕಯ್ಯಲ್ಲು ಕೊಟ್ಟು ಕಂಸನಲ್ಲಿಗೆ ಕಳಿಸಿ ತಾನು ಗೋಕುಲಕ್ಕೆ ಮರಳಿದನು. ಆಗ ಅವನಿಗೆ ಹೀಗೆ ಅಶರೀರವಾಕ್ಯ ಕೇಳಿ ಬಂದಿತು :

ಅಯನಯನಿಧಾನ ತೇಜೋ

ಮಯ ಕೆಂಡಮನೊಱಲೆ ಪತ್ತಲಾರ್ಕುಮೆ ಜಗತೀ

ಜಯಯೆನಿಪ ಕಂಸನೆಸಗುವ

ಕುಯಕಂ ಕೊಳ್ಳುಮೆ ಪ್ರರಾಕ್ರಮೋನ್ನತಂ ನಿನ್ನಂ ॥ (೮– ೫೧ )

ಇದನ್ನು ಕೇಳಿದಾಗ ಕೃಷ್ಣನಿಗೆ ಪೂತನ್ಯಾದಿಗಳ ದೆಸೆಯಿಂದಾದ ವಿಪತ್ತು ಮೊದಲಾಗಿ ಕಾಳಿಯನಾಗನ ವ್ಯತಿಕರದ ವರೆಗೆ ನಡೆದುದೆಲ್ಲ ಕಂಸನ ದುರ್ವ್ಯತ್ತಗಳೆಂದು ವಿಶದವಾಯಿತು. ಹಲವು ಮುನಿಸುಗಳನ್ನೇಲ್ಲ ಒಂದೇ ಮುನಿಸು ಮಾಡಿ ತಕ್ಕ ಸಮಯಕ್ಕೆ ಕೃಷ್ಣ ಕಾದನು.

ಇತ್ತ ಕಂಸನಿಗಾದರೋ ಕೃಷ್ಣ ಅಟ್ಟಿದ ಹಾವನ್ನೂ ಹೂವನ್ನೂ ಕಂಡು ಎದೆ ಧಿಗಿಲ್ಲೆಂದಿತು. ಅವನು " ಪಾವಡರ್ದ ಪಂದೆ ಯಂತಾದನು. ಹೊಸಹೂರವನ್ನು ಹೂಡಲು ಸನ್ನದ್ಧನಾದನು " ಹಗೆ ಬಲಯತನಾದ ಕಾಳಿಯನಿಗೆ ಸಹ ಇವನನ್ನು ಕೊಲ್ಲುವುದಾಗಲಿಲ್ಲ . ಕೊಲ್ಲಲ್ಲುಬಾರದ ಹಗೆಯನ್ನು ಗೆಲ್ಲಲ್ಲೂ ಬಾರದ ಎಂದೇನಾದರೂ ಉಂಟೇ ? ಎಂದುಕೊಂಡು ಮಂತ್ರಶಾಲೆಗೆ ತೆರಳಿ ಮಂತ್ರಿಗಳನ್ನು ಬರಮಾಡಿಕೊಂಡ.

ಮುಂದಿನ ವೃತ್ತಂತವೇ ಕುವಲಯಪೀಡಗಜದ ಸಂಹನನ ವೃತ್ತಂತ . "ಹಗೆ ಬಲಶಾಲಿಯಾದ, ಹಲವು ಬಾಧೆಗಳನ್ನು ಗೆದ್ದ ಮುಚ್ಚುಮರೆಯೇನು ಮಲ್ಲಗಾಳೆಗಮನ್ನು ಮಾಡಿಸಿ ಶತ್ರುವನ್ನು ಮುಗಿಸಬೇಕು ಎಂದು ಮಂತ್ರಿಗಳು ಕಂಸನಿಗೆ ಸಲಗೆ ಮಾಡಿದರು. ಅಲ್ಲದೆ ನೀಚದೊರೆಗೆ ತಕ್ಕ ಕಡುನೀಚ ಮಂತ್ರಿಗಳು ಅವರು ಅವರ ಸಲಹೆಯಿದು:

ಜಗಮೆಲ್ಲಮಱಿಯೆ ತಂಗೆಯ

ಮಗನನದೆಂತಿಱಿವೆಮೆಂಬೋಡನುಜರ್ತನುಜಾ

ದಿಗಳಲ್ಲದೆ ಭೂಪಾಳಾರ

ಪಗೆವರ್ ಮತ್ತೊಂದು ದೀವದಿಂ ಬಂದಪರೇ ॥

ಮೊದಲೊಲ್ ಮಿಲ್ಲನೆ ಮಲ್ಲರಿಂ ಮುಳಿಸು ಮಲ್ಲರ್ ಸೋಲ್ತಾಡಾ ಬೇಗದೊಳ್

ಮದವದ್ದಂತಿಯಿನೊಕ್ಕಲಿಕ್ಕಿಸು ಮದೇಭವ್ರಾತಮುಂ ಸೋಲ್ತೊಡೊ

ಟ್ಟಿದ ಕಿರ್ಚಿರ್ಪವೊಲಿರ್ದ ಖಟ್ಗಿಬಲಮಂ ಪೇಟಿ ಖಟ್ಗಿಗಳ್ ಸೋಲ್ತೋಡೋ

ವದೆ ನೀನೊರ್ವನೆ ಕಾದಿ ಕೊಲ್ ಪಗೆವನಂ ಕಾಳಾಂತಕಂ ಕೊಲ್ವವೋಲ್ ॥ ( ೮ ೫೫)

ಎಂತಹ ಶ್ರೇಯಸ್ಕರವಾದ ಸಲಹೆ ! ಕಂಸ ಕೂಡಲೇ ಇದೆ ಮಂತ್ರ ಎಂದು ನಿಶ್ಚಯಿಸಿದನಂತೆ. ಆ ಪ್ರಸ್ತವಕ್ಕೆ ಹೇಳಿ ಕರಸಿದ್ ಹಾಗೆ ಅರಮನೆಯ ಅರೊಹಕನು ಕಂಸನಿಗೆ ಕಾನಿಸಿಕೊಂಡನು. ತಾನು ಆರೋಹಹಕನಾಗಿರುವ ಕುಮಲಯಾಪೀಡಗಜದ ಅಗ್ಗಳಿಕೆಯನ್ನು ಉಗ್ಗಡಿಸಿದನು. ಈ ಉಗ್ಗಡಣೆ “ ಕರಿ ಕೊಲೆಯೊಳ್ ಜವಂಗೆ ಪುದು ಕಾಯ್ಪೊನೊಲ್ ಅಗ್ನಿಗೆ ದಾಯಿಗಂ ಹೀಗೆ ಉತ್ಪ್ರೇಕ್ಷೆಯಲ್ಲಿ ಸಾರುತ್ತದೆ. ಕಂಸನಿಗೆ ಮನದ ವಿಷಾದ ಸ್ವಲ್ಪ ಚದುರಿದಂತಾಯಿತು. “ ಮಧುಸೂದನನಂ ಮುನ್ನ ಕೊಲ್ವೆನಿನು ಕೊಂದ್ಪೆನ್ ಎಂದು ತೊಡೆಯಂ ಪೊಯ್ದು ಚಾಣೂರ ಮಲ್ಲನನ್ನು ಕರಸಿಕೊಳ್ಳಲು ಜನರನ್ನು ಕಳಿಸಿದನು, ಚಣೂರ ಮಲ್ಲ ಬರುವುದರೊಳಗೆ ಕುಮಲಯಾಪೀಡ ಗಜದ ‘ ಪೂರ್ವಾಂತರವನ್ನು ನಿಷಾದಿಗೆ ನಿರೂಪಿಸಿದನು. ಈ ನಿರೂಪಣೆಯಿಂದ ಕೈಟಭಾರನೆಂಬ ದಾನವನೇ ಕುವಲಯಪೀಡ ಗಜವಾಗಿ ತನ್ನ ಸೇವೆಯಲ್ಲಿರುತ್ತಿರುವುದು ನಮಗೆ ತಿಳಿಯುತ್ತದೆ ಚಾಣೂರಮಲ್ಲನು ವ್ರುವ ವರೆಗೆ ಸಾಗಿದ ಈ ಪೂರ್ವಕಥಾಲಾಪ ನಾಟಕದ ದೃಶ್ಯಯೋಜನೆಗೆ ಸಮುಚಿತವಾಗಿ ಹೊಂದಿಕೊಳ್ಳುವುದು ಮೆಚ್ಚತಕ್ಕದ್ದಾಗಿದೆ. ಈ ಸಂಬಂಧದ ಗದ್ಯದಲ್ಲಿ ಕವಿ ಹೆಸರೆತ್ತುವಾಗ ‘ ಮಧುಸೂದನನೆಂದು ಏಕೆ ಹೆಳಿದನೋ ತಿಳಿಯದು. ಪದದ ಬಳಕೆಯಲ್ಲಿ ಔಚಿತ್ಯ ಕೆಟ್ಟಿದೆ ಎನ್ನಬೇಕು.

ಕಂಸನು ಮಾವುತನನ್ನು ಕರೆದು ಅವನ ಕಿವಿಯಲ್ಲಿ “ ನಾಳೆ ನೀನೂ ನಿನ್ನಾನೆಯೂ ಪುರಗೋಪುರದೆಡೆ ಸಿದ್ಧವಾಗಿದ್ದು ಪುರಪ್ರವೇಶಮಾಡುವ ನಂದನ ಮಗನನ್ನು ಯಮಪುರಕ್ಕೆ ಕಳಿಸಿ ಎಂದು ರಹಸ್ಯವಾಡಿದನು. ಅವನು ಹಾಗೆ ತೆರಳುತ್ತಿದ್ದಂತೆ ಚಾಣೂರಮಲ್ಲನು ಹೀಗೆ ಕಂಸನೆದುರು ಕಏಬದ್ಧನಾಗಿ ನಿಂತನು. ಭುಜಾಸ್ಫಾಲನೆ ಮಾಡಿಕೊಂಡು ‘ಏನಪ್ಪಣೆ ಎಂದನು. ಕಂಸ ಹೀಗೆ ಆಜ್ಞಾಪಿಸಿದ :

ಮೆಚ್ಚುಂಟು ನಾಳೆ ನಿನ್ನುಳ್

ಮಚ್ಚರಿಸುವ ನಂದಸುತನ ಮೂಗಿಂ ಬಾಯಿಂ

ದುಚ್ಚಳಿಸೆ ರುಧಿರಮೆನಗಾ

ದುಚ್ಚಗಮಂ ಮುಱಿವೊಡೊತ್ತಿ ಮುಱಿ ಚಾಣೂರಾ ॥

ಚಾಣೂರನಿಗೆ ಈ ಮಾತಿನಿಂದ ಕೋಪವೇ ಬಂತು ಕ್ರೋಧವನ್ನು ಆತ ಬಹು ಸಮರ್ಥವಾಗಿ ಕಂಸನಿಗೆ ಹೀಗೆ ನಿವೇದಿಸಿದನು :

ಕ್ಷೋಣಿಪ ನೀನೀ ಮಾತಂ

ಮಾಣಕ್ಯಟ ಕೀಡೆಯಂ ಕಿಮ್ಮುಟ್ಟಿವುದಕ್ಕೀ

ಚಾಣೂರನೇಕೆ ಮುಳಿದಾಂ

ಚ್ಞೊಣಿಸಿದೊಡೆ ಕೃಷ್ಣನೆಂಬ ಮಾನಸನೊಳನೇ ॥

ದೆಸೆಯಂ ನುಂಗೇಂಬುದೇಕಾಗಸಮನುಡುಗಿ  ಕಟ್ಟೆಂಬುದೇಕರ್ಕನಂ ನೀಂ

ಪೊಸೆದಿಡಾಡೆಂಬುದೇಕಾ ದಿಗೆಭದಿಡೆನೆ ಪೋರೆಂಬುದೇಕಿನ್ಮನೇಮ್ಮೀ

ಪಸವಂ ಕಾದುಂಬು ಪಾಲ್ವಲ್ಗಳ ಪಸುಳೆಯನಿಕ್ಕೆಂದು ಬಾಳರ್ಗೆ ಪೇೞ್ವೀ

ಬೆಸನಂ ಚಾನೂರಮಲ್ಲಂಗೆನಗೆ ಬೆಸಸಲೇಂ ತಕ್ಕುದೇ ಕಂಸರಾಜಾ ॥

ಭಾವಿಪೊಡಾಂ ಜಟ್ಟಿಯುವಂ,

ಗೋವಳನೆಂದುಂದು ದೇವ ಪೋರ್ತದೊಳವನೆ

ಜ್ಞಾನ್ನಾವೆಡೆಗೆ ವರ್ಪನೆನಗಂ

ಘೇವಕಿಯ ಸುತಂಗಮಜಗಜಾಂತರಮಲ್ತೇ ॥

ಅದೊಂಡಂ ದೇವರಪ್ರಾಯವನಱಿದೆಂ ದ್ರೋಹರನಾನೆಕ್ಕುವುದು ತಕ್ಕುದಲ್ಲದೆ ತಗದೆನಲಾಗ ; ನಾಳೆ ದೇವಕಿಯಕ್ಕೆಯನಕ್ಕಡದೊಳೆ ದೇವರ ಕಿವಿಗೆಯ್ದಿಸುವೆನ್.

ಇಷ್ಟು ಹೇಳಿದಲ್ಲದೆ , ಈವರೆಗೆ ಕೃಷ್ಣ ನುಂಗಿ ನೋಣೆದ ಎಲ್ಲರನ್ನೂ ಅವನ ಹೊಟ್ಟೆಯಿಂದ ತಾನು ತೆಗೆಯದಿದ್ದರೆ, ತನ್ನ ಅನ್ನವನ್ನು ಅವನು ಕಿತ್ತುಕೊಳ್ಳಬಹುದೆಂದೂ ಉತ್ಸಾಹದ ಮಾತಾಡಿದನು.

ಚಾಣೂರ ಅತ್ತ ಹೋಗುತ್ತಲೂ ಇತ್ತ ಕಂಸ ಗೃಹಮಹತ್ತರನ್ನನ್ನು ಕರೆಸಿಕೊಂಡು  ಮಾರನೆಯ ದಿನ ಮಲ್ಲಗಾಳಗಕ್ಕೆ ಅಖಾಡವನ್ನು ಸಜ್ಜುಗೋಳಿಸುವ್ಮ್ತೆ ಅಪ್ಪಣೆ ಮಾಡಿದನು. ಆ ಮುಂದೆ ಮಲ್ಲರಂಗ ಸಿದ್ಧವಾಯಿತು. ಎನ್ನುವುದನ್ನು ಕವಿ ದೊಡ್ಡ ದೊಡ್ಡ ಮತುಗಳ ಚಮತ್ಕಾರದಿಂದ (೮–೬೩,೬೪) ಬಣ್ಣಿಸಿದ್ದಾನೆ. ಇಂಥ ಬಣ್ಣನೆ ನೇಮಿಚಂದ್ರನ ದುರ್ಬಲ್ಯದ ಸ್ಥಾನ  ಎನ್ನುವುದು ನಮಗೆ ತಿಳಿದಿದೆ. ಅದರೆ

ಮುಂದಿನ ವಚನ ಮತ್ತೆ ದೇಸಿಯ ಸೊಬಗಿಗೆ ಮರಳಿದೆ. ಹೀಗಿದ್ದೂ " ಗರುಡನ ಬಾರಿಗೆ ವಧ್ಯಶಿಕೆಯನ್ನೇಱುವ ನಾಗಕುಮಾರನಂತೆ ವಿಷಮುಖನಪ್ಪ ಕಂಸಂ ಅಖಾಡದ ಜಗಲಿಯ ಮೇಲೆ ಬಂದು ಕ್ಷುಳಿತನೆಂದು ಹೇಳಿರುವಲ್ಲಿ ಯೋಜಿಸಿರುವ ಉಪಮೆ ಮೆಚ್ಚುತಕ್ಕದ್ದಲ್ಲ. ನೀಚ ಕಂಸನನ್ನು ನಿರಪರಾಧಿ ನಗಕುಮಾರನನ್ನೂ ಹೋಲಿಸುವುದರಲ್ಲಿ ಏನು ಔಚಿತ್ಯವಿದೆ ? ಕಂಸನ ಜೊತೆಯಲ್ಲಿ ನೆತ್ತರ ಪಾನಗೋಷ್ಠಿಗಾತನ ಬಟಿಸಲ್ಪಯೋಗಿನಿಯರಂತೆ ಅಂಗನಾಜನವೂ ಬಂದು ಕೂಡಿತು ಎಂದು ಹೇಳಿರುವುದರ ಆಶಯ ಚಿಂತನೀಯ ಕಂಸನೊಡನೆ  ಚೌಪಳಿಯನ್ನೇರಿದವರಲ್ಲಿ ದಂಡನಾಥ ಮಂಡಲಿಕಾದಿಗಳೆಲ್ಲ ಇದ್ದರೆನ್ನುವುಡು ಸರಿ; ಕೃಷ್ಣ–ಚಾಣೂರಮಲ್ಲರ ಮಲ್ಲಗಾಳೆಗವನ್ನು ನೋಡಲು ಸಾವಿರ ಕಣ್ಣಿನ ಇಂದ್ರನೊಂದಿಗೆ ದೊಡ್ಡ ದನಿಯಲ್ಲಿ ಕೊಲಾಹಲ ಮಾಡುವ ನಾರದನೂ ಸೇರಿದ್ದನೆನ್ನುವುದು ಸ್ವಾರಸ್ಯಕವಾಗಿದೆ.

ಚಾಣೂರಮಲ್ಲನ ಮಲ್ಲವೇಷ ಹಾಗೂ ಸಾಮರ್ಥ್ಯದ ಬಣ್ಣನೆ ಭವ್ಯತೆಯ ಕಡೆಗೆ ಕಾಯದ ಉಳಿದ ಭಾಗ ಸಾಗಲಿರುವುದರ ಮುನ್ಸೂಚನೆಯಾಗಿದೆ.

" ಅನ್ನೆಗಂ ನೆಲಕ್ಕಮಾಗಸಕ್ಕಂ ಕೀಲ್ಗೊಂಡಂತಪ್ಪ್ ದೀರ್ಘಾಕಾರಮುಮೇಟಿಂಟಾನೆಯ್ಯೊಂದು ಮಾಡಿದಂತಪ್ಪ ತೋರಮುಂ ಎರಡು ತೊಡೆಯತೋಱ್ ತೆಮಳ್ದಿ ಬಿಗಿದುಟ್ಟ ನೇತ್ರಾವಳಿಯ ಚಲ್ಲನಮುಂ ....

ಹೀಗೆ ಸಾಗುವಗದ್ಯಭಾಗ ವೀರ್ಯವತ್ತಾದ ಶೈಲಿಯಲ್ಲಿ ಸೊಗಸಾಗಿ ಅಕ್ತಿಯ ಆಕೃತಿಯನ್ನು ಕಣ್ಣೆದುರು ಕಟ್ಟಿನಿಲ್ಲಿಸುತ್ತದೆ. ಇಂತಹ ಮಲ್ಲನ ಬಳಿವಿಡಿದು ಐರಾವತದ ಹಿಂದೆ ಇತರ ಆನೆಗಳು ಅನುಸರಿಸಿ ಬರುವಂತೆ, ಮುಶ್ಟಿಕ ಮೊದಲಾದ ಇತರ ಮಲ್ಲಾರು ಸಾಲುಗಟ್ಟಿ ಬಂದು; ಬಂದವರು " ಕಡಿತಮಂ ಬಳಸಿಕೊಂಡಿರ್ಪ ಜೂದುಗಾಱರಂತೆ  ಅಖಾಡವನ್ನು ಬಳಸಿ ಕುಳಿತರು. ಮಲ್ಲಗಳಾವನ್ನು ಸುತ್ತಿ ಸಾಯುಧರಾಗಿ ಕೂರಾಳುಗಳು ನಿಂತರು; ತುರಗದವೂ ಗಜಸೇನಾವೂ ನಿಂತವು, ಆದರೆ ಕಂಸನ ಸಂಚುತಿಲಿದು ಬಲದೇವ ವಸುದೇವರು ತಾವೂ ಪ್ರತ್ಯೇಕವಾಗಿ ಚತುರಂಗಬಲದಿಂದ ಕೂಡಿಕೊಂಡು, ಸಿಯುದ್ದರಂಗದ ಪಕ್ಕದಲ್ಲೇ ಯುದ್ಧಸನ್ನದ್ಧರಾಗಿ ನಿಂತರು.

ಮುಂದೆ ಕಥೆಗೆ ವೇಗದ ಗತಿ ಸ,ಂಘಟಿಸಿದೆ; ನಾಟಕೀಯತೆಯ  ಸೊಗಸು ಬೆಳೆದಿದೆ. ಇದಕ್ಕೆ ಅನುಗುಣವಾಗಿ ಶೈಲಿಯಲ್ಲಿ ದೇಶೀಯತೆ ಸರಳುಗಳು ಚೇತೋಹಾರಿಯಾಗಿ ಕಂಡು ಬಂದಿವೆ. ಆ ಭಾಗಗಳಾನ್ನು ಮುಂದೆ ನೋಡಬಹುದು

ಕಂಸ ಒಬ್ಬ ಪಡಿಯರನನ್ನು ಕರೆದು ಕಿವಿಯಲ್ಲಿ ಏನೋ ಮಿಸುಗುಟ್ಟಿದನಂತೆ. ಅವನು 'ಹಾಗೇ ಆಗಲಿ ಎಂದು ಹೇಳಿ ನಂದಗೋಕುಲಕ್ಕೆ ಹೊರಟನಂತೆ. ನಾಟಕೀಯತೆ ಇಲ್ಲಿಯ ಜೀವಾಳ ಎನ್ನುವುದು ಸುಲಭವಾಗಿ ಈ ಬಗೆಯ ರಚನೆಯಿಂದ ತಿಳಿಯುತ್ತದೆ. ಯಶೋದೆಯನ್ನುಕಂಡು ಅ ಪಡಿಯರನ್ನು " ನಿನ್ನ ಮಗನೆಲ್ಲಿಗಾದೊಡಂ ಕಾಳೆಗವೆಂದೊಡೆ ಪೂಣೆಗನಾಗಿ ಪಱಿವಱಿಯುನಪ್ಪನ್ ವ್ಯಸನಮುಂ ಬೇಸನಮು (ಮು) ಳ್ಳೊಡೆ ಬಂದು ಚಾಣೂರ ಮಲ್ಲನೋಳ್ ಮಲ್ಲವೋರ್ದು ಪರ್ವಕ್ಕೆ ನೆರೆದರಸುಮಕ್ಕಳ ಕಣ್ಗೆ ಪರ್ವಮಂ ಮಟ್ಕೆ ಎಂಬುದಾಗಿ ಕಂಸ ಹೇಳಿರುವನೆಂದು ತಿಳಿಸಿದ. ಮಗುವಾದ ಕೃಷ್ಣನೆಲ್ಲಿ ಮಹಾಮಲ್ಲನಾದ ಚಾಣೂರನೆಲ್ಲಿ ? ಇದೊ,ಂದು ಜೋಡಿಯೇ? ಕಂಸನನ್ನು ಸಾವು ಬೆನ್ನುಹತ್ತಿತ್ತು ; ಆದರಿಂದ ಇಂಥ ಪ್ರಯತ್ನಗಳಾನ್ನು ನಿರ್ಲಜ್ಜೆಯಿಂದ ನಡಸುತ್ತಲೇ ಇದ್ದನು.

'ಕಂಸ ಕಳಿಸಿದ್ದು ಎಂದು ತಿವುರು ತಿಲಕಗಳನ್ನು ಕೊಟ್ಟು ಅವನು ಹಚ್ಚಿಕೊಂಡು ಬರಿವಂತೆ ಹೇಳಿ " ಕೊಳ್ಳಿಮ್, ಆತನೆಲ್ಲಿದನ್ ಎಂದು ಬೇರೆ ಕೇಳಿದ ಯಶೋದೆಮುಗುಳ್ನಗೆ ನಕ್ಕು " ಅಯ್ಯಾ ನನ್ನ ಮಗ ಈ ಮೊದಲು ಯಾವ ತಿವುರು ತಿಲಕಗಳನ್ನು ಇಟ್ಟುಕೊಂಡು ಶಕಟ ಪುತನಿ ಕಾಳಿಯ ನಾಗ, ಯಮಳಾರ್ಜುನರುಂ ನರಕ (ಆಧಾರ?) ಇವರನ್ನು ನಿಗ್ರಹಿಸಿದ ? ನಿಮ್ಮ ಚಾನೂರ ಇವರಿಗಿಂತ ಬಲಿಷ್ಠನೇ? ಎಂದು ಪ್ರಶ್ನಿಸಿದಳು. ಅಲ್ಲಹೆ " ನಿಜದಿಂ ಕುರ್ಪುಳ್ಳನುಮಂ ಕತ್ತರಿವಾನಿಯುಮಂ ಮಸೆಯಲೇಕೆ ? ಸಿಂಗಮಾನೆಯಂ ಮುಱಿವಲ್ಲಿ ಗಾವಭ್ಯಾಸಮಂ ಮಾಡಿದುದು? ಮುರಾಂತಕನಂತಕನುಂ ಕೊಲ್ಲುವದನಿನ್ನು ಕಲ್ಪುಪರೆ? ಕೇಳಿಮೆನ್ನ ಮಗಂ ನಿರೋಳ್ನಾನಂ ಬಿಸಿಲೋಳ್ಬಾಡಂಬೆಂಕಿಯೊಳ್ಬೇಯಂ ಜವನ ಕೇಯ್ಯೋಳ್ ಸಯಂ ಏನಂ ಬೇಡ ಒದಗೊಂಡು ಪೋಗಿಮ್ ಎಂದು ಧೈರ್ಯವಾಗಿ ಹಂಗಿಸಿದಂತೆ ಹೇಳಿದಳುಮುಂದುವರಿಃಡು " ಅಬ್ಬಾ ಪಸಿದೆನ್ ಎಂದು ಬಂದ ಕೃಷ್ಣನಿಗೆ " ಅಪ್ಪ್ ಮೊಸರೂ ಬಾಡಿಸಿದ ಮೊಸರೂ ಸಿದ್ಧವಾಗಿದೆ. ಇದನ್ನು ಲಂಚವೊಪ್ಪಿಸುತ್ತಾನೆ. ಆದರೆ ಮೊದಲು ಹೋಗಿ ಚಾನೂರ ,ಮಲ್ಲನನು ತಿರಿಸಿ ಆಮೆಲೆ ಹಸಿವು ತೀರಿಸಿಕೋ. ಅಷ್ಟು ಮಾಡಿದರೆ ನಿನ್ನ ಬಲವೂ ಹಸಿವೂ ಎರಡು ಚುರುಕಾಗುತ್ತವೆ ಎಂದಳು . ಕೃಷ್ಣ ಕೂಡಲೇ " ಅಕ್ಕಟಾ ಸಗ್ಗಮೆ ಕಾಳೆಗಮುಳ್ಳೊಡೆ ಕೂಱ್ವುದು ಎಂದು ಹಿಗ್ಗಿ, ಆ ಪಡಿಯರನ್ನು ಅತ್ತ ಕಲಿಸಿ ಇತ್ತ ಜೊತೆಯ ಗೋಪರನ್ನು ಮಲ್ಲವೇಷದಿಂದ ಸಿದ್ಧವಾಗಲು ತಿಳಿಸಿ ತಾಯಿಗೆ ವಂದಿಸಿ , ಹರಕೆ ಪಡೆದು ಮಧುರೆಗೆ ವಾದ್ಯಗಳಾಮೊಳಗಿನಲ್ಲಿ ಪ್ರಯಾಣ ಬೆಳೆಸಿದನು.

ಕೃಷ್ಣ ಮಥ್ಹುರೆಯತ್ತ ಗೋಪಬಾಲಕ ಸಹಿತನಾಗಿ ಪ್ರಯಾಣ ಮಾಡುತ್ತಿದ್ದಾಗ ಒಂದು ಘಟನೆ ನಡೆಯಿತು. ಕಂಸನಿಂದ ಉಪಕೃತನಾಗಿ ಅವನ ಅಪ್ಪನೆಯಂತೆ ಮದುವೆಂಬ ದಾನವನು ಅಗಸನ ವೇಷ ಧರಿಸಿ ,ಮಧುರೆಯ ಒಂದು ಗೊತ್ತಾದ ಸ್ಥಳದಲ್ಲಿ ಕೃಷ್ಣನು ಹಾದು ಹೋಗುವಾಗ ಅವನನ್ನು ಅರಸರು ಬಟ್ಟೆ ಒಗೆಯುವ ಹಾಗೆ ಸಣೆದು ಕೊಲ್ಲಬೇಕು ಎಂದು ಸಂಚು ಹಾಕಿಹೊಂಡಿದ್ದ ಅವನ ನಿರೀಕ್ಷಿಸಿದಂತೆ ಕೃಷ್ಣನೂ ಗೊಲ್ಲರೂ ಅಲ್ಲಿಗೆ ಬಂದರು ಮಡಿವಳನ ಮುಂದಿದ್ದ ಮಡಿಯನ್ನೂ ತನ್ನ ವಡಗೋವಳಿಗರುಟ್ಟ ಮೈಲಿಗೆ ಬಟ್ಟೆಗಳನ್ನೂ ನೋಡಿ ಮಡಿವಳನಿಂದಿಗೆ ಕೃಷ್ಣ ತನೇ ಜಗಳ ತೆಗೆದ ತಮಗೆ ಉಡಲು ಮಡಿಬಟ್ಟೆ ಕೋಡುವುದೆಂದು ಕೇಳಿದ ಅದಕ್ಕೆ ಆ ರಜಕ " ಜಗಳಂ ಜಕ್ಕುಲಿಸಿದಂತೆ ನಕು ಈ ಬಟ್ಟೆಗಳಾನ್ನು ಕಂಸ ಉಡುತ್ತಾನೆ ಇಲ್ಲವೆ ಅವನ ಬೀಳುಡೆಯವರು ಉಡುತ್ತಾರೆ; ಎಡೆಯ ಕಡೆಯ ಬಡವರು ಉಡುವ ಹಾಗಿಲ್ಲ ಎಂದು ಹಂಗಿಸಿದನು.

ಮುಂದೆ ಕೃಷ್ಣನಿಗೂ ರಜಕನಿಗೂ ಚಕಮಕಿ ಸಾಗುತ್ತದೆ. ರಜಕ " ಈ ಬಣ್ಣ ಗೆಡದ ದೊರೆಗಳುಡುವಬಟ್ಟೆಗಳಾನು ಉಡಬೇಕೆಂದು ಬಯಸಿದ ಅಣ್ಣನ ಸೂಸಲಲ್ಲಿ ಕಣ್ಣುಂಟೇ? ಆ ನೋಸಲುಗಣ್ಣಾತನೂ ಹಾಗೆ ಉಡಳು ಧೈರ್ಯ ಮಾಡಲಾರ ಆ ಧೈರ್ಯವಿದ್ದರೆ ಅವನೇಕೆ ತೊವಲು ಹೊದೆಯುತ್ತಿದ್ದ? ಎಂದು ಸವಾಲು ಎಸೆದ ಕೃಷ್ಣ " ಮಾಳಾಪ್ರಪಂಚ ಇಲ್ಲಿ ಬೇಡ ಎಂದವನೇ ಒತ್ತಾಯದಿಂದ ಅತನ ಕೈಯ ಬಟ್ಟೆಯನ್ನೆ ಸೆಳೇದುಕೊಂಡ ಇವನಿಗೂ ರೇಗಿತು. ಇವನು ಯಾರೋ ಸಹಸಿ ಇವನ ಉಟ್ಟುದನ್ನು ಮಿದಲು ಸೆಳೆದುಕೊಂಡು , ಆಮೇಲೆ ಇವನಿಗೆ ದೇಸೆ ಕಾಸೆಗಳಾನ್ನು ಉಡಿಸೋಣ ಎಂದು ಸಂಕಲ್ಪಿಸಿ " ಇವಂ ಮುಟ್ಟಿದೊಡೆ ಕಂಸದೇವನಾಣೆ ಎಂದು ಆಣೆಯಿಟ್ಟ .ಅಕೃಷ್ಣ 'ನೀಂ ಕುಡುದೊಡೆ ಕಂಸದೇವಣೆ ಎಂದು ಅವನ ದೊರೆಯ ಹೆಸರಿನ ಮೇಲೆಯೇ ಪ್ರತಿಯಾಣೆಯನ್ನು ಹಾಕಿದ ಆಗ ರಜಕನು " ಅಂಬರಂಬರಂ ತುಂಬುರುಗೊಳ್ಳಿಯಂತೆ ಸಿಡಿದು , ಇಂತಪ್ಪ ಸಿತಗನನೆಲ್ಲಿಯಂ ಕಾನೆನಾಣೆಗೆ ಮಾಱಾಣೆಯಿಟ್ಟುಪಂ ಎ,ಂದುಕೊಂಡು, ನಾಯ ಬಾಯ ಸೀರೆಯಪ್ಪೊಡೆ ಸೀರೆಯಂತೆ ಸಾರ್ ಎಂದು ಮಡಿವಸ್ತ್ರಗಳಾನ್ನು ಕೃಷ್ಣನ ಮುಂದೆ ಈಡಾಡಿ " ಮುಟ್ಟಿದರೆ ಸಿಗಿಯುತ್ತೇನೆ ಎಂದು ಬೇರೆ ಹೆದರಿಸಿದನು. ಆಗ ಕೃಷ್ಣಸಣ್ಣಗೆ ನಕ್ಕು ಮಡಿದ್ದು ಹೀಗೆ :

ಇದು ಸತ್ಯಮೊಗವ ಕೆಯ್ಯಾ

ವುದು ತೋಱೆಂದಸಗನೆರೆಡು ಕೆಯ್ಯಂ ಮುಱಿದಿ

ಕಿದನೂರ ಸೀರೆಗಸಗಂ

ತದೆವಡೆದನೆನಿಪ್ಪ ನಾಡ ನುಡಿ ಪರೆವಿನೆಗಂ ॥

ಅಲ್ಲಿಗೆರಜಕನ ಕಥೆ ಮುಗಿಯಿತು. ಗೊಲ್ಲರಿಗೆ ಅಲ್ಲಿಯ ಮಡಿವರ್ಗವನ್ನು ಹಂಚಿಕೊಟ್ಟು ಕೃಷ್ಣ ಈಗ ಮಧುರೆಯತ್ತ ಸಾಗಿದ.

ಈ ಪುಟ್ಟ ರಜಕದರ್ಪದಲನದ ಪ್ರಸಂಗ ದೇಶೀಯ ನುಡಿಗಾರಿಕೆ, ಸಂವಾದಗುಣದಿಂದ ಸುರಸವಾಗಿದೆ. ಮುಂದಿನದು ಪುರಗೋಪುರದ ಬಳಿಯಲ್ಲಿ ಕುವಲಯಾಮೀಡಗಜದ ಸಂಹಾರ ಕಾರ್ಯದ ಉತ್ತರಭಾಗ . ಕೃಷ್ಣನು ಪುರಮಹಾದ್ವಾರದ ಹತ್ತಿರ ಬರುತ್ತಿದ್ದ ಹಗೆಯೇ ಕೃಷ್ಣನ ಕೊಲೆಗೆಂದೇ ಸಿದ್ದವಾಗಿ ನಿಂತಿದ್ದ ಕುಮಲಯಪೀಡಗಜ ಅವನ ಮೇಲೆ ನುಗ್ಗಿ ಬಂತು. ಈ ಹಿಂದೆ ಕೃಷ್ಣನ್ ಹತೆಗೆಂದು ಬೇರೆಬೇರೆಯಗಿ ಬಂದ ವಿಪತ್ಕಾರಕಶಕ್ತಿಗಳು ಈಗ ಒಗ್ಗೂಡಿ ಬಂದವೋ ಎನ್ನುವಂತೆ ಅದು ಧಾವಿಸಿ ಬಂತು. ಅದರ ಶಕ್ತಿಯನ್ನು ನಾಲ್ಕು ಪದ್ಯಗಳಲ್ಲಿ ಬಹು ಸಮರ್ಥವಾಗಿ ಕವಿ ವರ್ಣಿಸಿದ್ದಾನೆ ನಾಲ್ಕನೆಯ ಈ ಪದುಅವನ್ನಿಲ್ಲಿ ಉದ್ಧರಿಸಬಹುದು :

ಅಂಗಕ್ಕೆಯ್ದುದು ಗಗನಂ

ತುಂಗರದಕ್ಕೆಯ್ದುದಿಱೆಯಲಗನಿಕರಂ ಧೀಂ

ಕಿಂಗೆಯ್ದುದು ಧಾರಿಣಿ ಮುಳಿ ಸಿಂಗೆಯ್ದುದು ಮೂಱು ಲೋಕಮಾ ಮದಗಜದಾ ॥ ( ೮-೮೪)

ಮುಂದು ಬರುವ ಕೃಷ್ಣ-ಕವಲಯಾಪೀಡಗಜ ಮುಖಾಮುಖಿಯ ಚಿತ್ರ ಸತ್ವ್ವಯುತವಾದುದು. ಆನೆಯ ಕ್ರೌರ್ಯ , ಬಲರಾಮ (ನಿರೂಪಣೆಯಲ್ಲಿ ಈತನ ವಿಚಾರ ಈ ಮೊದಲು ಸ್ಪಷ್ಟವಾಗಿ ಬಂದಿಲ್ಲ) ಕೃಷ್ಣರು ಆನೆಯ ಎದುರು ಬರುವ ಬಗ್ಗೆ ಜನರ ಅತಂಕ ಮತ್ತು ಪ್ರತಿಕ್ರಿಯೆ ಕೃಷ್ಣ ಆನೆಯನ್ನಿದಿರಿಸಿದ ಪರಿ ಇವೆಲ್ಲ ಸುಂದರವಾಗಿ ವರ್ಣಿತವಾಗಿವೆ. ಕ್ರೋಧಿನಿಯೆಂಬ ಐದನೆಯ ಮದದ ಉದ್ರೇಕದಲ್ಲಿ ಆನೆ ನುಗ್ಗಿತು ,ಭೀಕರವಾಗಿ ಹರಿಕಾರರು ' ಏಳಗೋರ್ವಂ ಕೋರ್ವಿಘ ಗೋವಳಿಗರ ಗರವಂ ಕಳೆದಾನೆ ತಾನೆ ತೊಲಸಿಡಿದಪುದ ನಮ್ಮಚ್ಚಿಗೆಮೇಕೆ ಎಂದು ನಿಸ್ಸಹಯಕರೂ ವಿಸ್ಮಿತರೂ ಆಗಿ ಸುಮ್ಮನಾದುದು, ಕೃಷ್ಣ ಆನೆಯ ಸಹಾಸದೊಂದಿಗೆ ತನ್ನ ಸಾಹಸವನ್ನು ಪಡಿಯಿಟ್ಟು ನೋಡುವಂತೆ ಅದರ ಕೈಮ್ಮೆಗೆ ಅಂಏ " ಬೆಣ್ಣೆದೊಡೆದ ಬಟ್ಟಿನಂತೆ ನುಣುಚಿ ನುಸುಳಿ ಅದನ್ನು ನಾನಾವಿಧವಾಗಿ ಕಾಡಿ ಪೀಡಿಸಿದ್ದು ಇವೆಲ್ಲ ವೈಭವಯುತವಾದ ಗದ್ಯದಲ್ಲಿ ಬಂದಿದೆ. ಕೃಷ್ಣ ಆನೆಯನು ಕೊನೆಗೆ ಗ್ಹಾರಿಸಿದ್ದ್ಹ್ಹ:

ಒತ್ತಿದೊಡೊತ್ತಿ ಪತ್ತಿದೊಡೆ ಪ್ಪಿ ಪೊರಳ್ಚಿದೊಡಂ ಪೊರ್ಳ್ಚಿ ಕಾ

ಯ್ದೆತ್ತಿದೊಡೆತ್ತಿ ಕಿತ್ತಿದೊಡೆ ಕಿತ್ತಿದ ಕೊಂಬನೆ ಕೊಂಬನೆ ಕೂಂಕಿ ಕುತ್ತಿ ಕೂ

ರ್ಗತ್ತಿ ಗೆಯಂ ಕನಲ್ದೋಱೆಯಿನುರ್ಚವ ವೋಲ್ ಮೊಗದಿಂದಮುರ್ಚಿ ಮು

ನ್ನೆತ್ತಿ ಪಿಸುಳ್ದ ಮುತ್ತ್ಯನುಗೆ ಮುತ್ತಿಭಮಂ ಹರಿ ಪೋಯ್ದುರುಳ್ಚಿದಂ॥

ಅಂತೂ " ಕಮ್ಮಱನಂಬು ಕಮ್ಮಱಂಗೆಂಬಂತೆ ತನ್ನ ಕೊಂಬೆ ತನಗೆ ಘಾತಕಮಾಗೆ.. .. .. ಕಮಲಯಪೀಡನಂ ಕಮಲಯಾಪೀಡನಂ ಮಾಡಿ ಕೈರಭಮಲ್ಲನು " ಮಲ್ಲಸಿಂಗರಂ ಗೆಯ್ದಂತಗೆ ಗೆಲ್ಲಂಗೊಂಡು ಆ /ಆನೆಯನ್ನು ಇನ್ನೂ ಜೀವದಿಂದಿರುವಂತೆಯೇ ಹಂದಿಯನ್ನು ಎಳೆದುಕೊಂಡು ಹೊಗುವಂತೆ ಎಳೆದುಕೊಂಡು ಹೊಗಿ ಮಲ್ಲಗಳಾದ ನಡುವೆ ಅದನ್ನು ತಂದು ಹಾಕಿದನು. ಅಲ್ಲದೆ " ಹಾಸ್ಯಗರ್ಭಮಪ್ಪ ಗಂಡಗಾರ್ವದಿಂದ ನಿನ್ನ ಹಾಗೆ ಮ್ಯೆಯರಿಯದ ಅರಸ್ರು ಯಾರಿದ್ದರೆ? ಎಂಬ ಪೀಠಿಕೆ ಹಾಕಿಕೊಂಡು ಹೀಗೆಂದನು.

ಬಳವದ್ದಂತೆಯನಿಂತುಪೇಕ್ಷಿಸುವರೇ ಬಿರ್ದ್ದಿರ್ದುದೀ ದಂತಿ ಭೂ

ತಳದೊಳ್ ತೋಱುವನೆದು ತಡೆನಿದನಾಂ ದೇವಗ್ಬಿದೆನ್ನೋಲಗಂ

ಗಳವೋ ಗಾಳಿಯೊ ಸಪ್ತ ಮೋಗ್ರಮದವೋ ಕಾಷ್ಠಾಗ್ನಿಯೋ ಕೂಟಪಾ

ಕಳವೋ ತೋಱೆಸು ವೈದ್ಯರಂ ಕರೆದೆಲೇ ಕಂಸಾವನಿಪಾಳಕಾ ॥

ಈ ದಂತವೆಟಿತರ್ಪಲ್ಲಿ ಕಯ್ಯ ಬಾಯಿಗೆ ಬಂದುದಿದಂ ದೇವರವಧಾರಿಸಿ ಭಂಡಾರ ದೊಳಿರಿಸುವುದು ಎಂದು ಕೊಸರುಮತಾಡಿ ಅನೆಯನ್ನು ಮುಂದೆ ಎಳೆದಡುವಾಗ ಅದುಅ ಕೈಕಾಲು ವಡ್ಡಿದು ಸತ್ತಿತ್ತು. ಅಲ್ಲಿಗೂ ಕೃಷ್ಣ ಸುಮ್ಮನಿರದೆ " ಅಕ್ಕಟಾ ಸತ್ತುದೀಯಾನೆ ಆನೆಯದಡ್ಡದೆಗೆದಂತಿರ್ದ ಈ ಚಾಣೂರ ಮುಷ್ಟಿಕಾದಿಗಳಾಪ್ಪ ಲಲ್ಲರಿಂದಮೆಟಿದೀಡಾಡಿಂ ಪೊರ್ತಕ್ಕೆ ಪೊತ್ತುವೆಟಿದಪರ್ ಎಂದು ಬೇರೆ ಅಪಹಾಸ್ಯ ಮಾಡಿದನು . ಮಲ್ಲರ ಮುಖ ಚಿಕ್ಕದಯಿತು ಕಂಸನ ಗಂಡಗರ್ವ ಸೋರಿಹೊಯಿತು.

ಕಂಸ ಈಗ ಪ್ರತಿಭಟನೆಯ ಕೊನೆಯ ಘಟಕ್ಕೆ ಬಂದನು. ಕುಂಚವನ್ನು ಬೀಸಿದನು. ಚಾಣೂರ ಹೀಗೆ ಅಬ್ಬರಿಸಿ ನುಗ್ಗಿದ ; ಎಲೆಯಿತ್ತಿತ್ತಲಿದಿರ್ಚಿದಿರ್ಚು ಕಡುಕೆಯ್ ನೀಂ ಬೇಗವಣ್ಣಣ್ಮು ಮೆ

ಯ್ಗಲಿಯಗಾಗು ಕೊಲಲ್ಕೆ ನಿನ್ನ ಪವನಂ ಸುತ್ತಿತ್ತು ಮುತ್ತಿತ್ತು ಪೆ

ಣ್ಗೋಲೆಯೇನೀಗುವೆ ಪೋಗುಲುಣ್ಣದುರಿದ್ಯೆ ಮಣ್ಣಾಗಲೆಂದನ್ನ ತೋ

ಳ್ವಲೆಯೊಳ್ ಸಿಲ್ಕಿದೆಯಿದೆ ಸತ್ತೆಯೆನುತಂ ಚಾಣೂರನೊಟ್ಟೈಸಿದಂ ॥ (೮–೯೦)

ಇದಕ್ಕೆ ಮುಕುಂದ ಮುಗುಳ್ನಗೆ ನಕು, ಅಟ್ಟಿ ತಿಂಬ ದೈವಕ್ಕೆ ಪಾಟಿಂಬಟ್ಟೆ ಎಂದಾಡಿ, ಹೋರಾಟಕ್ಕೆ ವಿಜೃಂಭಿಸಿದ ಮುಂದೆ ವರ್ಣನೆ ಕಲ್ಪನೆಗಳು ಭವ್ಯತೆಯಲ್ಲಿ ವಿಹರಿಸುವುದನ್ನು ನಾವು ಕಾಣುತ್ತೆವೆ.

ವೈಕುಂಠನು ವಿಜಯಭುಜಾಸ್ಫಲನದಿಂದ  ಚಾಣೂರನೊಂದಿಗೆ ತೊಡರಿಕೊಂಡ ದಿಕ್ಕನ್ನೇ ಒಕ್ಕಲಿಕ್ಕಿ ಇಬ್ಬರೂ ಹೋರಿದರಂತೆ! ಆಗ ಯ್ಭಯವ್ಯೂಹಗಳಲ್ಲುಯೂ ಕಳವಳಾವೆದ್ದಿತು. ನೃಪಸಭೆಯಲ್ಲಿ ಕೋಲಾಹಲವಾಯಿತು. ಹಸ್ತಯುದ್ಧ ತೊಡಗಿದ್ದು ಹೀಗೆ :

ತಳಾಗಳ್ ಕೋಳ್ ಛಟಚ್ಛಟನೆ ಮಲ್ಲರ ತೋಳ್ಗಳ ಕೋಳ್ ಕರಂ ಘಳಿಲ್

ಘಳಿಲೆನೆ ಥರ್ರ್ರುಪೊಟ್ಟೆನೆ ಘನೋರುಯುಗಂಗಳ ಕೋಳ್ ಕರಂಗಳಂ

ಬಳಸುವ ಬೇಡಿಕೊಳ್ವ ಪಿಡಿಪೀವ ಮರಳ್ಚುವ ನುನ್ನುವಾಸೆಯೊಳ್

ಸೆಳೇವೆಡೆಸಾರ್ವ ಪೋರ್ವಳವಿಯೋಪಿದುದಿರ್ವರ ಹಸ್ತ ಯುದ್ದದೋಳ್ ॥

ಈ ಹಸ್ತಯುದ್ದವನುಲು ಇನ್ನೂ ಹತ್ತುಮಾತಿನಲ್ಲಿ ಹೊಸಹೊಸ ರೀತಿಯಲ್ಲಿ ಕವಿ ವರ್ಣಿಸಲು ಶಕ್ತನಗಿದ್ದಾನೆ. ಅಂಥ ವರ್ಣನೆಯೂ ಮುಂದೆ ಒಂದೊಂದಾಗಿ ಬರತೊಡಗುತ್ತದೆ. ಒಬ್ಬೊಬ್ಬರೂ ಅಖಾಡದಿಂದ ದೂರ ಹೊರಗಿಕ್ಕಿ ಹೋರುವಾಗ ಅವರ ಪಾದಾಹತಿಗೆ ಭೂಮಿ ಧೂಳಾಯಿತು ; ಹೊಸದೊಂದು ಮಲ್ಲಗಳವೇ ನಿರ್ಮಾಣವಾಯಿತು. ಬೆದರಿದ ಬೆರಗಿಂದ ಬೆನ್ನಿಕ್ಕಿದ ಕೃಷ್ಣ ಮರುಕ್ಷಣದಲ್ಲಿ ಸಮ್ಮುಖವಾಗಿ ನುಗ್ಗಿ ಅಬ್ಬರಿಸಿ ಅವನಿಯನ್ನೇತ್ತಿದ ಆದಿವರಾಹನಂತೆ ಚಣೂರನನ್ನು ಮೇಲಕ್ಕೆತ್ತಿದ. ಆ ಚಾಣೂರನಾದರೂ ಕೃಷ್ಣನ ತೋಳು ತೊಡೆಗಳು ತನ್ನ ಮುಷ್ಟಿಯ ಪ್ರಮಾಣಕ್ಕೆ ಮೀರುತ್ತಿರುವುದು ನೊಡಿ ಅವನ ನಡುವನ್ನು ಮುರಿಯುವುದಕ್ಕೆ ನೋಡಿದ ಆಗ ಆತನ್ ಶಕ್ತಿಗೆ " ಮರವನು ಕಿತ್ತ ಮುರರಿಗೆ ಚಾಣೂರನ ಮುಂಗೈರೋಮವನ್ನೂ ಅಲ್ಲಾಡಿಸಲು ಆಗಲಿಲ್ಲ .. ..  ಎಂದು  ಮುಂತಾಗಿ ಕವಿ ವರ್ಣಿಸುವಾಗ ಚಾಣೂರನ ಶಕ್ತಿಯೂ ಅಮಿತವಾದುದೆಂದು ಅಭಿಪ್ರಾಯವಾಗುತ್ತದೆ . ಕೃಷ್ಣ ತಾನು ಈ ಮೊದಲು ಸಾಹ್ಸವನ್ನು ಮೆರೆದಂತೆ ಈಗಲೂ ಮೆರೆದು , ಮುಂಗೈಬಲದಲ್ಲಿ ಬೆದಕಿ ನೋಡಿ, " ಅವಬರಿಯನುಂ ಪಿರಿಯನುಮಪುದನಱಿದು ನರರೂ ದೇವರೂ ಭೋವ್ಯೋಮಗಳಲ್ಲಿ ನಿಂತು ನೂಕಿ ನುಗ್ಗಾಗಿ ಈ ಕಳೆಗವನ್ನು ನೋಡುತ್ತರೆ ; ನಾಳೆಯೇನು ನೋಡುತ್ತರೆಯೇ ಚೇನ್ನಾಗಿ ನೊಡಲಿ ನೋಡುವವರ ನೇತ್ರಾನಂದವನ್ನು ಏಕೆ ನಂದಿಸಲಿ ಎಂಬುದಾಗಿ ಒಂದು ಜಾವ ಕಾಲ ಉಗ್ರವಾಗಿ ಚನೂರನೊಂದಿಗೆ  ಹೋರಿದ , ಆಮೇಲೆ ಸರ್ವಶಕ್ತಿಯನ್ನೂ ಪ್ರಕಟಿಸಿದಾಗ, ಆ ಮಲ್ಲನು ನೆರೆಳೊಂದಿಗೆ ಹೋರುವಂತೆ ಹೊರಿ ಬಳಾಲಿದ . ಕೃಷ್ಣ ಅವನನ್ನು ಸೆಳೆದ ಹಾಗೆಲ್ಲ ಅವನು ಸೆಳೇಯಲ್ಪಡುತ್ತಿದ್ದ . ಸೊಕ್ಕಿದಾನೆಯ ಕೈಯಲ್ಲಿ ಸಿಕ್ಕೆದ ತೊಗಲು ಬೊಂಬೆಯಂತಾದ , ಕೃಷ್ಣನ ಬಾಹುಕತ್ತರಿಗೆ  ಬಾಯಿಬಿಟ್ಟ ಗಾಯಕ್ಕೆ ಒಳಗಾದ.

ಕಂಸ ಇದನು ನೊಡಿ “ ಪಂದಿಗೆಙಗಿದ ನಾಯಂ ಹೆಕ್ಕಳಿಸುವಂತೆ ತನ್ನ ತೊಡೆಯನ್ನು ಅಪ್ಪಳಿಸಿ ಹುರಿದುಂಬಿಸಿದನು; ಕೃಷ್ಣನ ಮೇಲೆ ನುಗ್ಗಿದನಾದರೂ“ಅಲಗಿನ ಗರುಡನನ್ನು ಅಪ್ಪಿದ ಹಾಗೆ ಗರ್ಝರಿತದ ಉರಿಗೆ ಸಿಕ್ಕಿ ಲೋಹ ಕರಗಿದಂತಾದ.

ಒಡೆದುದು ಮುಷ್ಠಿಯಂ ಪಿಡಿದ ಕಯ್ಯ ತಳಂ ಕಡುಸೋಂಕು ಸೋಂಕಿ ಮೆ
ಯ್ಯಡಗಡಗಾಯ್ತು ಡೊಕ್ಕರಿಸಿ ಕಂಸನ ಮಲ್ಲನ ಕಕ್ಷವಕ್ಷದೆ
ಲ್ವುಡಿದವು ಒಯ್ಯುತುಂ ತುಡುಕಿ ತುಟ್ಟಿಸಿ ಕತ್ತರಿವಾಣಿಯಲ್ಲಿ ಕೆ
ಯ್ಯದ್ದುಕಿದವೋಲ್ ಬೆರಲ್ಪಱಿದುವಾ ಹರಿ ಪೊರಿಸೆ ಮೆಯ್ಯ ಶಕ್ತಿಯಂ ॥

ನೇಮಿಚಂದ್ರ ಕವಿ ಕೃಷ್ಣ–ಚಾಣೂರಮಲ್ಲರ್ ಅ ದ್ವಂದ್ವಯುದ್ಧವನ್ನು ಸವಿಸ್ತವಾಗಿಯೇ ವರ್ಣಿಸಿ ತನಗೆ ಆ ವರ್ಣಾನೆಯಲ್ಲಿ ಕೌಶಲವನ್ನು ತೋರಿದ್ದಾನೆ ; ಜೊತೆಗೆ ಆ ವರ್ಣಾನೆಗೆ ಭವ್ಯತಯ ಸ್ಪರ್ಶ ಮಾಡಿಸಿದ್ದಾನೆ . ನೆಲವೂ ಸಾಅಗರವ್ಯ ಸಂಘಟ್ಟಿಸಿ ಕಡೆಗೆ ನೆಲವನ್ನು ಸಾಗರ ಆಕ್ರಮಿಸಿ ನುಂಗುವಂತೆ ಚಾಣೂರನನ್ನು ಕೃಷ್ಣ ಆಕ್ರಮಿಸಿದನೆಂದು ಕವಿ ಸೊಗಸಾಗಿ ಹೇಳಿದ್ದನೆ. “ ಬಿನ್ನಾಣಂ ಬಿನ್ನಾಗಾಯ್ತು ಎನ್ನಳಾವು ಆಳವಟಿದತ್ತು ಎನ್ನ ಬಲ್ಪು ಎಯ್ದೆ ಮೇಲ್ವಾಯ್ತು ಎಂದುಕೊಂಡು “ ಇನ್ನೇವೆಂ ಸವೆನ್ ಎಂದು ಅಳಲಿ ಬಳಾಲುವಂತೆ ಚಾನೂರನನ್ನು “ ಭೂತಳಕ್ಕಂ ಬನ್ನಕ್ಕಂ ತಂದ ಮುಕುಂದನು ಕಂಸನ ಮನಸ್ಸು ಕುಗ್ಗಿ ಕುಸಿಯುವಂತೆ ಮಾಡಿದನು. ಈ ಘಟ್ಟದಲ್ಲಿ ಮುಷ್ಟಿಯನ್ನು ಬಿಗಿಗೊಳಿಸಿ ಮುಷ್ಟಿಕನು ಕೆರಳಿ ಕೃಷ್ಣನ ಮೇಲೆ ನುಗ್ಗಿದನು. ಆದರೆ ಕೃಷ್ಣನು ಚಣೂರ ಮುಷ್ಟಿಕರನ್ನು ಒಂದೊಂದು ಕೈಯಲ್ಲಿ ಹಿಡಿದುಕೊಂಡು, ಬೊಂಬೆಗಳನ್ನಾಡಿಸುವನ ಹಾಗೆ ಇಬ್ಬರನ್ನೂ ತೆಲೆತೆಲೆ ಢಿಕ್ಕಿ ಹೊಡೆಸಿದನು. ಆ ಚಿತ್ರವಿದು :

ಎರಡುಂ ಕಯ್ಯಿಂ ಕೊಂಡಿ
ರ್ವರುಮಂ ಬೊಂಬೆಗಲನಾಡಿಪವನವೊಲವನಿ
ರ್ವ ತೆಲೆಯಂ ತಟಿಸಿದಂ
ಬಿರಿವಿನೆಗಂ ತಾಳಾಕಯ್ಗಳಂ ತಟಿಪವೋಳ್ ॥

ಮಸ್ತಿಷ್ಕ ಮಲ್ಲರಂಗದಲ್ಲಿ ಪುಷ್ಪಾಂಜಲಿಮಾಡಿದಂತೆ ಚೆಲ್ಲಿ ಸೂಸಿತು; ಜಿರ್ಕೊಳವಿಯಿಂದ ಓಕುಳಿ ಚಿಮ್ಮುವಂತೆ ಮೂಗು ಬಾಯಿಗಳಿಂದ ಬಿಸಿರಕ್ತ ಚಿಮ್ಮುತು ಇಪ್ಪುರಿಗೊಂಡ ಇಬ್ಬರ ಜೋಡಿಹೆಣವನ್ನುನೋಡಿಇತರ ಮಲ್ಲರೆಲ್ಲ ಆವೇಶಗೊಂಡು ಕೃಷ್ಣನ ಮೇಲೆ ನುಗ್ಗಿದರು ಮರ್ಕಟಕಟಕ ನೀಲಾಚಲಕ್ಕೆ ಮುತ್ತಿದಂತಾಯಿತು. ಶುಲವೇರಲು ತವಕಿಸಿವಿದ್ದಂತೆ ವಿದ್ದಮಲ್ಲರ ಮೈಗಳೆಲ್ಲ

ನುಗ್ಗುನುಗ್ಗಾಗುವ ಹಾಗೆ ಕೃಷ್ಣನುಗಿರಗಿರನೆ ಸುತ್ತಿದನು. ಅವರೆಲ್ಲ ಮುದ್ದಾನೆಯೆಂದ ಉದುರಿಬಿಳುವ ಹಾಗೆ ದಿಕ್ಕುದಿಕ್ಕಿಗೆ ಚೆಲ್ಲಾಪಿಲ್ಲಿಯಾದರು. ಅವನು ಭುಜದಂಡದ ಚಲನಗತಿಗೆ ಸಿಕಿ ಸುತ್ತತ ಅವರು ತೊಳಿಗೆ ಅಂಟಿದಂತಿರಬೇಕಾದರೆ , ಕೃಷ್ಣ ಚಕ್ರದಗಿರಿಗಿಟ್ಟ್ಲೆಯೋ ಎನ್ನುವಂತೆ ತೋರಿದನು. ಅಲ್ಲದೆ ಮತ್ತೂ ಮೇಲೆ  ಬಿದ್ದ ಮಲ್ಲರನ್ನು ಆನೆ ಮೆಟ್ಟಿದಂತೆ , ಅವೆಡೆಯಂ ಪಿಡಿದೊಂಡಂ ಪಿಡಿದೆಡೆಯೆ ಗಾಯಮಾಗೆ ಬಳೆಯ ಪೇಱಿನನೆ ಮೆಟ್ಟಿದಂತೆ ಎಲುವೆಲ್ಲ ನುರ್ಗುನುರ್ಗಾಗೆ ಮೆಯ್ಯತೊವಲಾಗೆ .. .. ಕೃಷ್ಣ ವಿಜೃಂಭಿಸಿ ತುಳಿದಿಕ್ಕಿದನು. ಕಂಸನ ಪಕ್ಷದ ಚತುರಂಗವೇ ಈಗ ಕೃಷ್ಣನ ಮೇಲೆ ಕವಿದು ಬಿದ್ದಿತು. ಆದರೆ ಇದನ್ನು ನಿರೀಕ್ಷಿಸಿಯೇ ಇದ್ದ ಬಲದೇವ ವಸುದೇವರು ತಾವೂ ಕೈಬೀಸಿ  ತಮ್ಮ ಸೈನ್ಯವನ್ನು ನುಗ್ಗಿಸಿದರು. ನೆತ್ತರುಗಡಲು ಹರಿದು ಯುದ್ಧರಂಗ ಹೆಣಮಯವಾಯಿತು. ಕೃಷ್ಣ ಇದನ್ನು ಕಣ್ಣಿಂದ ನೋಡಲಾರದೆ ಹೋದನು. ಕ್ರೋಧ ಅಪಮಾನಗಳಿಂದ ಅವನ ಮೈಯುರಿಯಿತು. ಅಭಿನವ ನಾರಸಿಂಹನ ಅಡಂಬರದಿಂದ ಭಯಂಕರಾಕರನಾಗಿ ಕಂಸನ  ಮೇಲೆ ತಾನೇ ನುಗ್ಗಿ ನರಸಿಂಹನು ಹಿರಣ್ಯಕಶಿಪುವನ್ನು ಕೊಂದಿಕ್ಕಿದಂತೆ ಅವನನ್ನು ಕೊಂದಿಕ್ಕಿದನು. “ ನಖಾದಿಂ ಕರುಳ್ಗಳಂ ತೋಡಿ  ಪಿಸುಳ್ದು ಸೀೞ್ದು ಬಿಸುಟಂ ಕಲಿಕಂಸನನಬ್ಜಲೋಚನಂ ,ದಿಟ ಆದರೇನು?  ಸೀೞ್ದೋಡಾಯುಮದಂ ಕೈಕೊಳ್ಳದೆ ಕೊಳ್ಳೆ ನಾರ್ದು  ,ಮುರಿದೆರ್ದು  ಖೇಟಕದಿಂ ಕರುಳಂ ತರ್ಕೈಸಿ ಕತ್ತಿಯನ್ನು ಹಿಡಿದು ಕಂಸನು ಕೃಷ್ಣನ ಮೇಲೆ ಬಿದ್ದನು ! ಆತನ ಆ ಕಲಿತನವನ್ನು ನೋಡಿ ಕೃಷ್ಣನಿಗೆ ಆಶ್ಚರ್ಯವೇ ಆಯಿತು ಆದರೆ ಅಕ್ಷಣವೇ ಎಡಗೈಯಲ್ಲಿ ಕತ್ತಿಹಿಡಿದು ಕಂಸನ ತೆಲೆಯನ್ನು ತಱಗೆಲೆಯನೋರಸುವಂತೊರಸಿ ಬಿಸಾಡಿದನು. ಆಗ ಕಂಸನ ಸ್ಥಿತಿ :

ಕೆಡೆಕೆಡೆಯಂದರಮಗನೊದೆ

ದೆಡೆಗಾಲೊಳ್ ತೊಡೆರ್ದು ಕರುಳೊಳೇನಿರ್ದ,ಕ

ರ್ದಡಿಗಂ ಗೋವಳನಿಕ್ಕಿದ

ತೊಡೆರೊಳ್ ಮಿಗೆ ಕೋದೆಟಿಲ್ಪ ಪಾಪೆಯ ತಿಱದಿಂ ॥ (೮-೧೧೮ )

ಕವಿ ಕಂಸವಿಧ್ವಂಸನದ ಬಗೆಗೆ ತೊರುವ ಪ್ರತಿಕ್ರಿಯೆಯಿದು

ಕ್ಷಿತಿಗೊರ್ವನೆ  ದುರ್ಜನನೊಂ

ದತಿವೇಗದೆ ಸತ್ತು ಮಾಡುವುಪಕಾರಮನ

ಪ್ರತಿಮರ್ ಸಜ್ಜನರಾಚಂ

ದ್ರುತಾರಕಂ ಬರ್ದು ಮಾಡಲೇನಾರ್ತಪರೇ ॥ (೮– ೧೧೯)

ಹೀಗೆ ಮಲ್ಲಾಮಲ್ಲಿಯಾಗಿ ಹೋರಿದ ಮಲ್ಲರನ್ನೂ ಮೇಲೆಬಿದ್ದ ಕಂಸನನ್ನೂ ಕೃಷ್ಣನು ಒಂದೆ ಕಯ್ಯೊಳೆ ಕೂಸನಿಕ್ಕುವಂತೆ ಇಕ್ಕಲು ಪುಷ್ಪವೃಷ್ಟಿಯಾಯಿತು. ಕಲಿಕಂಸಧ್ವಂಸಕಂ ತಾಳ್ದಿದಂ ಕಂದನ ಕ್ರೀಡೆಯನಾಡಿ ನಿತ್ಯಜಯಂ, ಶ್ರೀವೀರನಾರಯಣಂ.

ಕೃಷ್ಣನ ಅಲೌಕಿಕ ಮಹಿಮಾವರ್ಣನೆ ಜೈನಪರವಾದ ಧೋರಣೆಯಿಂದ ಕೂಡಿರದೆ, ವೈಷ್ಣವಪರ ಧೋರಣೆಯಿಂದ ಕೂಡಿದ್ದು ಭಾಗವತ ವಿಷ್ಣುಪುರಾಣಗಳ ಹರಿಮಾಹತ್ಮ್ಯದ ದೃಷ್ಟಿಯೇ ಅಲ್ಲಿ ಉತ್ಕಟವಾಗಿ ಕಂಡುಬಂದಿದೆ. ರುದ್ರಭಟ್ಟನ 'ಜಗನ್ನಾಥವಿಜಯ ದ ಸದೃಶಸಂದರ್ಭಗಳೊಂದಿಗೆ ಹೋಲಿಸಿ ನೋಡಿದರೆ, ಅದೊಂದು ಬಗೆಯ ಸ್ಪರ್ಧೆಯಿಂದ ಕವಿ ನೇಮಿಚಂದ್ರ ತನ್ನ ಕೃತಿಭಾಗಗಳಾನ್ನು ಬರೆದಿರುವಂತೆ ತೋರುತ್ತದೆ. ನೇಮಿಚಂದ್ರ ಜೈನಕವಿಯಆಗಿಯೂ ಈ ಬಗೆಯ ವೈಷ್ಣವದೃಷ್ಟಿಯನ್ನು ತೋರಿ ಭವ್ಯವಾಗಿ ಈ ಭಾಗಗಳನ್ನು ನಿರ್ವಹಿಸಿರುವುದು ಅತಿಶಯ ಕುತೂಹಲಕರವಾಗಿಯೂ ಶ್ಲಾಘ್ಯವಾಗಿಯೂ ಇದೆಯೆಂದು ಹೇಳಾಬಹುದು ಅವನ ಕಾವ್ಯಪ್ರತಿಭೆಯ ಉತ್ಕೃಷ್ಟಸ್ಥಾನಗಳಲ್ಲಿ , ಬಲಿವಾಮನೋಪಾಖ್ಯನ ಪ್ರಸಂಗದ ತರುವಾಯ , ಕಂಸಚಣೂರಮರ್ದನದ ಈ ಕೃತಿಭಾಗವೇ ಗಣ್ಯವಾಗುವುದು ನಿಶ್ಚಯ; ಪ್ರಾಚೀನ ಕನ್ನಡ ಕಾವ್ಯದ ಕೆಲವೇ ಭವ್ಯತೆಯ ಕಾವ್ಯಚಿತ್ರಗಳಲ್ಲಿ ಸೇರಿರುವುದೂ ಸುವಿಡಿತ.

ಅರ್ಧನೇಮಿ ಪುರಾಣ (ನೇಮಿನಾಥ ಪುರಾಣ)

ವಿಮರ್ಶಸಾಹಿತ್ಯ

ಪರಿಷ್ಕರಣಗಾಳು:

ಸಂ ಮುಂ ಆ ರ್ ಆಮಾನುಜಯ್ಯಾಂಗಾರ್ ಕರ್ಣಾಟಕ ಕಾವ್ಯಕಲಾನಿಧಿ , ಮೈಸೂರು, ೧೯*೧೪.

ಸಂ. ಬಿ.ಎಸ್. ಸಣ್ಣಯ್ಯ ಸಾಧನ ಸಾಹಿತ್ಯ ಮಂದಿರ ಮೈಸೂರು, ೧೯೬೧.

ಸಂ. ಬಿ, ಎಸ್. ಕುಲಕರ್ಣಿ , ಕರ್ಣಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೮.

ಬರಹಗಳು :

ಅನಂತರಂಗಾಚಾರ್, ಎನ್

ನೇಮಿಚಂದ್ರ , ಪ್ರಚಾರ ಪುಸ್ತಕ ಮಾಲೆ ಮೈಸೂರು ವಿಶ್ವವಿದ್ಯಾಲಯ ೧೯೫೫.

ಕುಲಕರ್ಣಿ ಬಿ. ಎಸ್.

ನೇಮಿಚಂದ್ರ, ಕರ್ನಾಟಕ ವಿಶ್ವವಿದ್ಯಲಯ ಧಾರವಾಡ ೧೯೬೯

ನೇಮಿಚಂದ್ರ ಪುರಾಣ , ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಪ್ರಸಾರಾಂಗ ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯ , ಬೆಂಗಳೂರು, ಸಂಪುಟ ೩,೧೯೭೬, ಪು. ೪೩೬-೪೧

ನೇಮಿಚಂದ್ರ ಪುರಾಣದ ಶ್ರೀಕೃಷ್ಣ, ಕರ್ನಾಟಕ ಭಾರತಿ ,ಧಾರವಾಡ, ೨-೨ ಜೀವನ, ಬೆಂಗಳೂರು ೨೯-೯.

ಜವರೇಗೌಡ ದೇ

ನೇಮಿನಾಥ ಪುರಾಣ (ಲೀಲಾವತಿ ಪ್ರಬಂಧ) ಶಾರದಾ ಮಂದಿರ ಮೈಸೂರು, ೧೯೬೬ ಕವಿ-ಕಾವ್ಯ ವಿಮರ್ಶೆ, ಪು. ಚಟಟಟಿಟಿ-ಚಟಿಫಿ ೩.)

ದೇಶಕಾಚಾರ್ಯ ಹೆಮ್ಮಿಗೆ

ನೇಮಿಚಂದ್ರನ ಕೆಲವು ಪದ್ಯಗಳು, ಪ್ರಬುದ್ಧ ಕರ್ನಾಟಕ , ೪೪-೧ ಪು. ೧೨೩-೨೮.

ನರಸಿಂಹಾಚಾರ್ , ಡಿ ಎಲ್.

ಅರ್ಧನೇಮಿಯ ಒಂದು ಪದ್ಯ-ಟಿಪ್ಪಣಿ ಪ್ರಬುದ್ಧ ಕರ್ನಾಟಕ ೪೯-೧, ಪು. ೧೫೩-೧೫೫ ;ಪೀಠಿಕೆಗಳು, ಲೇಖನಗಳು, ಡಿ, ವಿ.ಕೆ. ಮೂರ್ತಿ , ಮೈಸೂರು ೧೯೭೧ , ಪು. ೯೨೬-೨೮.

ನಾಗರಾಜಯ್ಯ ಹಂಪ

ಸ್. ನೇಮಿನಾಥ ಪುರಾಣ (ಸಂ,ಪೊ, ಸೀತಾರಾಮಯ್ಯ, ನೇಮಿಚಂದ್ರ ; ಐಬಿಎಚ್ ಪ್ರಕಾಶನ, ಬೆಂಗಳೂರು -೯,೧೯೮೧. ಪು. ೮೭-೧೪೨

ನೇಮಿಚಂದ್ರ ಹಾಗೂ ನೇಮಿನಾಥ್ಯ ಪುರಾಣಗಳು, ' ಗುರುದೇವ

ನೇಮಿನಾಥ ಪುರಾಣದಲ್ಲಿ ವಿಂಧ್ಯಕ- ವಾಗುರೆ , ಸನ್ಮತಿ

ನೇಮಿಚಂದ್ರನ ನೂತನ ಕೃತಿಗಳು, 'ವಿವೇಕಾಭ್ಯುದಯ

ನಾರಾಯಣ, ಪಿ. ವಿ

ನೇಮಿನಾಥ ಪುರಾಣ, ಚಂಪೂ ಕವಿಗಳು, ಸಾಮನ್ಯನಿಗೆ ಸಾಹಿತ್ಯಚರಿತ್ರೆ ಸಂ. ೪ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ೧೯೭೫, ಪು ೧೩೧.೩೫

ಪರಮಶಿವ್ಯ, ಜೀ, ಶಂ

ನೇಮಿಚಂದ್ರನ ವಾಮನಾವತಾರದ ಕಲ್ಪನೆ , ತಾಯಿನಾಡು , ದೀಪಾವಳಿ ವಿಶೇಷ ಸಂಚಿಕೆ, ೧೯೬೪ , ಪು. ೬೫

ರಂಗನಾಥ ಶರ್ಮಾ , ಎನ್

ನೇಮಿನಾಥ ಪುರಾಣದಲ್ಲಿ ಪರುಷ್ಕರಣ, ಲೋಚನ ೩-೨- ೧೯೮೫

ವೆಂಕಟಸುಬ್ಬಯ್ಯ, ಜಿ

ನೇಮಿಚಂದ್ರ , ಕನ್ನಡ ಸಾಹಿತ್ಯ ಪರಿತ್ಪಿತ್ರಿಕೆ  ೪೪-೧, ೧೯೫೯.

ನೇಮಿಚಂದ್ರ  ರುದ್ರಭಟ್ಟ ಒಂದು ಅಧ್ಯಯನ ಸಮಗ್ರ ಕನ್ನಡ ಸಾಹಿತ್ಯಚರಿತ್ರೆ , ಸಂ. ೩, ಬೆಂಗಳೂರು ವಿ. ವಿ., ಬೆಂಗಳೂರು, ೧೯೭೬ ಪು. ೪೭೨   ೭೯

ವೆಂಕಟಾಚಲ ಶಾಸ್ತ್ರಿ ಟಿ, ವಿ

ಅರ್ಧನೇಮೀಪುರಾಣದ ಕೆಲವು ಪಾಠಗಳ ವಿಚಾರ ' ಶಬ್ದಾರ್ಥ ವಿಹಾರ, ಅಪರ್ಣಾ ಪ್ರಕಶನ, ೧೨೯೭೯ ಪು. ೧೦೯-೨೭ ; ಶಾಸ್ತ್ರೀ ಯ ಸಂ ೧೯೯೯, ಸಪ್ನ ಬುಕ್ ಹೌಸ್, ಗಾಂಧೀನಗರ , ಬೆಂಗಳೂರು ೫೬೦೦೦೯ ಪು. ೧೧೫-೩೧

ಅರ್ಧನೇಮಿ ಪುರಾಣ ದ ತ್ರಿಪದಿಯ  (೩-೩೮/೩೯) ಪಾಠ ಮತ್ತು ಅರ್ಥ ಶಾಸ್ತ್ರೀಯ ಸಂ. ೧. ಸಪ್ನ ಬುಕ್ ಹೌಸ್ ಬೆಂಗಳೂರು- ೯ ೧೯೯೯, ಪು. ೧೩೨- ೩೪.

ಕನ್ನಡ  ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ ಪ್ರಸಾರಾಂಗ , ಮೈಸೂರು ವಿಶ್ವವಿದ್ಯನಿಲಯ ಮೈಸೂರು - ೫೭೦೦೦೬ ೧೯೭೩.

ನೇಮಿನಾಥ ಪುರಾಣ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ೪- ಕನ್ನಡ ಅಧ್ಯಯನ ಸಂಸ್ಥೆ , ಮೈಸೂರು, ವಿಶ್ವವಿದಾನಿಲಯ ಮೈಸೂರು- ೫೭೦೦೦೬, ೧೯೭೭, ಪು. ೧೦೦೩-೩೧

ಸೀತಾರಾಮಯ್ಯ, ವಿ

ಅರ್ಧನೇಮಿಪುರಾಣದ ಸಮೀಕ್ಷೆ 'ನೇಮಿಚಂದ್ರ ಐವಿಎಚ್ ಪ್ರಕಶನ, ಬೆಂಗಳೂರು - ೫೬೦೦೦೯ ೧೯೮೧, ಪು. ೧೬೧-೬೫.